ಸಂಪುಟ: 06 ಸಂಚಿಕೆ: 35 ಪುಟಗಳು: 08 ಭಾನುವಾರ 19 ಏಪ್ರಿಲ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಅಸಹಿಷ್ಣುತೆಯು ಹಿಂಸೆಯ ಒಂದು ರೂಪ ಮತ್ತು ನಿಜವಾದ ಪ್ರಜಾಪ್ರಭುತ್ವದ ಬೆಳವಣಿಗೆಗೆ ಅದು ಅಡ್ಡಿಯಾಗಿರುತ್ತದೆ.

## ಶಿಸ್ತುಕ್ರಮಕ್ಕೂ, ಉಪ ಚುನಾವಣಾ ಫಲಿತಾಂಶಕ್ಕೂ ಸಂಬಂಧವಿಲ್ಲ

• ಉದಯವಾಹಿನಿ, ಮಂಗಳೂರು

ದಾವಣಗೆರೆ ದಕ್ಷಿಣ ವಿಧಾನ ಸಭಾ ಕ್ಷೇತ್ರದ ಉಪ ಚುನಾವಣೆಯ ಫಲಿತಾಂಶಕ್ಕೂ ಪಕ್ಷ ವಿರೋಧಿ ಚಟುವಟಿಕೆ ಸಂಬಂಧ ಕೈಗೊಂಡ ಶಿಸ್ತು ಕ್ರಮಗಳಿಗೂ ಯಾವುದೇ ಸಂಬಂಧ ಇಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಹೇಳಿದರು. 'ಚುನಾವಣೆ ಫಲಿತಾಂಶ ಏನಾಗುತ್ತದೆ ಎಂದು ಯಾರಿಗೂ ಗೊತ್ತಿಲ್ಲ. ಯಾರು ಗೆಲ್ಲುತ್ತಾರೆ ಎಂದು ಈಗಲೇ ಹೇಳಲು ನಾನು ಜ್ಯೋತಿಷಿ ಅಲ್ಲ' ಎಂದರು. 'ವಸತಿ ಸಚಿವ ಬಿ.ಜೆಡ್. ಜಮೀರ್ ಅಹಮ್ಮದ್ ಖಾನ್ ಅವನ್ನು ಸಚಿವ ಸ್ಥಾನದಿಂದ ಇಳಿಸುವುದು ಕೇವಲ ಊಹಾಪೋಹ. ಅವರು ಪಕ್ಷದ ಹಿರಿಯ ಮುಖಂಡರು. ಪಕ್ಷಕ್ಕೆ ಪ್ರಾಮಾಣಿಕವಾಗಿ ದುಡಿಯುತ್ತಿದ್ದಾರೆ. ಆದರೆ ಕೆಲವರು ಅದಕ್ಕೆ ಬಣ್ಣ ಕಟ್ಟಲು ಹೊರಟಿರಬಹುದು. ಈ ವಿಚಾರಗಳು ಪಕ್ಷದ ಚೌಕಟ್ಟಿನಲ್ಲಿ ಚರ್ಚೆ ಆಗುತ್ತವೆ' ಎಂದರು. 'ಸಿದ್ದರಾಮಯ್ಯ ಅವರ ಬೆಂಬಲಿಗರನ್ನು ಗುರಿ ಮಾಡಲಾಗುತ್ತಿದೆ' ಎಂದು ರಾಜಣ್ಣ ನೀಡಿದ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಈ ವಿಚಾರ ನನಗೆ ಗೊತ್ತಿಲ್ಲ. ಅದನ್ನು ರಾಜಣ್ಣ ಅವರ ಬಳಿಯೇ ಕೇಳಬೇಕು. ಇವೆಲ್ಲ ಪಕ್ಷದ ಶಿಸ್ತಿನ ವಿಚಾರ. ಕಾಂಗ್ರೆಸ್‌ನಲ್ಲಿ ಯಾರನ್ನೂ ಗುರಿಯನ್ನಾಗಿಸುವ ಪ್ರಶ್ನೆಯೇ ಇಲ್ಲ. ಕಾಂಗ್ರೆಸ್‌ನಲ್ಲಿ ಎಲ್ಲಾ ಧರ್ಮದವರು ಒಂದೇ. ತಪ್ಪಾಗಿದ್ದರೆ ಕ್ರಮ ತೆಗೆದುಕೊಳ್ಳುತ್ತೇವೆ' ಎಂದರು.

## ತಾಂತ್ರಿಕ ಶಿಕ್ಷಣ | ಕಂಪ್ಯೂಟರ್ ಸೈನ್ಸ್‌ಗೆ ಮಿತಿ: ತಜ್ಞರ ಸಮಿತಿ ಶಿಫಾರಸು

• ಉದಯವಾಹಿನಿ, ಬೆಂಗಳೂರು

ತಾಂತ್ರಿಕ ಶಿಕ್ಷಣದಲ್ಲಿ ಕಂಪ್ಯೂಟರ್ ಸೈನ್ಸ್ ಆಧಾರಿತ ಕೋರ್ಸ್‌ಗಳ ಪ್ರವೇಶಕ್ಕೆ ಮಿತಿ ನಿಗದಿ ಮಾಡಬೇಕು ಎಂದು ಬೆಂಗಳೂರು ಐಐಟಿ ಮಾಜಿ ನಿರ್ದೇಶಕ ಎಸ್.ಸಡಗೋಪನ್ ಅಧ್ಯಕ್ಷತೆಯ ತಜ್ಞರ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಸಮಿತಿಯು ತನ್ನ ವರದಿಯನ್ನು ಶುಕ್ರವಾರ ಉನ್ನತ ಶಿಕ್ಷಣ ಇಲಾಖೆಗೆ ಸಲ್ಲಿಸಿದೆ. ಯಾವುದೇ ಶಿಕ್ಷಣ ಸಂಸ್ಥೆ ಕಂಪ್ಯೂಟರ್ ಸೈನ್ಸ್ ಒಳಗೊಂಡ ಐದು ಕೋರ್ಸ್‌ಗಳು ಹಾಗೂ ಒಟ್ಟು 900 ಸೀಟುಗಳನ್ನು ಮೀರಬಾರದು ಎಂದು ಹೇಳಿದೆ.

ಅತಿ ಹೆಚ್ಚಿನ ಸಂಖ್ಯೆಯಲ್ಲಿ ಒಂದೇ ಕೋರ್ಸ್‌ಗೆ ಪ್ರವೇಶ ಪಡೆಯುವುದನ್ನು ತಡೆಯಲು ನಿಯಂತ್ರಣ ಹೇರಬೇಕು. ಇಲ್ಲದಿದ್ದರೆ ತಾಂತ್ರಿಕ ಶಿಕ್ಷಣದಲ್ಲಿ ಸೃಷ್ಟಿಯಾಗಿರುವ ಕಂಪ್ಯೂಟರ್ ಸೈನ್ಸ್ ಬೇಡಿಕೆಯು ಭವಿಷ್ಯದಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಉದ್ಯೋಗದ ಅವಕಾಶಗಳ ಮೇಲೆ ಗಂಭೀರ ಪರಿಣಾಮ ಬೀರಬಹುದು ಎಂದು ಸಮಿತಿ ಹೇಳಿದೆ. ಕಂಪ್ಯೂಟರ್ ಸೈನ್ಸ್ ಕೋರ್ಸ್‌ಗಳಿಗೆ ಮಿತಿ ಹಾಕುವ ಜತೆಗೆ ಮೆಕ್ಯಾನಿಕಲ್, ಸಿವಿಲ್, ಆಟೋಮೊಬೈಲ್ ಮತ್ತಿತರ ವಿಭಾಗಗಳಲ್ಲೂ ಕೃತಕ ಬುದ್ಧಿಮತ್ತೆ ಇತರೆ ಕೋರ್ಸ್‌ಗಳನ್ನು ಸೇರ್ಪಡೆ ಮಾಡಬೇಕು. ಈ ನಿಯಮಗಳನ್ನು ಖಾಸಗಿ ವಿಶ್ವವಿದ್ಯಾಲಯಗಳು, ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಲ್ಲೂ ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ಶಿಫಾರಸು ಮಾಡಿದೆ.

## ಕರ್ನಾಟಕ ಲೋಕಾಯುಕ್ತ ದೇಶಕ್ಕೇ ಮಾದರಿ: ನ್ಯಾ. ಸೂರ್ಯಕಾಂತ್

• ಉದಯವಾಹಿನಿ, ಬೆಂಗಳೂರು

'ಭ್ರಷ್ಟಾಚಾರ ಮುಕ್ತ ಆಡಳಿತ ಮತ್ತು ಸಾಮಾನ್ಯ ಜನರ ಹಕ್ಕುಗಳ ರಕ್ಷಣೆಯಲ್ಲಿ ಕರ್ನಾಟಕ ಲೋಕಾಯುಕ್ತ ಸಂಸ್ಥೆಯು ದೇಶಕ್ಕೇ ಮಾದರಿ' ಎಂದು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹೇಳಿದರು. ಲೋಕಾಯುಕ್ತ ಸಂಸ್ಥೆಯು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ 'ಕರ್ನಾಟಕ ಲೋಕಾಯುಕ್ತದ 4 ದಶಕಗಳ ಪಯಣ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. 'ಸರ್ಕಾರದ ಸೇವೆ ಮತ್ತು ಆಡಳಿತದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವಲ್ಲಿ, ಅಧಿಕಾರ ದುರುಪಯೋಗ ಮತ್ತು ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ಕರ್ನಾಟಕ ಲೋಕಾಯುಕ್ತವು ಮಹತ್ವದ ಪಾತ್ರವಹಿಸಿದೆ. ಸಂಸ್ಥೆಯು 40 ವರ್ಷಗಳಿಂದಲೂ ಈ ಕೆಲಸವನ್ನು ಮಾಡಿಕೊಂಡು ಬರುತ್ತಿದೆ' ಎಂದರು.

## ಶತಮಾನ ಕಂಡ ಶಾಲೆಗಳ ಕುರಿತು ವರದಿ: ಬಲವರ್ಧನೆಗೆ 31 ಶಿಫಾರಸು

• ಉದಯವಾಹಿನಿ, ಬೆಂಗಳೂರು

ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಶತಮಾನ ಕಂಡ ಶಾಲೆಗಳ ಕುರಿತು ಸಿದ್ಧಪಡಿಸಿದ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದೆ. ಇಂತಹ 3,222 ಶಾಲೆಗಳ ಉಳಿವು ಹಾಗೂ ಬಲವರ್ಧನೆಗೆ 31 ಶಿಫಾರಸು ಮಾಡಿದೆ. ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು 206 ಪುಟಗಳಿರುವ ವರದಿಯನ್ನು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಸಲ್ಲಿಸಿದರು. ಕೆ.ಪಿ. ಸುರೇಶ್ ಅವರು ಈ ವರದಿ ಸಿದ್ಧಪಡಿಸಿದ್ದಾರೆ. 'ಶತಮಾನ ಕಂಡ ಶಾಲೆಗಳನ್ನು ಪಾರಂಪರಿಕ ಶಾಲೆಗಳೆಂದು ರಾಜ್ಯ ಸರ್ಕಾರ ಘೋಷಿಸಬೇಕು. ಅವುಗಳಲ್ಲಿ ನಾಡಿನ ಹಲವಾರು ಮಹನೀಯರು ಓದಿದ್ದಾರೆ.

ಮಿರ್ಜಾ ಇಸ್ಮಾಯಿಲ್, ಸರ್.ಎಂ. ವಿಶ್ವೇಶ್ವರಯ್ಯ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಡಿ.ವಿ.ಗುಂಡಪ್ಪ, ಮೊಳಹಳ್ಳಿ ಶಿವರಾವ್, ಕಾರ್ನಾಡ್ ಸದಾಶಿವರಾವ್, ದಿನಕರ ದೇಸಾಯಿ, ಗೌರೀಶ್ ಕಾಯ್ಕಿಣಿ, ಆಲೂರು ವೆಂಕಟರಾಯರು, ದ.ರಾ.ಬೇಂದ್ರೆ, ಕುವೆಂಪು, ಶಾಂತವೇರಿ ಗೋಪಾಲಗೌಡ, ಜಿ.ಎಸ್. ಶಿವರುದ್ರಪ್ಪ, ಪ್ರೊ. ಎಂ.ಸಿ. ನಂಜುಂಡಸ್ವಾಮಿ, ಜೀ.ಶಂ. ಪರಮಶಿವಯ್ಯ, ಉತ್ತಂಗಿ ಚನ್ನಪ್ಪ, ಯು.ಆರ್. ಅನಂತಮೂರ್ತಿ, ಜನರಲ್ ಕೆ.ಎಂ. ಕಾರ್ಯಪ್ಪ, ದೇವರಾಜ ಅರಸು, ಎಸ್. ಬಂಗಾರಪ್ಪ, ಎಸ್. ನಿಜಲಿಂಗಪ್ಪ, ಕೆಂಗಲ್ ಹನುಮಂತಯ್ಯ ಮೊದಲಾದ ಧೀಮಂತರು ಓದಿದ ಶಾಲೆಗಳನ್ನಾದರೂ ಸರ್ಕಾರ ಅಭಿವೃದ್ಧಿ ಮಾಡಬೇಕು' ಎಂದು ವರದಿಯಲ್ಲಿ ತಿಳಿಸಲಾಗಿದೆ.

---

ದೇಶದ ಮಹಿಳೆಯರ ಸಬಲೀಕರಣವನ್ನು ಯಾರು ವಿರೋಧಿಸುತ್ತಿದ್ದಾರೆ ಎಂಬುದಕ್ಕೆ , ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರಗೊಳ್ಳದಿರುವುದು ಸ್ಪಷ್ಟ ಸಾಕ್ಷಿ ಒದಗಿಸಿದೆ ಎಂದು ಪ್ರಧಾನಮಂತ್ರಿ ಮೋದಿ ಗುಡುಗಿದ್ದಾರೆ. ದೇಶವನ್ನುದ್ದೇಶಿಸಿ ಭಾಷಣ ಮಾಡಿ, ಮಹಿಳಾ ಮೀಸಲಾತಿ ವಿರುದ್ಧ ಮತ ಚಲಾಯಿಸಿದ ವಿಪಕ್ಷಗಳ ವಿರುದ್ಧ ವ್ಯಾಪಕ ಆಕ್ರೋಶ ವ್ಯಕ್ತಪಡಿಸಿದರು.

# ಸೋಲಿನ ಯಾತನೆ

## ನಮೋ ಸಿಂಹಗರ್ಜನೆ!

**ವಿಪಕ್ಷಗಳು ಮಾಡಿದ ನಾರಿಶಕ್ತಿಯ ಭ್ರೂಣ ಹತ್ಯೆಗೆ ಕ್ಷಮೆ ಇಲ್ಲ**

**ನಾರಿಶಕ್ತಿ ವಂದನಾ ಮಸೂದೆಗೆ ಸೋಲು**

**ದೇಶದ ಮಹಿಳೆಯರಲ್ಲಿ ಕ್ಷಮೆಯಾಚಿಸಿದ ಮೋದಿ**

**ವಿಪಕ್ಷಗಳ ವಿರುದ್ಧ ಮೋದಿ ಗರಂ!**




• ಉದಯವಾಹಿನಿ, ಹೊಸದಿಲ್ಲಿ

ಮಹಿಳೆಯರ ಧ್ವನಿ ಗಟ್ಟಿಗೊಳಿಸಲು ನಮ್ಮ ಸರ್ಕಾರ ಪ್ರಾಮಾಣಿಕ ಪ್ರಯತ್ನ ನಡೆಸಿತು. ಇದಕ್ಕಾಗಿ ಸಂಸತ್ತಿನ ವಿಶೇಷ ಅಧಿವೇಶನವನ್ನೂ ಕರೆಯಲಾಯಿತು. ಈ ಅಧಿವೇಶನದಲ್ಲಿ ಮಹಿಳಾ ಮೀಸಲಾತಿ ಏಕೆ ಅವಶ್ಯ ಎಂಬುದನ್ನು ಸರ್ಕಾರ ಸದನದಲ್ಲಿ ಎಳೆಎಳೆಯಾಗಿ ಬಿಚ್ಚಿಟ್ಟಿತು. ಅಲ್ಲದೇ ಮಸೂದೆ ಪರವಾಗಿ ಮತ ಚಲಾಯಿಸುವಂತೆ ವಿಪಕ್ಷ ಸದಸ್ಯರಲ್ಲಿ ಮನವಿ ಮಾಡಿಕೊಂಡಿತು. ಆದರೆ ಪ್ರತಿಪಕ್ಷಗಳು ತಮ್ಮ ಸ್ವಾರ್ಥ ರಾಜಕಾರಣಕ್ಕೋಸ್ಕರ ಈ ಮಸೂದೆ ಅಂಗೀಕಾರವಾಗದಂತೆ ನೋಡಿಕೊಂಡವು ಎಂದು ಪ್ರಧಾನಿ ಮೋದಿ ಗಂಭೀರ ಆರೋಪ ಮಾಡಿದರು.

ಲೋಕಸಭೆಯಲ್ಲಿ ನಾರಿಶಕ್ತಿ ವಂದನ್ ಮಸೂದೆಗೆ ಸೋಲುಂಟಾದಾಗ ಕಾಂಗ್ರೆಸ್, ಡಿಎಂಕೆ ಮತ್ತು ಎಸ್‌ಪಿ ಸೇರಿದಂತೆ ಪ್ರಮುಖ ವಿರೋಧ ಪಕ್ಷಗಳು ಮೇಜುಕುಟ್ಟಿ ಸ್ವಾಗತಿಸಿದವು.

ಈ ಪಕ್ಷಗಳ ನಾಯಕರು ಮಹಿಳೆಯರಿಗೆ ಮಾಡಿದ ಅನ್ಯಾಯ ಮತ್ತು ಅದನ್ನು ಸಂಭ್ರಮಿಸಿದ ರೀತಿಯನ್ನು ಈ ದೇಶದ ಮಹಿಳೆ ಎಂದಿಗೂ ಸಹಿಸುವುದಿಲ್ಲ ಎಂದು ಪ್ರಧಾನಿ ಮೋದಿ ವಾಗ್ದಾಳಿ ನಡೆಸಿದರು. ನಾರಿಶಕ್ತಿ ವಂದನ್ ಮಸೂದೆ ಯಾರಿಂದಲೂ ಏನನ್ನೂ ಕಸಿದುಕೊಳ್ಳುತ್ತಿರಲಿಲ್ಲ. ಬದಲಿಗೆ ಎಲ್ಲರಿಗೂ ಏನನ್ನಾದರೂ ಹೆಚ್ಚಿನದನ್ನು ನೀಡುತ್ತಿತ್ತು. ಎಲ್ಲಾ ರಾಜ್ಯಗಳ ಶಕ್ತಿಯನ್ನು ಹೆಚ್ಚಿಸುವ ಪ್ರಾಮಾಣಿಕ ಉದ್ದೇಶದಿಂದ ಮೂರು ಪ್ರಮುಖ ಮಸೂದೆಗಳನ್ನು ಜಾರಿಗೆ ತರಲು ಕೇಂದ್ರ ಸರ್ಕಾರ ಬಯಸಿತ್ತು. ಆದರೆ ವಿಪಕ್ಷಗಳು ಮಹಿಳಾ ಧ್ವನಿಯನ್ನು ಹತ್ತಿಕ್ಕುವ ಉದ್ದೇಶದಿಂದ ಈ ಮಸೂದೆಯನ್ನು ವಿಫಲಗೊಳಿಸಿದವು ಎಂದು ಪ್ರಧಾನಿ ಮೋದಿ ಆರೋಪಿಸಿದರು.

ಮೋದಿ ಅವರ ನೇತೃತ್ವದ ಸರ್ಕಾರ 2014 ರಿಂದ 2026 ರವರೆಗೆ ಸತತ ಮೂರು ಅವಧಿಗಳಲ್ಲಿ ಆಡಳಿತ ನಡೆಸುತ್ತಿದೆ. ಈ ಇಡೀ 12 ವರ್ಷಗಳ ಸುದೀರ್ಘ ಪಯಣದಲ್ಲಿ ಸಾಂವಿಧಾನಿಕ ತಿದ್ದುಪಡಿ ಮಸೂದೆಯೊಂದು ಸಂಸತ್ತಿನಲ್ಲಿ ಸೋಲನ್ನಪ್ಪುತ್ತಿರುವುದು ಇದೇ ಮೊದಲ ಬಾರಿ. ಈ ಐತಿಹಾಸಿಕ ಸೋಲಿನ ಬಗ್ಗೆ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಬೇಸರ ವ್ಯಕ್ತಪಡಿಸಿದ್ದು, ದೊಡ್ಡ ಸುಧಾರಣೆಯ ಅವಕಾಶವನ್ನು ಕಳೆದುಕೊಂಡೆವು ಎಂದಿದ್ದಾರೆ.

**ರಾಹುಲ್ ಗುಡುಗು**

ಸಂವಿಧಾನ ತಿದ್ದುಪಡಿ ಮಸೂದೆಗೂ, ಮಹಿಳಾ ಮೀಸಲಾತಿಗೂ ಯಾವುದೇ ಸಂಬಂಧವಿಲ್ಲ. ಆದರೆ, ದಕ್ಷಿಣ, ಈಶಾನ್ಯ ಮತ್ತು ಸಣ್ಣ ಸಣ್ಣ ರಾಜ್ಯಗಳಿಂದ ಪ್ರಾತಿನಿಧ್ಯವನ್ನು ಕಸಿದುಕೊಳ್ಳುವ ಮೂಲಕ ದೇಶದ ಚುನಾವಣಾ ನಕ್ಷೆಯನ್ನು ಬದಲಾಯಿಸಲು ಕೇಂದ್ರ ಪ್ರಯತ್ನಿಸುತ್ತಿದೆ ಅನ್ನೋದು ಸತ್ಯ. ಇದು ರಾಷ್ಟ್ರ ವಿರೋಧಿ ಅಲ್ಲದೇ ಮತ್ತೇನು ಎಂದು ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಪ್ರಶ್ನಿಸಿದರು.

1 ದೇಶವನ್ನುದ್ದೇಶಿಸಿ ಭಾಷಣ ಮಾಡಿದ ಮೋದಿ

2 ವಿಪಕ್ಷಗಳ ವಿರುದ್ಧ ತಮ್ಮ ಭಾಷಣದಲ್ಲಿ ಮೋದಿ ಕೆಂಡಾಮಂಡಲ.

3 ಮಹಿಳಾ ಸಬಲೀಕರಣದ ವಿರೋಧಿಗಳು ಎಂದು ಆರೋಪಿಸಿದ ಮೋದಿ

ಇನ್ನೊಂದೆಡೆ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಈ ಮಸೂದೆಯ ಸೋಲನ್ನು ಪ್ರಜಾಪ್ರಭುತ್ವದ ವಿಜಯ ಎಂದು ಬಣ್ಣಿಸಿದ್ದಾರೆ. ಮಸೂದೆಯನ್ನು ಸೋಲಿಸುವ ಮೂಲಕ ಸರ್ಕಾರ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ ಪ್ರಯತ್ನ ವಿಫಲವಾಗಿದೆ ಎಂದು ಅವರು ಆರೋಪಿಸಿದ್ದಾರೆ. ಸರ್ಕಾರವು ಮಹಿಳೆಯರನ್ನು ಬಳಸಿಕೊಂಡು ಪಿತೂರಿ ನಡೆಸುತ್ತಿತ್ತು ಎಂಬುದು ಪ್ರಿಯಾಂಕಾ ಅವರ ನೇರವಾದ ದೂರು.

**ಪ್ರಿಯಾಂಕಾ ಗಾಂಧಿ ಸವಾಲು:** ಮಹಿಳಾ ಮೀಸಲಾತಿ ಮಸೂದೆಯು ಲೋಕಸಭೆಯಲ್ಲಿ ಅಂಗೀಕಾರವಾಗಲು ವಿಫಲವಾದ ನಂತರ ಎನ್‌ಡಿಎ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ, ಈ ಸಾಂವಿಧಾನಿಕ ತಿದ್ದುಪಡಿ ಮಸೂದೆಯು ಕೇಂದ್ರವು ಶಾಶ್ವತವಾಗಿ ಆಳಲು ಮತ್ತು ದೇಶದಲ್ಲಿ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸಲು ನಡೆಸಿದ ಪಿತೂರಿಯಾಗಿತ್ತು ಎಂದು ಆರೋಪಿಸಿದ್ದಾರೆ. ಸಂವಿಧಾನ (131ನೇ ತಿದ್ದುಪಡಿ) ಮಸೂದೆ, 2026ರ ಲೋಕಸಭೆಯಲ್ಲಿ ಅಂಗೀಕಾರಗೊಳ್ಳಲು ವಿಫಲವಾದ ಒಂದು ದಿನದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ



**ಶಾ ಟೀಕಾಪ್ರಹಾರ**

ಶಾಸನಸಭೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಮತ್ತು ಲೋಕಸಭಾ ಕ್ಷೇತ್ರಗಳನ್ನು ಹೆಚ್ಚಿಸುವ ಸಂವಿಧಾನ ತಿದ್ದುಪಡಿ ಮಸೂದೆಗೆ ಲೋಕಸಭೆಯಲ್ಲಿ ಹಿನ್ನಡೆಯಾದ ಬೆನ್ನಲ್ಲೇ, ಕೇಂದ್ರ ಗೃಹ ಸಚಿವ ಅಮಿತ್ ಶಾ ವಿಪಕ್ಷಗಳ ವಿರುದ್ಧ ಟೀಕಾಪ್ರಹಾರ ನಡೆಸಿದ್ದಾರೆ. 2029ರ ಲೋಕಸಭಾ ಚುನಾವಣೆಯಲ್ಲಿ ಮಾತ್ರವಲ್ಲದೆ, ಪ್ರತಿಯೊಂದು ಹಂತದಲ್ಲೂ, ಪ್ರತಿಯೊಂದು ಚುನಾವಣೆಯಲ್ಲೂ ಮತ್ತು ಪ್ರತಿಯೊಂದು ಸ್ಥಳದಲ್ಲೂ ವಿಪಕ್ಷದವರು ಮಹಿಳೆಯರ ಕೋಪವನ್ನು ಎದುರಿಸಬೇಕಾಗುತ್ತದೆ ಎಂದು ಅಮಿತ್ ಶಾ ಹೇಳಿದರು. ಚುನಾವಣೆ ಸಮಯದಲ್ಲಿ ನೀವು ಕ್ಷೇತ್ರಕ್ಕೆ ಹೋದಾಗ ನಿಮಗೆ ದೇಶದ ತಾಯಂದಿರು ಮತ್ತು ಸಹೋದರಿಯರ ಕೋಪದ ಅರಿವಾಗಲಿದೆ. ಆಗ ನಿಮಗೆ ಓಡಲು ದಾರಿ ಸಿಗುವುದಿಲ್ಲ. ಮಹಿಳೆಯರು ಚುನಾವಣೆ ಸಮಯದಲ್ಲಿ ಉತ್ತರ ನೀಡಲಿದ್ದಾರೆ. ಕಾಂಗ್ರೆಸ್‌ಗೆ ಚುನಾವಣೆ ಗೆಲ್ಲುವುದು ಆದ್ಯತೆ. ಆದರೆ ನಮಗೆ ನಮ್ಮ ದೇಶದ ಜನರ ಪ್ರಾತಿನಿಧ್ಯ ಮತ್ತು ಆಡಳಿತದಲ್ಲಿ ಅವರ ನಿಜವಾದ ಭಾಗವಹಿಸುವಿಕೆ ಹೆಚ್ಚು ಮುಖ್ಯವಾಗಿದೆ.

ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ, ಕೇಂದ್ರ ಸರ್ಕಾರಕ್ಕೆ ಈ ಹಿಂದೆ ರಾಜಕೀಯ ಬೆಂಬಲವನ್ನು ಪಡೆದಿದ್ದ ಮೂಲ ಮಹಿಳಾ ಮೀಸಲಾತಿ ಮಸೂದೆಯನ್ನು ಮತ್ತೆ ಮಂಡಿಸುವಂತೆ ಆಗ್ರಹಿಸಿದ್ದಾರೆ. ಕೇಂದ್ರ ಸರ್ಕಾರ ಎಲ್ಲಾ ಪಕ್ಷಗಳಿಂದ ಅಂಗೀಕರಿಸಲ್ಪಟ್ಟ ಹಳೆಯ ಮಹಿಳಾ ಮಸೂದೆಯನ್ನು ತಕ್ಷಣ ಜಾರಿಗೆ ತರಬೇಕು. ಸೋಮವಾರ ಸಂಸತ್ತನ್ನು ಆಯೋಜಿಸಿ, ಆ ಮಸೂದೆಯನ್ನು ಮಂಡಿಸಿ. ಆಗ ಯಾರು ಮಹಿಳಾ ವಿರೋಧಿ ಎಂಬುದು ಗೊತ್ತಾಗುತ್ತದೆ. ಮೂಲ ಮಸೂದೆಯನ್ನು ಮಂಡಿಸಿದರೆ ಖಂಡಿತ ನಾವು ಬೆಂಬಲಿಸುತ್ತೇವೆ'' ಎಂದು ಪ್ರಿಯಾಂಕಾ ಗಾಂಧಿ ಹೇಳಿದ್ದಾರೆ.



**ಮಹಿಳಾ ಮೀಸಲಾತಿ ಬಿಲ್ ಫೇಲ್**

ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರಗೊಳ್ಳದ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ದೇಶದ ಮಹಿಳೆಯರ ಕ್ಷಮೆಯಾಚಿಸಿದ್ದಾರೆ. ನಾನು ಇಂದು ನಮ್ಮ ದೇಶದ ತಾಯಂದಿರು, ಸಹೋದರಿಯರು ಮತ್ತು ಹೆಣ್ಣುಮಕ್ಕಳೊಂದಿಗೆ ಮಾತನಾಡಲು ಬಂದಿದ್ದೇನೆ. ನಮಗೆ ಮಹಿಳಾ ಮೀಸಲಾತಿ ಮಸೂದೆಯನ್ನು ಅಂಗೀಕರಿಸಲು ಸಾಧ್ಯವಾಗಲಿಲ್ಲ. ಇದಕ್ಕಾಗಿ ನಾನು ದೇಶದ ಮಹಿಳೆಯರಲ್ಲಿ ಪ್ರಾಮಾಣಿಕವಾಗಿ ಕ್ಷಮೆಯಾಚಿಸುತ್ತೇನೆ ಎಂದು ಪ್ರಧಾನಿ ಮರುಕ ವ್ಯಕ್ತಪಡಿಸಿದರು. ಮಹಿಳಾ ಸಬಲೀಕರಣದ ಈ ಮಹತ್ವದ ಹೆಜ್ಜೆ ವಿಫಲವಾಗಿರುವುದು ದೇಶಕ್ಕೆ ಹಿನ್ನಡೆ ಎಂದು ಅವರು ಬಣ್ಣಿಸಿದರು. ಮಸೂದೆ ವಿಫಲವಾದ ಬೆನ್ನಲ್ಲೇ ವಿರೋಧ ಪಕ್ಷಗಳ ವಿರುದ್ಧ ತೀವ್ರವಾಗಿ ವಾಗ್ದಾಳಿ ನಡೆಸಿದ ಮೋದಿ, ವಿಪಕ್ಷಗಳು ಸಾರ್ವಜನಿಕ ಹಿತಾಸಕ್ತಿಗಿಂತ ರಾಜಕೀಯಕ್ಕೇ ಹೆಚ್ಚಿನ ಆದ್ಯತೆ ನೀಡಿವೆ ಎಂದು ಆರೋಪಿಸಿದರು.

---

## ಮಧ್ಯರಾತ್ರಿ ದಕ್ಷಿಣ ಆಫ್ರಿಕಾದಿಂದ ಬೆಂಗಳೂರಿಗೆ ಬಂದ ಹೊಸ ಅತಿಥಿಗಳು!

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿಗೆ ಮಧ್ಯರಾತ್ರಿ ದಕ್ಷಿಣ ಆಫ್ರಿಕಾದಿಂದ ನಾಲ್ವರು ಹೊಸ ಅತಿಥಿಗಳು ಬಂದಿದ್ದಾರೆ. ಇವರು ಒಂದು ಕಾಲದಲ್ಲಿ ನಮ್ಮ ಕಾಡುಗಳಲ್ಲಿ ಘರ್ಜಿಸಿದವರು. ಆದರೆ, ಇದೀಗ ನಾಮಾವಶೇಷಗೊಂಡಿದ್ದರೆ. ಆದರೆ, ಇದೀಗ ಆಫ್ರಿಕಾದ ಕಾಡುಗಳಲ್ಲಿ ಸದ್ದು ಮಾಡುತ್ತಿರುವ ಇವರನ್ನು ಬೆಂಗಳೂರಿಗೆ ಕರೆತರಲಾಗಿದೆ. ಇವರು ಬೇರಾರು ಅಲ್ಲ, ಸಿವಂಗಿ ಎಂದು ಕರೆಯಲ್ಪಡುವ ಚೀತಾಗಳು.

ಬನ್ನೇರುಘಟ್ಟ ಮೃಗಾಲಯಕ್ಕೆ ದಕ್ಷಿಣ ಆಫ್ರಿಕಾದಿಂದ ತರಿಸಿಕೊಂಡ 4 ಸಿವಂಗಿ (ಚೀತಾ)ಗಳನ್ನು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಅವರು ಮಧ್ಯರಾತ್ರಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬರಮಾಡಿಕೊಂಡರು.

ಕಲ್ಬುರ್ಗಿಯಲ್ಲಿ ಕಾರ್ಯಕ್ರಮ ಮುಗಿಸಿಕೊಂಡು ಹೈದ್ರಾಬಾದ್ ಮಾರ್ಗವಾಗಿ ಮಧ್ಯರಾತ್ರಿ ಬೆಂಗಳೂರಿಗೆ ಆಗಮಿಸಿದ ಅರಣ್ಯ ಸಚಿವರು, ಅಲ್ಲಿಂದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸರಕು ಸಾಗಣೆ ವಿಭಾಗಕ್ಕೆ ತೆರಳಿ ಬನ್ನೇರುಘಟ್ಟ ಮೃಗಾಲಯಕ್ಕೆ ಆಗಮಿಸಿರುವ ಈ ವಿದೇಶೀ ಅತಿಥಿಗಳನ್ನು ಬರಮಾಡಿಕೊಂಡರು. ದಕ್ಷಿಣ ಆಫ್ರಿಕಾದಿಂದ ಬೆಂಗಳೂರಿಗೆ ಆಗಮಿಸಿರುವ ಈ ಚೀತಾಗಳಿಗೆ ವಾತಾವರಣ, ಹವಾಮಾನ ಬದಲಾವಣೆ ಆಗುವ ಕಾರಣ ಅವುಗಳಿಗೆ ಯಾವುದೇ ತೊಂದರೆ ಆಗದಂತೆ, ಆರೋಗ್ಯ ಸಮಸ್ಯೆ ಎದುರಾಗದ ರೀತಿಯಲ್ಲಿ ಸೂಕ್ತ ನಿಗಾ ಇಡಬೇಕು,



**ಚೀತಾ ನೋಡಿ ಖಂಡ್ರೆ ಖುಷ್**

ವನ್ಯಜೀವಿಗಳನ್ನು ಕ್ವಾರಂಟೈನಲ್ಲಿಡಬೇಕು, 30ದಿನಗಳ ಕಾಲ ಗೊತ್ತುಪಡಿಸಿದ ಆಹಾರ ನೀಡಬೇಕು, ಈ ವಿದೇಶಿ ವನ್ಯಜೀವಿಗಳಿಗೆ ಸೋಂಕು ಏನಾದರೂ ಇದೆಯೇ ಎಂದು ಪರಿಶೀಲಿಸಬೇಕು. ಪ್ರಾಣಿಗಳನ್ನು ಸುರಕ್ಷಿತವಾಗಿ ಬನ್ನೇರುಘಟ್ಟಕ್ಕೆ ಸಾಗಿಸಬೇಕು ಎಂದು ಅಧಿಕಾರಿಗಳಿಗೆ ಮತ್ತು ಪಶುವೈದ್ಯಾಧಿಕಾರಿಗಳಿಗೆ ಸೂಚನೆ ನೀಡಿದರು.

ಒಂದು ಕಾಲದಲ್ಲಿ ಕರ್ನಾಟಕದ ಕಾಡುಗಳಲ್ಲಿಯೇ ಸಿವಂಗಿ ಎಂದು ಕರೆಸಿಕೊಳ್ಳುವ ಚೀತಾಗಳಿದ್ದವು. ಆದರೆ ರಾಜ್ಯದ ಕಾಡಿನಲ್ಲಿ ಇವು ನಾಮಾವಶೇಷ ಆಗಿವೆ. ಹೀಗಾಗಿ ಮೃಗಾಲಯಗಳಲ್ಲಾದರೂ ಇವುಗಳನ್ನು ನೋಡಲು ಅವಕಾಶ ಆಗಬೇಕು. ಈ ನಿಟ್ಟಿನಲ್ಲಿ ಅವುಗಳ ಸುರಕ್ಷತೆಗೆ ಆದ್ಯ ಗಮನ ನೀಡುವಂತೆ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸುನೀಲ್ ಪನ್ವಾರ್ ಅವರಿಗೆ ಸೂಚನೆ ನೀಡಿದರು.


---

## ಬೆಂಗಳೂರಿನಲ್ಲಿ ದೃಢಪಟ್ಟ ಹಕ್ಕಿಜ್ವರ: ಸರಿಯಾಗಿ ಬೇಯಿಸಿ ಸೇವಿಸಿ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ಹೆಸರಘಟ್ಟದ ಮತ್ತೂರು ಗ್ರಾಮದ ಕೋಳಿ ಸಾಕಾಣಿಕೆ ತರಬೇತಿ ಕೇಂದ್ರದಲ್ಲಿ ಇದೇ ತಿಂಗಳ 14 ನೇ ತಾರೀಕಿನಂದು NIHSAD, ಭೋಪಾಲ್ ವರದಿಯ ಪ್ರಕಾರ H5N1 ಹಕ್ಕಿಜ್ವರ ದೃಢಪಟ್ಟಿದ್ದು, ನಿಯಮಾವಳಿಯಂತೆ ತಕ್ಷಣವೇ ನಿಯಂತ್ರಣಕ್ಕೆ ಸಕಲ ಕ್ರಮ ಕೈಗೊಳ್ಳಲಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಎಪ್ರಿಲ್ 16 ರಂದು ರಾಜ್ಯ, ಜಿಲ್ಲಾ ಮತ್ತು ಪಿಹೆಚ್ ಸಿಆರ್‌ಆರ್‌ಟಿ ತಂಡ ಸ್ಥಳಕ್ಕೆ ಭೇಟಿ ನೀಡಿ ಮುತ್ತೂರು ಗ್ರಾಮವನ್ನು ಸೋಂಕಿತ ವಲಯ(3ಕಿ.ಮೀ ವ್ಯಾಪ್ತಿ) ಮತ್ತು ಸುತ್ತಲಿನ 10ಕಿ.ಮೀ ಪ್ರದೇಶವನ್ನು ಕಣ್ಗಾವಲು ವಲಯ ಎಂದು ಘೋಷಿಸಲಾಗಿದೆ. ಎಪ್ರಿಲ್ 15ರಂದು 7444 ಕೋಳಿಗಳು, 14



**ಆರೋಗ್ಯ ಇಲಾಖೆ ಮನವಿ**

ಸಾವಿರಕ್ಕೂ ಅಧಿಕ ಮೊಟ್ಟೆಗಳು, 2250 ಕೆಜಿ ಕೋಳಿ ಆಹಾರವನ್ನು ಪಶುಪಾಲನೆ ಇಲಾಖೆ ನೇತೃತ್ವದಲ್ಲಿ ವೈಜ್ಞಾನಿಕವಾಗಿ ಕಲ್ಲಿಂಗ್ ಮಾಡಿ ವಿಲೇವಾರಿ ಮಾಡಲಾಗಿದೆ. ಇದರಲ್ಲಿ ಭಾಗಿಯಾದ 10 ಸಿಬ್ಬಂದಿಯನ್ನು ಕ್ವಾರಂಟೈನ್ ಮಾಡಿ, ಒಸೆಲ್ಟಾಮಿವಿರ್ ಔಷಧದೊಂದಿಗೆ ವೈದ್ಯಕೀಯ ನಿಗಾದಲ್ಲಿ ಇರಿಸಲಾಗಿದೆ. ಈ ಸ್ಥಳವನ್ನು ಒಂದು ವರ್ಷದವರೆಗೆ ನಿಷೇಧಿತ ಪ್ರದೇಶ ಎಂದು ಘೋಷಣೆ ಮಾಡಲಾಗಿದೆ.

**ಕಟ್ಟುನಿಟ್ಟಿನ ಸೂಚನೆ**

ಶಂಕಿತ ಪ್ರಕರಣಗಳನ್ನು ತಕ್ಷಣ ವರದಿ ಮಾಡಲು ಆಸ್ಪತ್ರೆಗಳಿಗೆ ಸೂಚಿಸಲಾಗಿದ್ದು, ಪಿಪಿಇ ಕಿಟ್, ಮಾಸ್ಕ್, ಒಸೆಲ್ಟಾಮಿವಿರ್, ವಿಟಿಎಂ ಮತ್ತು ಗಂಟಲು ಸ್ವಾಬ್‌ಗಳನ್ನು ಅಗತ್ಯ ಪ್ರಮಾಣದಲ್ಲಿ ಹೆಸರಘಟ್ಟ ಮತ್ತು ಸೊನ್ನೇನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಲಭ್ಯ ಇರಬೇಕೆಂದು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಆರೋಗ್ಯ ಇಲಾಖೆ ಕಣ್ಗಾವಲು ಪ್ರಗತಿಯಲ್ಲಿದ್ದು 3 ಕಿ ಮೀ ವ್ಯಾಪ್ತಿ ವಲಯದಲ್ಲಿ ಒಟ್ಟು 3422 ಜನಸಂಖ್ಯೆಯ ಎರಡು ಗ್ರಾಮಗಳಿದ್ದು, 3-10 ಕಿ ಮೀ ವ್ಯಾಪ್ತಿಯಲ್ಲಿ ಒಟ್ಟು 22,395 ಜನಸಂಖ್ಯೆ ಇರುವ 17 ಗ್ರಾಮಗಳು ಇದ್ದು, ಆರೋಗ್ಯ ಕಾರ್ಯಕರ್ತರು ಹಾಗೂ ಆಶಾ ಕಾರ್ಯಕರ್ತರು ದಿನನಿತ್ಯ ಮನೆಮನೆ ಭೇಟಿ ನೀಡಿ ಮುಂದಿನ ಹತ್ತು ದಿನಗಳ ಕಾಲ ಜ್ವರ ಕಣ್ಗಾವಲು ನಡೆಸಲಾಗುವುದು.

ಈವರೆಗೆ ಯಾವುದೇ ಮನುಷ್ಯರಲ್ಲಿ ಈ ರೋಗ ವರದಿಯಾಗಿಲ್ಲ, ಹಾಗಾಗಿ ಸಾರ್ವಜನಿಕರು ಆತಂಕ ಪಡುವ ಅಗತ್ಯ ಇಲ್ಲ. ಆದರೆ ಜಾಗರೂಕರಾಗಿರಬೇಕು. ಅನಾರೋಗ್ಯ/ಸತ್ತ ಹಕ್ಕಿಗಳ ಸಂಪರ್ಕದಿಂದ ದೂರ ಇರಬೇಕು.

ಯಾವುದೇ ರೀತಿಯ ಅನುಮಾನ ಕಂಡುಬಂದರೆ ತಕ್ಷಣ ಪಶುಸಂಗೋಪನೆ ಅಥವಾ ಆರೋಗ್ಯ ಇಲಾಖೆಗೆ ಮಾಹಿತಿ ನೀಡಬೇಕು. ಸರಿಯಾಗಿ ಬೇಯಿಸಿದ ಕೋಳಿ ಮಾಂಸ ಮತ್ತು ಮೊಟ್ಟೆ ಸೇವಿಸಿ. ಆರೋಗ್ಯ ಇಲಾಖೆ ಎಲ್ಲಾ ರೀತಿಯ ಪರಿಸ್ಥಿತಿ ಎದುರಿಸಲು ಸಜ್ಜಾಗಿದೆ ಎಂದು ತಿಳಿಸಿದೆ.

---

## 'ಟಗರು ಸುಮ್ ಸುಮ್ಮನೆ ಗುದ್ದಲ್ಲ, ಈಗ ಗುರಾಯಿಸ್ತಾ ಇದೆ': ಸಚಿವ ಗರಂ

### ■ ಸಿಎಂ ಮೌನಕ್ಕೆ ಮಹದೇವಪ್ಪ ಪ್ರತಿಕ್ರಿಯೆ ಆಪ್ತರ ಬಗ್ಗೆ ಸರಣಿ ಕ್ರಮ ಆದರೂ ಸಿದ್ದರಾಮಯ್ಯ ಮೌನ

• ಉದಯವಾಹಿನಿ, ಬೆಂಗಳೂರು



'ಟಗರು ಸುಮ್ ಸುಮ್ಮನೆ ಗುದ್ದಲ್ಲ, ಈಗ ಗುರಾಯಿಸ್ತಾ ಇದೆ. ಯಾವ ಕಾಲಕ್ಕೆ ಏನು ಮಾಡಬೇಕೋ ಅದನ್ನು ಮಾಡುತ್ತದೆ'' ಹೀಗಂತ ಸಿಎಂ ಸಿದ್ದರಾಮಯ್ಯ ಪರವಾಗಿ ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್ ಸಿ ಮಹದೇವಪ್ಪ ಭರ್ಜರಿ ಬ್ಯಾಟಿಂಗ್ ಮಾಡಿದ್ದಾರೆ.

ಆಪ್ತರ ವಿರುದ್ಧ ಸರಣಿ ಕ್ರಮಗಳು ಆಗುತ್ತಿದ್ದರೂ ಸಿಎಂ ಸಿದ್ದರಾಮಯ್ಯ ಮೌನದ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, 'ಟಗರು ಅಂದರೆ ಟಗರೇ ಅಲ್ವಾ ಬಂದ್ರೆ, ಗುದ್ದುಬಿಡುತ್ತೆ. ರಾಜಣ್ಣ ಅವರಿಗೆ ಸಿಎಂ ಮೇಲೆ ಪ್ರೀತಿ ಇದೆಯಲ್ಲಾ, ಹಾಗಾಗಿ



ಅವರು ಸಿಎಂ ಜೋರಾಗಿ ಮಾತಾಡಬೇಕು ಅಂತಾರೆ. ಜೋರಾಗಿ ಮಾತಾಡಿದ್ರು ಇಲ್ಲದಿದ್ದರರೂ ಯಾವ ಯಾವ ಕಾಲದಲ್ಲಿ ಏನು ಮಾಡಬೇಕು ಅಂತ ಮುಖ್ಯಮಂತ್ರಿಗಳಿಗೆ ಗೊತ್ತಿದೆ' ಎಂದರು.

ಮುಸ್ಲಿಂ ನಾಯಕರೊಂದಿಗಿನ ಮೀಟಿಂಗ್ ವಿಚಾರವಾಗಿ ಮಾತನಾಡಿ, ಮುಸ್ಲಿಮರು ದಲಿತರು ಹಿಂದುಳಿದ ವರ್ಗದವರು ಕಾಂಗ್ರೆಸ್ ಪಕ್ಷದ ಬೆನ್ನೆಲುಬು. ಅವರು ಸಮಾಧಾನ ಆಗಿದ್ದಾರೋ, ಅಸಮಾಧಾನ ಆಗಿದ್ದಾರೋ ನನಗೆ ಗೊತ್ತಿಲ್ಲ. ನೀವು ಹೇಳಿದ್ದೀರಿ, ಯಾರ್ಯಾರು ಅಸಮಾಧಾನ ಆಗಿದ್ದಾರೆ ಗೊತ್ತಿಲ್ಲ. ನನಗೆ ಗೊತ್ತಾದ್ರೆ, ನನ್ನ ಕೈಯಲ್ಲಿ ಏನು ಮಾಡಬೇಕು ಅದು ಮಾಡ್ತೀನಿ ಎಂದು ಹೇಳಿದರು.

ಸಿಎಂ ಏನು ಮಾಡ್ತಾ ಇಲ್ಲ ಅಸಹಾಯಕರು ಎಂಬ ರಾಜಣ್ಣ ಹೇಳಿಕೆ ವಿಚಾರವಾಗಿ ಪ್ರತಿಕ್ರಿಯೆ ನೀಡಿ, ''ಸಿಎಂ ಯಾವಾಗ ದುರ್ಬಲ ಆಗಿದ್ದಾರೆ, ಯಾವಾಗಲೂ ಗಟ್ಟಿನೇ ಅವರು.

ಸಮನ್ವಯತೆ ಕಾಪಾಡೋಕೆ ಏನು ಬೇಕೋ ಅದು ಮಾಡ್ತಾರೆ ಎಂದು ಸಮರ್ಥಿಸಿಕೊಂಡರು.



**ರಾಜ್ಯ ನಾಯಕರ ವ್ಯಾಪ್ತಿಗೆ ಬಿಡುತ್ತೇನೆ**

ಅಲ್ಪಸಂಖ್ಯಾತ ನಾಯಕರ ಭಿನ್ನಾಭಿಪ್ರಾಯ ವಿಚಾರವಾಗಿ ಸಚಿವ ಮಧು ಬಂಗಾರಪ್ಪ ಇದೇ ಸಂದರ್ಭದಲ್ಲಿ ಮಾತನಾಡಿ, ''ನಾನು ಇದನ್ನೆಲ್ಲ ಮಾತನಾಡಲು ಹೋಗುವುದಿಲ್ಲ. ಹೈ ಕಮಾಂಡ್ ಮತ್ತೆ ರಾಜ್ಯ ನಾಯಕರ ವ್ಯಾಪ್ತಿಗೆ ಬಿಡುತ್ತೇನೆ. ಅವರು ಏನೇ ನಿರ್ಧಾರ ತಗೊಂಡ್ರು ಕೂಡ ನಾನು ಅವರ ವಿವೇಚನಕ್ಕೆ ಬಿಟ್ಟುಬಿಡ್ತೀನಿ. ಯಾಕೆಂದ್ರೆ ನಾನು ಯಾವಾಗಲೂ ಕೂಡ ಪಕ್ಷದ ಬಗ್ಗೆ ಇಂಟರ್ನಲ್ ಬಗ್ಗೆ ಮಾತನಾಡುವುದಿಲ್ಲ'' ಎಂದರು.

ಸಚಿವ ಜಮೀರ್ ಅಹ್ಮದ್ ಖಾನ್ ಜೊತೆಗಿನ ಭೇಟಿ ವಿಚಾರವಾಗಿ ಮಾತನಾಡಿ, ಜಮೀರ್ ನಾನು ಉಪ್ಪಿಟ್ಟು ತಿಂದ್ವಿ, ವಡೆ ತಿಂದ್ವಿ, ಅದು ಬಿಟ್ಟು ಬೇರೇನೂ ಚರ್ಚೆ ಆಗಿಲ್ಲ. ನಿನ್ನೆ ಸಂಜೆ 6:30 ಆಗಿತ್ತು, ನಾನು ಇಲ್ಲಿ ತುಂಬಾ ಜನ ಇದ್ರು. ಇಲ್ಲಿ ಉಪ್ಪಿಟ್ಟಿದೆ ಬನ್ನಿ ಅಂದ್ರು, ಒಪ್ಪಿಟ್ಟು ಅಂದ್ರೆ ನನಗೂ ಇಷ್ಟ ಹಾಗಿ ಹೋಗಿದ್ದೆ ಎಂದರು.

ಏನೇ ಇದ್ದರೂ ಅದೆಲ್ಲ ವರಿಷ್ಠರು ತೀರ್ಮಾನ ಮಾಡ್ತಾರೆ. ನಾನು ಅದರಿಂದ ದೂರ ಇರ್ತೀನಿ. ಅವರು ಏನು ಮಾರ್ಗದರ್ಶನ ಕೊಡ್ತಾರೆ ಕೊಡಲಿ. ನಮ್ಮ ಪಕ್ಷದಲ್ಲಿ ಒಂದು ಆಂತರಿಕ ವ್ಯವಸ್ಥೆ ಇದೆ. ನಮಗೆ ಅಲ್ಲಿ ಯಾವಾಗ ಹೇಳಬೇಕು, ಆ ಸಂದರ್ಭದಲ್ಲಿ ಬೇಕಾದರೆ ನಾನು ಹೇಳುತ್ತೇನೆ ಎಂದು ಜಾರಿಕೊಂಡರು.

---

| ಈ ದಿನದ ದರ | ಪೆಟ್ರೋಲ್: 103.33 ₹/L | ಡೀಸೆಲ್ : 91.06 ₹/L | ಬಂಗಾರ: ₹15,578/Gram24ct ₹14,280/Gram22ct | ಬೆಳ್ಳಿ: ₹275.00/Gram |
|---|---|---|---|---|


# ಬಿಜೆಪಿ ಮುಖಂಡ ಕೆ.ಉಮೇಶ್ ಶೆಟ್ಟಿರವರ ಅರ್ಥಪೂರ್ಣ ಹುಟ್ಟುಹಬ್ಬದ ಆಚರಣೆ

## ಉಚಿತ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ, ಕ್ಯಾನ್ಸರ್, ಕಿಡ್ನಿ ಸಮಸ್ಯೆಯಿಂದ ಬಳತ್ತಿರುವವರಿಗೆ ಆರ್ಥಿಕ ಸಹಾಯ, ವಿಕಲಚೇತನರಿಗೆ ವೀಲ್ ಚೇರ್ ವಿತರಣೆ, ಮಹಿಳೆಯರಿಗೆ ಸೀರೆ ವಿತರಣೆ

• ಉದಯವಾಹಿನಿ, ಬೆಂಗಳೂರು

ಬಿಜೆಪಿ ಜನಸಂಪರ್ಕ ಕಛೇರಿಯಲ್ಲಿ ದಕ್ಷಿಣ ಜಿಲ್ಲಾ ಬಿಜೆಪಿ ಉಪಾಧ್ಯಕ್ಷರು, ನಿಕಟಪೂರ್ವ ಬಿಬಿಎಂಪಿ ಸದಸ್ಯರಾದ ಕೆ.ಉಮೇಶ್ ಶೆಟ್ಟಿರವರ ಹುಟ್ಟುಹಬ್ಬವನ್ನು ಅಭಿಮಾನಿಗಳು, ಸ್ನೇಹಿತರು ಅರ್ಥಪೂರ್ಣ ಮತ್ತು ಸಾಮಾಜಿಕ ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು.

ಉಚಿತ ಆರೋಗ್ಯ ತಪಾಸಣೆ ಶಿಬಿರ, ರಕ್ತದಾನ ಶಿಬಿರ ಆಯೋಜನೆ, ಕ್ಯಾನ್ಸರ್, ಕಿಡ್ನಿ ವೈಫಲ್ಯದಿಂದ ಬಳಲುತ್ತಿರುವರಿಗೆ ಆರ್ಥಿಕ ಸಹಾಯಹಸ್ತ, ವಿಕಲಚೇತನರಿಗೆ ವಿಲ್ ಚೇರ್ ಮತ್ತು ಮಹಿಳೆಯರಿಗೆ ಉಚಿತವಾಗಿ ಸೀರೆಗಳನ್ನು ಶಾಸಕರಾದ ಸಿ.ಕೆ.ರಾಮಮೂರ್ತಿ, ದಕ್ಷಿಣ ಜಿಲ್ಲಾ ಬಿಜೆಪಿ ಉಪಾಧ್ಯಕ್ಷರು, ನಿಕಟಪೂರ್ವ ಬಿಬಿಎಂಪಿ ಸದಸ್ಯರಾದ ಕೆ.ಉಮೇಶ್ ಶೆಟ್ಟಿರವರು, ಅಟ್ಟಿಕಾ ಗೋಲ್ಡ್ ಮಾಲೀಕರಾದ ಬೊಮ್ಮನಹಳ್ಳಿ ಬಾಬುರವರು ವಿತರಿಸಿದರು. ಸಿ.ಕೆ ರಾಮಮೂರ್ತಿ ಅವರು ಮಾತನಾಡಿ ಅಧಿಕಾರ ಇರಲಿ ಇಲ್ಲದಿರಲಿ ಜನ ಸೇವೆ ನಿರಂತರವಾಗಿ ಕೆ.ಉಮೇಶ್ ಶೆಟ್ಟಿರವರು ಮಾಡುತ್ತಿದ್ದಾರೆ. ಕಳೆದ ಬಾರಿ ಅಲ್ಪ ಮತಗಳಿಂದ ಬಿಜೆಪಿ ಪಕ್ಷಕ್ಕೆ ಹಿನ್ನಡೆಯಾಗಿದೆ 2028ರಲ್ಲಿ ಕೆ.ಉಮೇಶ್ ಶೆಟ್ಟಿರವರು ಶಾಸಕರಾಗಿ ಆಯ್ಕೆಯಾಗುವುದು ಖಚಿತ.




ಉದಯವಾಹಿನಿ ಚಿತ್ರ

ಕಾಂಗ್ರೆಸ್ ಪಕ್ಷ ರಾಷ್ಟ್ರ ಮಟ್ಟದಲ್ಲಿ ಮುಳುತ್ತಿರುವ ಹಡಗು, ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷ ನಾರಿಶಕ್ತಿ ವಂದನ ಮಸೂದೆ ವಿರೋಧಿಸಿ ಮಹಿಳಾ ವಿರೋಧಿ ಕಾಂಗ್ರೆಸ್ ಪಕ್ಷವಾಗಿದೆ ಎಂದು ಹೇಳಿದರು ಇದೇ ಸಂದರ್ಭದಲ್ಲಿ ಕೆ.ಉಮೇಶ್ ಶೆಟ್ಟಿರವರು ಮಾತನಾಡಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದಲ್ಲಿ ಸ್ವಯಂ ಸೇವಕನಾಗಿ ಸೇವೆ ಮತ್ತು ದೇಶ ಮೊದಲು, ನಂತರ ಪಕ್ಷ ಎಂಬ ದೇಶ ಪ್ರೇಮದ ಪಾಠ ಕಲಿಸಿದ ಬಿಜೆಪಿ ಪಕ್ಷದ ಕಾರ್ಯಕರ್ತ ಎಂದು ಹೆಮ್ಮೆಯಿಂದ ಹೇಳುತ್ತೇನೆ. ವಿಶ್ವದ ಬಲಿಷ್ಠ ಪ್ರಧಾನಿ ನರೇಂದ್ರಮೋದಿರವರ 12ವರ್ಷಗಳ ಆಡಳಿತದಿಂದ ದೇಶ ಆರ್ಥಿಕವಾಗಿ ಸುಭದ್ರವಾಗಿದೆ. ಕೊರೋನ ಮಹಾಕಾಲ, ಇರಾನ್, ಇಸ್ರೇಲ್ ಯುದ್ದ ಸಂಕಷ್ಟ ಸಮಯವನ್ನು ದಿಟ್ಟತನದಿಂದ ದೇಶದ ಜನರನ್ನು ಕಾಪಾಡಿದರು.

ಹುಟ್ಟಿದ ಮೇಲೆ ಸಾಧನೆ ಮಾಡಬೇಕು. ಜನರ ಜೊತೆಯಲ್ಲಿ ನಿಲ್ಲಬೇಕು ಧ್ವನಿ ಇಲ್ಲದ ಜನರು, ನೊಂದು ಬೆಂದವರ ಜೊತೆಯಲ್ಲಿ ಆಸರೆಯಾಗಿ ನಿಲ್ಲಬೇಕು ಎಂದು ಸಾಮಾಜಿಕ ಸೇವಾ ಕಾರ್ಯಗಳು ಹಮ್ಮಿಕೊಳ್ಳಲಾಗಿದೆ. ಜನರ ಸೇವೆ ಮಾಡಿದರೆ, ಭಗವಂತನ ಸೇವೆ ಮಾಡದಂತೆ. ನಿಮ್ಮ ಕಷ್ಟ, ನೋವುಗಳಿಗೆ ನನ್ನ ನೆನಪಿನಲ್ಲಿ ನಿಮ್ಮ ಮನೆ ಮಗನಾಗಿ ಸೇವೆ ಮಾಡುತ್ತೇನೆ. ಅಧಿಕಾರಿ ಇರಲಿ, ಇಲ್ಲದಿರಲಿ ನಿಮ್ಮ ಸೇವೆಗೆ ಸದಾ ಸಿದ್ದ . ಮುಂಬರುವ ಜಿಬಿಎ ಪಂಚ ಪಾಲಿಕೆ ಚುನಾವಣೆ ಮತ್ತು 2028ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಪಕ್ಷ ಆಡಳಿತ ಚುಕ್ಕಾಣಿ ಹಿಡಿಯಲಿದೆ ಎಂದು ಹೇಳಿದರು.

ಮಂಡಲದ ಅಧ್ಯಕ್ಷರಾದ ಮಂಜುನಾಥ್ , ಮಾಜಿ ಪಾಲಿಕೆ ಸದಸ್ಯರುಗಳಾದ ರಾಮಪ್ಪ, ರಾಜೇಶ್ವರಿ, ಜಯರತ್ನ ಮತ್ತು ಬಿಜೆಪಿ ಮುಖಂಡರುಗಳಾದ ಕ್ರಾಂತಿರಾಜು, ದೊಡ್ಡವೀರಯ್ಯ, ನಾಗರಭಾವಿ ಎಸ್.ರಾಜು ರವರು, ಬಿಜೆಪಿ ಕಾರ್ಯಕರ್ತರು, ಸ್ಥಳೀಯ ನಾಗರಿಕರು ಪಾಲ್ಗೊಂಡಿದ್ದರು.

## ಅಂಬೇಡ್ಕರ್ ಅವರ ತತ್ವಸಿದ್ಧಾಂತಗಳನ್ನು ಮೈಕೊಂಡಿಸಿಕೊಂಡಾಗ ಮಾತ್ರ ಸಮಸಮಾಜ ನಿರ್ಮಾಣ ಸಾಧ್ಯ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೆ. ಆರ್.ಪುರ

ಅಂಬೇಡ್ಕರ್ ಅವರ ತತ್ವಸಿದ್ಧಾಂತಗಳನ್ನು ಮೈಕೊಂಡಿಸಿಕೊಂಡಾಗ ಮಾತ್ರ ಸಮಸಮಾಜ ನಿರ್ಮಾಣ ಸಾಧ್ಯವೆಂದು ಭಾರತ ರತ್ನ ಡಾ. ಬಿಆರ್‌ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಂಘ ರಾಜ್ಯಾಧ್ಯಕ್ಷ ಕಣ್ಣೂರು ನಾಗೇಂದ್ರ ತಿಳಿಸಿದರು. ಮಹದೇವಪುರ ಕ್ಷೇತ್ರದ ಕಣ್ಣೂರು ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಆಶೋಕ ಅವರ ಮಾರ್ಗದರ್ಶನದಲ್ಲಿ ಸಂಘದವತಿಯಿಂದ ಆಯೋಜಿಸಿದ ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತಿಯಲ್ಲಿ ಭಾಗಿಯಾಗಿ ಮತನಾಡಿದ ಅವರು. ಸಮಾಜದಲ್ಲಿ ನಾವೆಲ್ಲ ಒಂದೆ ಎಂಬ ಭಾವನೆ ಹುಟ್ಟುಹಾಕಿ, ತಾರತಮ್ಯ ಭಾವನೆಯನ್ನು ಮಟ್ಟಹಾಕಿದ ಮಹನ್ ಚೇತನ ಅಂಬೇಡ್ಕರ್‌ಅವರು ತತ್ವಗಳನ್ನು ಇಂದಿನ ಜನ ಅನುಸರಿಸಿಬೇಕಿದೆ ಎಂದರು.

ಇದೇ ವೇಳೆ ರಾಜ ಬೀದಿಗಳಲ್ಲಿ ಅಂಬೇಡ್ಕರ್ ಅವರ ರಥ ಮೆರವಣಿಗೆ, ಅನ್ನ ದಾಸೋಹ, ಸೇರಿದಂತೆ ಮತ್ತಿತರ ಸೇವಾ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿತ್ತು. ಶಕ್ತಿ ಕೇಂದ್ರ ಅಧ್ಯಕ್ಷರಾದ ಗೋಪಾಲ್. ಎಸ್ ಬಿ, ಬೆಂ. ಪೂರ್ವ ತಾಲ್ಲೂಕು ಅಧ್ಯಕ್ಷ ಆರ್. ನಾಗರಾಜ್, ಸಂಘದ ಕಣ್ಣೂರು ಯುವ ಅಧ್ಯಕ್ಷ ಶ್ರೀಧರ್ ಎಂ, ಗೌರವಾಧ್ಯಕ್ಷ ದೇವೇಂದ್ರ, ಪ್ರಧಾನ ಕಾರ್ಯದರ್ಶಿ ಅಜಯ್ ಕುಮಾರ್, ಪುನೀತ್, ಎಸ್.ಎ.ಎಸ್ ಅರುಣ್, ಗ್ರಾಮಸ್ಥರು ಇದ್ದರೂ.

## ಪ್ಯಾರಾಚೂಟ್ ತರಬೇತಿ ವೇಳೆ 50 ಅಡಿ ಎತ್ತರದಿಂದ ಬಿದ್ದ ಯೋಧ

• ಉದಯವಾಹಿನಿ, ಬೆಂಗಳೂರು

ತರಬೇತಿ ವೇಳೆ ಪ್ಯಾರಾಚೂಟ್‌ನಿಂದ ಇಳಿಯುತ್ತಿದ್ದ ಸೈನಿಕರೊಬ್ಬರು 50 ಅಡಿ ಎತ್ತರದಿಂದ ಬಿದ್ದು ಗಂಭೀರ ಗಾಯಗೊಂಡಿರುವ ಘಟನೆ ಬಳ್ಳಾರಿ ಜಿಲ್ಲೆಯ ಈರಾಪುರ ಬಳಿ ನಡೆದಿದೆ. ಈ ಸ್ಥಳದಲ್ಲಿ ಹಲವಾರು ಸೈನಿಕರಿಗೆ ಪ್ಯಾರಾಚೂಚ್ ತರಬೇತಿಗಾಗಿ ಕರೆದುಕೊಂಡು ಬರಲಾಗಿತ್ತು. ಏರ್‌ಫೋರ್ಸ್ ಹೆಲಿಕಾಫ್ಟರ್‌ನಿಂದ ಪ್ಯಾರಾಚೂಟ್ ಅಳವಡಿಸಿಕೊಂಡು ಕೆಳಗೆ ಜಿಗಿಯುವ ತರಬೇತಿ ನಡೆಯುತ್ತಿತ್ತು.

ಆ ಸಂದರ್ಭದಲ್ಲಿ ಸೈನಿಕರೊಬ್ಬರು ಪ್ಯಾರಾಚೂಟ್‌ನಿಂದ ಜಿಗಿಯುವ ವೇಳೆ ಅವಘಡ ಉಂಟಾಗಿ 50 ಅಡಿ ಎತ್ತರದಿಂದ ಏಕಾಏಕಿ ನೆಲಕ್ಕೆ ಅಪ್ಪಳಿಸಿದ್ದರಿಂದ ಕಾಲಿನ ಮೂಳೆ ಮುರಿದಿದೆ. ತಕ್ಷಣ ಸೇನೆಯವರೇ ಅವರನ್ನು ಬಳ್ಳಾರಿಯಿಂದ ಏರ್‌ಲಿಫ್ಟ್ ಮೂಲಕ ನಗರದ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆಗೆ ದಾಖಲಿಸಿದ್ದು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

## ದಶಕಗಳ ನಂತರವೂ ಕಾಂಗ್ರೆಸ್ ಮಹಿಳಾ ವಿರೋಧಿ ಮನಸ್ಥಿತಿ ಬದಲಾಗಿಲ್ಲ

• ಉದಯವಾಹಿನಿ, ಬೆಂಗಳೂರು

ಮೂರು ದಶಕಗಳ ನಂತರವೂ ಕಾಂಗ್ರೆಸ್ ಪಕ್ಷದ ಮಹಿಳಾ ವಿರೋಧಿ ಮನಸ್ಥಿತಿ ಕೊಂಚವೂ ಬದಲಾಗಿಲ್ಲ ಎನ್ನುವುದಕ್ಕೆ ಲೋಕಸಭೆ ಮತ್ತೊಮ್ಮೆ ಸಾಕ್ಷಿಯಾಯಿತು ಎಂದು ಕೇಂದ್ರದ ಭಾರೀ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದ್ದಾರೆ. 1996 ರಲ್ಲಿ ಎಚ್.ಡಿ.ದೇವೇಗೌಡ ಅವರ ನೇತೃತ್ವದ ಸಂಯುಕ್ತ ರಂಗ ಸರ್ಕಾರವು ಲೋಕಸಭೆ, ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲು ನೀಡುವ ಕ್ರಾಂತಿಕಾರಿ ನಿರ್ಧಾರ ಕೈಗೊಂಡು ಸಂಸತ್ತಿನಲ್ಲಿ ಮಸೂದೆ ಮಂಡಿಸಿತ್ತು. ಆಗ ಇದೇ ಕಾಂಗ್ರೆಸ್, ಅದರ ಸಹಚರ ಶಕ್ತಿಗಳು ಆ ಪ್ರಯತ್ನವನ್ನು ಸಂಘಟಿತವಾಗಿ ವಿಫಲಗೊಳಿಸಿದ್ದವು ಎಂದು ತಮ್ಮ ಎಕ್ಸ್ ಖಾತೆಯಲ್ಲಿ ಅವರು ಟೀಕಿಸಿದ್ದಾರೆ.

ಆಗ ಮಹಿಳೆಯರಿಗೆ ಆಗಿದ್ದ ಐತಿಹಾಸಿಕ ಅನ್ಯಾಯ ಸರಿಪಡಿಸಲು ಪ್ರಧಾನಿ ನರೇಂದ್ರ ಮೋದಿಯವರು ದಿಟ್ಟಹೆಜ್ಜೆ ಇರಿಸಿದ್ದರು. ಮತ್ತೆ ಅದೇ ಕಾಂಗ್ರೆಸ್, ಅದರ ಮಿತ್ರಪಕ್ಷಗಳು ಸೇರಿ ಮೋದಿ ಅವರ ಪ್ರಯತ್ನಕ್ಕೆ ತಡೆಯೊಡ್ಡಿವೆ. ಮಹಿಳಾ ಮೀಸಲು ಮಸೂದೆಯನ್ನು ಸೋಲಿಸಿದ ಕೂಟದ ಶಕ್ತಿಗಳನ್ನು ರಾಷ್ಟ್ರದ ನಾರಿಶಕ್ತಿ ಎಂದಿಗೂ ಕ್ಷಮಿಸುವುದಿಲ್ಲ. ಇದು ಮಾತೃಶಕ್ತಿಗೆ ಆಗಿರುವ ಅಪಮಾನ. ಇದಕ್ಕೆ ಕಾರಣರಾದ ಎಲ್ಲರೂ ತಕ್ಕ ಶಾಸ್ತಿ ಅನುಭವಿಸಬೇಕಾಗುತ್ತದೆ ಎಂದು ಅವರು ವಾಗ್ದಾಳಿ ನಡೆಸಿದ್ದಾರೆ. ರಾಷ್ಟ್ರದ ನಾರಿಶಕ್ತಿಗೆ ನನ್ನ ಮನವಿ ಇಷ್ಟೇ, ನಿರಾಶೆ ಬೇಕಿಲ್ಲ, ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಮುಂದೊಂದು ದಿನ ನಿಮಗೆ ಅಗ್ರಮನ್ನಣೆ ಸಿಕ್ಕೇ ಸಿಗುತ್ತದೆ. ಶೇ.33ರಷ್ಟು ಮಹಿಳಾ ಮೀಸಲು ಗುರಿ ಸಾಧಿಸುವುದು ಶತಸ್ಸಿದ್ಧ ಎಂದು ಶಪಥ ಮಾಡಿದ್ದಾರೆ.

## ಶೀಘ್ರ ವೇತನಸಹಿತ ಮುಟ್ಟಿನ ರಜೆ ನೀತಿ ಜಾರಿ: ಸಚಿವ ಸಂತೋಷ್ ಲಾಡ್

• ಉದಯವಾಹಿನಿ, ಬೆಂಗಳೂರು

ಹೈಕೋರ್ಟ್ ನಿರ್ದೇಶನದ ನಂತರ, ಎಲ್ಲಾ ವಲಯಗಳಲ್ಲಿ ವೇತನ ಸಹಿತ ಮುಟ್ಟಿನ ರಜೆ ನೀತಿಯನ್ನು ಸಾಧ್ಯವಾದಷ್ಟು ಬೇಗ ಕಟ್ಟುನಿಟ್ಟಾಗಿ ಜಾರಿಗೆ ತರುವುದಾಗಿ ಕಾರ್ಮಿಕ ಸಚಿವ ಸಂತೋಷ್ ಲಾಡ್‌ಹೇಳಿದ್ದಾರೆ. ಔಪಚಾರಿಕವಾಗಿ ನಿಯಮ ಜಾರಿಗೆ ಬರುವವರೆಗೆ, ಮುಟ್ಟಿನ ರಜೆ ನೀತಿಯನ್ನು ಕಟ್ಟುನಿಟ್ಟಾಗಿ ಮತ್ತು ನಿಷ್ಠೆಯಿಂದ ಜಾರಿಗೆ ತರುವಂತೆ ಕರ್ನಾಟಕ ಹೈಕೋರ್ಟ್ ಇತ್ತೀಚೆಗೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ನಮ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ನೀತಿಯಾದ ಋತುಚಕ್ರ ರಜೆ ನೀತಿಗೆ ಪೂರಕವಾಗಿ ಕರ್ನಾಟಕ ಉಚ್ಚನ್ಯಾಯಾಲಯ ನೀಡಿರುವ ನಿರ್ದೇಶನವನ್ನು ಸ್ವಾಗತಿಸುತ್ತೇನೆ. ಋತುಚಕ್ರ ರಜೆನೀತಿಯನ್ನು ಇಡೀ ದೇಶದಲ್ಲೇ ಸಮರ್ಪಕವಾಗಿ ಹಾಗೂ ಮಾದರಿಯಾಗಿ ಜಾರಿಗೆ ತರುವ ನಿಟ್ಟಿನಲ್ಲಿ ನಮ್ಮ ರಾಜ್ಯ ಸರ್ಕಾರ ದಿಟ್ಟ ಹೆಜ್ಜೆ ಇರಿಸಿದೆ.

ಘನ ನ್ಯಾಯಾಲಯದ ಅಭಿಪ್ರಾಯದಂತೆ ಮುಟ್ಟಿನ ರಜೆಯು ಮಹಿಳೆಯರ ಘನತೆ, ನ್ಯಾಯಯುತ, ಅವರ ವಾಸ್ತವಿಕ ಬದುಕಿನ ಮಾನವೀಯ ಅರಿವು ಎಂಬುದನ್ನು ಮೂಲ ಆಶಯವಾಗಿಟ್ಟುಕೊಂಡು ಅತಿ ಶೀಘ್ರದಲ್ಲಿ ಎಲ್ಲಾ ವಲಯಗಳಲ್ಲೂ ಸಹ ತಿಂಗಳಿಗೆ ಒಂದರಂತೆ ಒಟ್ಟು ವರ್ಷಕ್ಕೆ 12 ವೇತನ ಸಹಿತ ಋತುಚಕ್ರ ರಜೆ ನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಗುವುದು ಎಂದು ತಮ ಎಕ್ಸ್‌ಖಾತೆಯಲ್ಲಿ ಸಂತೋಷ್ ಲಾಡ್ ಬರೆದುಕೊಂಡಿದ್ದಾರೆ.

# ಜಿಬಿಎ ಪಂಚ ನಗರ ಪಾಲಿಕೆಗಳ ಚುನಾವಣೆ ಸದ್ಯಕ್ಕಿಲ್ಲ

## ಸೆ. 30 ರವರೆಗೆ ಪಾಲಿಕೆ ಚುನಾವಣೆಗೆ ಕಾಲಾವಧಿ ವಿಸ್ತರಿಸಲು ಕೋರಿಕೆ

• ಉದಯವಾಹಿನಿ, ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಪಂಚ ನಗರ ಪಾಲಿಕೆಗಳಿಗೆ ಸದ್ಯಕ್ಕೆ ಚುನಾವಣೆ ನಡೆಯುವ ಲಕ್ಷಣಗಳೇ ಕಾಣುತ್ತಿಲ್ಲ. ಕಳೆದ ಐದೂವರೆ ವರ್ಷಗಳಿಂದ ಒಂದಿಲ್ಲೊಂದು ಕಾರಣಗಳ ಮೂಲಕ ಚುನಾವಣೆಯನ್ನು ಮುಂದೂಡಿಕೊಂಡು ಬರಲಾಗುತ್ತಿದೆ.

**ಚುನಾವಣಾ ಆಯೋಗಕ್ಕೆ ಪತ್ರ**

ರಾಜ್ಯ ಸರಕಾರವು ಬಿಬಿಎಂಪಿ ವಿಭಜಿಸಿ, ಜಿಬಿಎ ಅಡಿಯಲ್ಲಿ ಪಂಚ ನಗರ ಪಾಲಿಕೆಗಳನ್ನು ರಚಿಸಿ 369 ವಾರ್ಡ್‌ಗಳನ್ನು ವಿಂಗಡಣೆ ಮಾಡಿತು ಅಲ್ಲದೆ, ವಾರ್ಡ್‌ವಾರು ಅಂತಿಮ ಮೀಸಲಾತಿ ಪಟ್ಟಿಯನ್ನೂ ಪ್ರಕಟಿಸಿತು ಇದರಿಂದ ಶೀಘ್ರದಲ್ಲೇ ಚುನಾವಣೆ ನಡೆಯಬಹುದೆಂದು ಎಲ್ಲರೂ ಭಾವಿಸಿದ್ದರು. ಆದರೆ, ಇದೀಗ ಸರಕಾರ, ರಾಷ್ಟ್ರೀಯ ಜನಗಣತಿಯನ್ನು ಮುಂದಿಟ್ಟುಕೊಂಡು ಪಂಚ ನಗರ ಪಾಲಿಕೆಗಳ ಚುನಾವಣೆ ಮುಂದೂಡಲು ರಾಜ್ಯ ಚುನಾವಣಾ ಆಯೋಗವನ್ನು ಕೋರಿದೆ.

**ಸೆ.30ರವರೆಗೆ ಕಾಲಾವಧಿ ವಿಸ್ತರಣೆ:** ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಜನಗಣತಿ ಕಾರ್ಯಕ್ಕೆ ಅಧಿಕ ಅಧಿಕಾರಿ, ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತಿದೆ. ಈ ಹಿನ್ನಲೆಯಲ್ಲಿ ಪಂಚ ನಗರ ಪಾಲಿಕೆಗಳಿಗೆ ಚುನಾವಣೆ ನಡೆಸುವ ಕಾಲಾವಧಿಯನ್ನು ಸೆ.30ರವರೆಗೆ ವಿಸ್ತರಿಸಬೇಕೆಂದು ಕೋರಿ ಜಿಬಿಎ ಮುಖ್ಯ ಆಯುಕ್ತ ಎಂ.ಮಹೇಶ್ವರ ರಾವ್ ಅವರು ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ರಾಜ್ಯ ಚುನಾವಣಾ ಆಯುಕ್ತರಿಗೆ ಏ.6ರಂದು ಪತ್ರ ಬರೆದಿದ್ದರು. 'ಜನಗಣತಿ ಕಾರ್ಯವು ಶಾಸನಬದ್ಧ ಕಾರ್ಯವಾಗಿದೆ. ಅಲ್ಲದೆ, ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕಿದೆ. ಇದರಲ್ಲಿಇಡೀ ಆಡಳಿತ ಯಂತ್ರವು ತೊಡಗಲಿದೆ. ಅಲ್ಲದೆ, ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆಯನ್ನೂ (ಎಸ್‌ಐಆರ್) ಏಕಕಾಲದಲ್ಲಿಕೈಗೊಳ್ಳುವ ನಿರೀಕ್ಷೆ ಇದೆ. ಜತೆಗೆ ಮೇ, ಜೂನ್ ತಿಂಗಳಲ್ಲಿಪರೀಕ್ಷಾ ಕರ್ತವ್ಯಗಳಿಗೆ ಸಿಬ್ಬಂದಿ ನಿಯೋಜಿಸುವುದರಿಂದ ಲಭ್ಯವಿರುವ ಮಾನವಶಕ್ತಿ ಮತ್ತಷ್ಟು ಕಡಿಮೆಯಾಗಲಿದೆ. ಆದ




ಕಾರಣ, ಜಿಬಿಎ ನಗರ ಸ್ಥಳೀಯ ಸಂಸ್ಥೆಗಳ ಚುನಾವಣಾ ಕಾಲಾವಧಿಯನ್ನು ಸೆ.30ರವರೆಗೆ ವಿಸ್ತರಿಸಬೇಕು ಎಂದು ಮನವಿ ಮಾಡಿಕೊಂಡಿದ್ದರು.

ಈ ಹಿನ್ನೆಲೆಯಲ್ಲಿಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿ ಡಾ. ಕೆ.ಜಿ.ಜಗದೀಶ್, ರಾಜ್ಯ ಚುನಾವಣಾ ಆಯೋಗದ ಕಾರ್ಯದರ್ಶಿ ಎಸ್. ಹೊನ್ನಾಂಬ ಅವರಿಗೆ ಪತ್ರ ಬರೆದು ಚುನಾವಣಾ ಕಾಲಮಿತಿಯನ್ನು ಸೆ.30ರವರೆಗೆ ವಿಸ್ತರಿಸಬೇಕೆಂದು ಕೋರಿ ಪತ್ರ ಬರೆದಿದ್ದಾರೆ. ಹೀಗಾಗಿ, ಸದ್ಯಕ್ಕೆ ಚುನಾವಣೆ ನಡೆಯುವ ಲಕ್ಷಣಗಳು ಕಾಣುತ್ತಿಲ್ಲ.

**ಐದೂವರೆ ವರ್ಷದಿಂದ ಜನಪ್ರತಿನಿಧಿಗಳಿಲ್ಲ:** ರಾಜ್ಯದ ಶಕ್ತಿ ಕೇಂದ್ರವಾಗಿರುವ ಬೆಂಗಳೂರಿನಲ್ಲಿ ಕಳೆದ ಐದೂವರೆ ವರ್ಷಗಳಿಂದ ಚುನಾಯಿತ ಕೌನ್ಸಿಲರ್‌ಗಳೇ ಇಲ್ಲ. ಬಿಬಿಎಂಪಿಯ 198 ವಾರ್ಡ್‌ಗಳಿಂದ ಆಯ್ಕೆಯಾಗಿದ್ದ ಚುನಾಯಿತ ಜನಪ್ರತಿನಿಧಿಗಳ ಅಧಿಕಾರಾವಧಿ 2020ರ ಸೆ.10ಕ್ಕೆ ಅಂತ್ಯಗೊಂಡಿತು. ಆಗಿನಿಂದಲೂ ಅಧಿಕಾರಿಗಳೇ ಆಡಳಿತ ನಿರ್ವಹಿಸುತ್ತಿದ್ದಾರೆ. ಆಗ ಅಧಿಕಾರದಲ್ಲಿದ್ದ ಬಿಜೆಪಿ ಸರಕಾರವು, ಬಿಬಿಎಂಪಿಗೆ ಪ್ರತ್ಯೇಕ ಕಾಯಿದೆ ರೂಪಿಸಿ ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸಿತು. ಇದನ್ನೇ ನೆಪವಾಗಿಟ್ಟುಕೊಂಡು ಚುನಾವಣೆ ಮುಂದೂಡಿಕೊಂಡು ಬರಲಾಯಿತು. ಆನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರಕಾರವು, ವಿಭಜನೆಯ ಮಂತ್ರ ಜಪಿಸುತ್ತಾ ಚುನಾವಣೆ ನಡೆಸಲಿಲ್ಲ. ವಿಭಜನೆ ಬಳಿಕವೂ ಒಂದಿಲ್ಲೊಂದು ಕಾರಣವೊಡ್ಡುತ್ತಾ ಚುನಾವಣೆ ನಡೆಸಲು ಹಿಂದೇಟು ಹಾಕಲಾಗುತ್ತಿದೆ. ಜಿಬಿಎ ವ್ಯಾಪ್ತಿಯ 5 ನಗರ ಪಾಲಿಕೆಗಳ ಚುನಾವಣೆಗೆ ವಾರದೊಳಗೆ ನಿಯಮಗಳನ್ನು ರೂಪಿಸಬೇಕೆಂದು ಸುಪ್ರೀಂಕೋರ್ಟ್ ರಾಜ್ಯಕ್ಕೆ 2025ರ ಆಗಸ್ಟ್‌ನಲ್ಲೇ ತಾಕೀತು ಮಾಡಿತ್ತು. ಸರಕಾರ ಕೂಡ 2025ರ ಡಿಸೆಂಬರ್ ನೊಳಗೆ ಚುನಾವಣೆ ನಡೆಸುವುದಾಗಿ ಪ್ರಮಾಣಪತ್ರ ಸಲ್ಲಿಸಿತ್ತು.

**ವಿಳಂಬಗೊಳಿಸುವ ಮುನ್ಸೂಚನೆ**

**ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಅಡಿಯಲ್ಲಿ ಬರುವ ಐದು ನಗರ ಪಾಲಿಕೆಗಳಿಗೆ ಚುನಾವಣೆ ನಡೆಯುವುದು ಸದ್ಯಕ್ಕೆ ಅನುಮಾನವಾಗಿ ಕಾಣುತ್ತಿದೆ. ಕಳೆದ ಐದೂವರೆ ವರ್ಷಗಳಿಂದಲೂ ವಿವಿಧ ನೆಪಗಳ ಮೂಲಕ ಚುನಾವಣೆಯನ್ನು ಮುಂದೂಡುತ್ತಾ ಬರಲಾಗುತ್ತಿದ್ದು, ಸದ್ಯದ ಬೆಳವಣಿಗೆಗಳು ಇದನ್ನು ಮತ್ತಷ್ಟು ವಿಳಂಬಗೊಳಿಸುವ ಮುನ್ಸೂಚನೆ ನೀಡುತ್ತಿವೆ.**

ಆದರೆ, ಇದಾಗಿ 4 ತಿಂಗಳು ಕಳೆದರೂ ಚುನಾವಣೆಯ ಕಾವು ಕಂಡುಬರಲಿಲ್ಲ. ಸರಕಾರ 369 ವಾರ್ಡ್‌ಗಳನ್ನು ವಿಂಗಡಿಸಿ, ವಾರ್ಡ್‌ವಾರು ಮೀಸಲಾತಿ ಪ್ರಕಟಿಸಿದ ನಂತರ ಆಕಾಂಕ್ಷಿತ ಅಭ್ಯರ್ಥಿಗಳು ಚುನಾವಣೆ ನಡೆಯಬಹುದೆಂದು ಚಾತಕ ಪಕ್ಷಿಗಳಂತೆ ಕಾಯುತ್ತಿದ್ದರು. ಬಿಜೆಪಿ, ಜೆಡಿಎಸ್ ಪಕ್ಷಗಳು ಚುನಾವಣೆಗೆ ತಯಾರಿ ಮಾಡಿಕೊಂಡಿದ್ದವು. ಆಕಾಂಕ್ಷಿತ ಅಭ್ಯರ್ಥಿಗಳು ಜನರ ಮನ ಗೆಲ್ಲಲು ನಾನಾ ಕಸರತ್ತುಗಳನ್ನು ನಡೆಸುತ್ತಿದ್ದಾರೆ.

ಈ ಮಧ್ಯೆ, ಸರಕಾರವೇ ಚುನಾವಣೆಯ ಕಾಲಾವಧಿಯನ್ನು ವಿಸ್ತರಿಸಲು ಆಯೋಗಕ್ಕೆ ಮನವಿ ಸಲ್ಲಿಸಿರುವುದು ಹಲವರಲ್ಲಿ ನಿರಾಸೆ ಮೂಡಿಸಿದೆ. ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ಮಳೆ ಆರ್ಭಟ ಜೋರಿರುತ್ತದೆ. ಅಲ್ಲದೆ, ಚುನಾವಣೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲು ಸಾಕಷ್ಟು ಸಮಯ ಬೇಕಾಗುತ್ತದೆ. ಹೀಗಾಗಿ, ಈ ವರ್ಷವೂ ಚುನಾವಣೆ ನಡೆಯುವ ಸಾಧ್ಯತೆಗಳು ಕಾಣುತ್ತಿಲ್ಲ.

## ಮುಖ್ಯಮಂತ್ರಿಗಳಿಂದ ಡಾ. ಡಿ. ಸಿ. ರಾಮಚಂದ್ರರವರ ನಾಥ ಪರಂಪರೆ ಕೃತಿ ಲೋಕಾರ್ಪಣೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಸಾಹಿತಿಗಳಿಗೆ ಪ್ರೋತ್ಸಾಹ ನೀಡುವುದು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಅತ್ಯಗತ್ಯವೆಂದು ಭಾವಿಸಿದ ಕರ್ನಾಟಕ ಸರ್ಕಾರದ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕರ್ನಾಟಕದ ಬಹುಮುಖಿ ಪರಂಪರೆಯನ್ನು ಪ್ರತಿನಿಧಿಸುವ ಕನ್ನಡ ಸಾಮರಸ್ಯ ನೆಲೆಗಳು ಶೀರ್ಷಿಕೆಯಡಿ 41 ಕೃತಿಗಳ ಲೋಕಾರ್ಪಣೆ ಸಮಾರಂಭವು ದಿನಾಂಕ 15.4.2026 ರಂದು ವಿಧಾನಸೌಧದ ಬ್ಯಾಂಕ್ ವೆಟ್ ಹಾಲ್‌ನಲ್ಲಿ ಜರುಗಿತು. ಈ ಸಮಾರಂಭದಲ್ಲಿ ಶ್ರೀ ಕ್ಷೇತ್ರ ಆದಿಚುಂಚನಗಿರಿಯಲ್ಲಿ ಸೇವೆ ಸಲ್ಲಿಸುತ್ತಿರುವ ಡಾಕ್ಟರ್ ಡಿ.ಸಿ. ರಾಮಚಂದ್ರ ಅವರ ಲೇಖನಿಯಿಂದ ಹೊರಬಂದ ನಾಥ ಪರಂಪರೆ ಕೃತಿಯು ಲೋಕಾರ್ಪಣೆಗೊಂಡಿತು.



ಕರ್ನಾಟಕದ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ 41 ಕೃತಿಗಳನ್ನು ಲೋಕಾರ್ಪಣೆಗೊಳಿಸಿದರು. ಈ ಕಾರ್ಯಕ್ರಮದಲ್ಲಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿರುವ ಶ್ರೀ ಪುರುಷೋತ್ತಮ ಬಿಳಿಮಲೆಯವರು, ಕಾರ್ಯದರ್ಶಿಗಳಾದ ಡಾಕ್ಟರ್ ಸಂತೋಷ ಹಾನಗಲ್ ರವರು,ಸರ್ಕಾರದ ಇನ್ನಿತರ ಸಚಿವರು, ಶಾಸಕರು ಸಾಹಿತಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಡಾ. ಡಿ. ಸಿ. ರಾಮಚಂದ್ರರವರಿಂದ ಸಾರಸ್ವತ ಲೋಕವನ್ನು ಪ್ರವೇಶಿಸುತ್ತಿರುವ ನಾಥ ಪರಂಪರೆಯು ಇವರ ಏಳನೇ ಕೃತಿಯಾಗಿದೆ. ದೇಶದ ಸ್ವಾಭಿಮಾನವನ್ನು, ಸಂಸ್ಕೃತಿಯನ್ನು ವಿಶ್ವದ ಉದ್ದಗಲಕ್ಕೂ ಬೆಳಗಿಸಿದ ಹಲವು ಭಕ್ತಿ ಪಂಥಗಳಲ್ಲಿ ನಾಥಪಂಥವು ಒಂದಾಗಿದೆ. ಮುಂದಿನ ಪೀಳಿಗೆಗೆ ನಾಥ ಸಂಸ್ಕೃತಿಯ ಚರಿತ್ರೆಯ ಪುಟಗಳನ್ನು ತೆರೆದಿಡುವ ಕಿರು ಪ್ರಯತ್ನವನ್ನು ಈ ಕೃತಿಯಲ್ಲಿ ಮಾಡಿರುವುದಾಗಿ ಲೇಖಕರಾದ ಡಾ. ಡಿ.ಸಿ ರಾಮಚಂದ್ರ ರವರ ಅಭಿಮತವಾಗಿದೆ.

ಈ ಸಂದರ್ಭದಲ್ಲಿ ಮಾಗಡಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ದೊಡ್ಡ ಸೋಮನಹಳ್ಳಿಯ ಸಮೃದ್ಧಿ ಗ್ರಾಮೀಣಾಭಿವೃದ್ಧಿ ಸಂಸ್ಥೆ(ರಿ), ತಾಲ್ಲೂಕಿನ ಸಾಹಿತ್ಯಾಸಕ್ತರು, ಸಂಪ್ರೀತಿ ಪತ್ರಿಕೆಯ ಓದುಗರು, ದೊಡ್ಡಸೋಮನಹಳ್ಳಿ ಗ್ರಾಮಸ್ಥರು, ಮಿತ್ರರು ಡಾ. ಡಿ.ಸಿ.ರಾಮಚಂದ್ರರವರನ್ನ ಅಭಿನಂದಿಸಿದ್ದಾರೆ. ಇವರ ಲೇಖನಿಯಿಂದ ಮತ್ತಷ್ಟು ಕೃತಿಗಳು ಸಾಹಿತ್ಯ ಲೋಕವನ್ನು ಪ್ರವೇಶಿಸಲಿ ಎಂದು ಹಾರೈಸಿದ್ದಾರೆ.

## ಸಿದ್ದರಾಮಯ್ಯ ಬಣದ ನಾಯಕರೇ ಡಿಕೆಶಿ ಟಾರ್ಗೆಟ್

• ಉದಯವಾಹಿನಿ,ಬೆಂಗಳೂರು

ಸಿಎಂ ಸಿದ್ದರಾಮಯ್ಯ ಬಣದಲ್ಲಿ ಗುರುತಿಸಿಕೊಂಡಿರುವವರನ್ನು ಡಿಸಿಎಂ ಡಿ.ಕೆ.ಶಿವಕುಮಾರ್ ಹೊಡಿ ಮಗ ಹೊಡಿ ಮಗ ಎನ್ನುವಂತೆ ಹುಡುಕಿ ಹುಡುಕಿ ಹೊಡೆಯುತ್ತಿದ್ದಾರೆ ಎಂದು ವಿಧಾನಸಭಾ ಪ್ರತಿಪಕ್ಷದ ನಾಯಕ ಆರ್.ಅಶೋಕ್ ವ್ಯಂಗ್ಯವಾಡಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಸಚಿವ ರಾಜಣ್ಣ ಹೇಳಿದಂತೆ ಸಿದ್ದರಾಮಯ್ಯ ಈಗ ಮೊದಲಿನಂತಿಲ್ಲ. ಕುರ್ಚಿ ಉಳಿಸಿಕೊಳ್ಳಲು ಅವರು ಅಸಹಾಯಕರಾಗಿಯೇ ಇದ್ದಾರೆ. ಅವರ ಜೊತೆ ಗುರುತಿಸಿಕೊಂಡಿದ್ದ ಮಾಜಿ ಸಚಿವ ನಾಗೇಂದ್ರ, ರಾಜಣ್ಣ, ಗೋವಿಂದರಾಜ್, ಅಬ್ದುಲ್ ಜಬ್ಬಾರ್ ಹೀಗೆ ಹಲವರನ್ನು ಡಿ.ಕೆ.ಶಿವಕುಮಾರ್ ಟಾರ್ಗೆಟ್ ಮಾಡಿದ್ದಾರೆ ಎಂದು ಎಚ್ಚರಿಸಿದರು. ಆದರೆ ಡಿಕೆಶಿ ದೊಡ್ಡದೊಡ್ಡವರನ್ನು ಬಿಟ್ಟು ಕೇವಲ ಸಣ್ಣಪುಟ್ಟ ಹುಳಹುಪ್ಪಡಿಗಳನ್ನು ಹುಡುಕಿ ಹೊಡೆಯುತ್ತಿದ್ದಾರೆ. ಹೇಗಾದರೂ ಮಾಡಿ ಸಿದ್ದರಾಮಯ್ಯ ಅವರನ್ನು ಬಲೆಗೆ ಬೀಳಿಸಲು ಷಡ್ಯಂತ್ರ ನಡೆಸುತ್ತಿದ್ದಾರೆ.

**ಹೊಡಿ ಮಗ ಹೊಡಿ ಮಗ**

ಅವರು ಬೀಳುತ್ತಿಲ್ಲ, ಇವರು ಬಿಡುತ್ತಿಲ್ಲ. ಇನ್ನು ಯಾವ ಹಂತಕ್ಕೆ ಹೋಗುತ್ತದೆಯೋ ಗೊತ್ತಿಲ್ಲ ಎಂದರು. ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸಿರುವ ರಾಜ್ಯದ ಜನತೆಗೆ ಸರ್ಕಾರ ವಿದ್ಯುತ್ ದರ ಪರಿಷ್ಕರಣೆ ಮಾಡಿ ಮತ್ತೆ ಬೆಲೆ ಏರಿಕೆ ಬಿಸಿ ಮುಟ್ಟಿಸಿದೆ. ಈಗಾಗಲೇ ಮೂರು ವರ್ಷ 65 ಸಾವಿರ ಕೋಟಿ ರೂ ದರ ಏರಿಕೆ ಮಾಡಿದ್ದಾರೆ. ಬೈಎಲೆಕ್ಷನ್ ಮುಗಿದಿದೆ, ಮತ್ತೆ ದರ ಏರಿಕೆ ಮುಂದುವರೆಸಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ರಾಜ್ಯದ ಜನ ಸಾಲು ಸಾಲು ತೆರಿಗೆ ಭಾರ ಹೊರಲು ತಯಾರಾಗಬೇಕು. ಸರ್ಕಾರದಲ್ಲಿ ಸಂಬಳ ಕೊಡಲೂ ಹಣ ಇಲ್ಲ. ಭಿಕ್ಷುಕರಿಗೆ, ಅನಾಥ ಮಕ್ಕಳಿಗೆ, ವೈದ್ಯರಿಗೆ, ಅಂಗನವಾಡಿ ಕಾರ್ಯಕರ್ತೆಯರಿಗೆ ಹಣ ಕೊಡಲು ಇಲ್ಲ ಎಂದು ಆರೋಪಿಸಿದರು. ಸೋಲುವ


ಉದಯವಾಹಿನಿ ಚಿತ್ರ

ಭೀತಿಯಿಂದಾಗಿ ರಾಜ್ಯಸರ್ಕಾರ ಜಿಬಿಎ ಚುನಾವಣೆ ನಡೆಸುವ ಸನ್ನಿವೇಶದಲ್ಲಿಲ್ಲ. ಹೀಗಾಗಿ ಕುಂಟುನೆಪ ಹೇಳಿ ಮುಂದೂಡುವ ಪ್ರಯತ್ನ ಮಾಡುತ್ತಿದೆ. ಚುನಾವಣೆ ನಡೆದರೆ ಅವರಿಗೆ ಸೋಲು ಕಟ್ಟಿಟ್ಟ ಬುತ್ತಿ ಎಂಬುದು ಗೊತ್ತಿದೆ. ಸೋಲು ಅವರಿಗೆ ನೆರಳಿನಂತೆ ಹಿಂದೆ ಬಿದ್ದಿದೆ. ಹೀಗಾಗಿ ಸೋಲುತ್ತೇವೆ ಎಂದು ಚುನಾವಣೆ ನಡೆಸುತ್ತಿಲ್ಲ. ಪಂಚ ಪಾಲಿಕೆ ಮಾಡಿದ್ದೇ ಚುನಾವಣೆ ಮಾಡಬಾರದು ಎಂದು ದೂರಿದರು.

ಜಿಲ್ಲಾ ಪಂಚಾಯಿತಿ ಸದಸ್ಯ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಶಾಸಕ ವಿನಯ್ ಕುಲಕರ್ಣಿ ವಿರುದ್ಧ ಬಿಜೆಪಿ ಸಂಚು ರೂಪಿಸಿದೆ ಎಂಬ ಡಿಕೆಶಿ ಆರೋಪಕ್ಕೆ ಅಶೋಕ್ ತಿರುಗೇಟು ನೀಡಿದರು.

ಕಾಂಗ್ರೆಸ್‌ನವರು ಏನೇ ಮಾಡಿದರೂ ತಪ್ಪಿಲ್ಲ. ಬಿಜೆಪಿಯವರು ಮಾತ್ರ ಅವರಿಗೆ ತಪ್ಪಾಗಿ ಕಾಣಿಸುತ್ತಾರೆ. ವಿನಯ್ ಕುಲಕರ್ಣಿಗೆ ಕೊಲೆ ಮಾಡಲು ಯಾರು ಹೇಳಿದ್ದರು? ಡಿಕೆಶಿ ಹೇಳಲಿ ಎಂದು ಸವಾಲು ಎಸೆದರು.ಕೊಲೆ ಮಾಡಿದ್ದು ಸಾಬೀತಾಗಿದೆ, ಕೋರ್ಟ್ ಶಿಕ್ಷೆ ಕೊಟ್ಟಿದೆ. ಇದರಲ್ಲಿ ಬಿಜೆಪಿ ಸಂಚು ಎಲ್ಲಿಂದ ಬರುತ್ತದೆ? ಎಂದು ಅಶೋಕ್ ಪ್ರಶ್ನಿಸಿದರು.

## ಮಹಿಳೆಯರಿಗೆ ಮೀಸಲಾತಿ ತಪ್ಪಿಸಿದ ಕಾಂಗ್ರೆಸ್ ವಿರುದ್ಧ ಕೆರಳಿದ ಕೇಸರಿ ಪಡೆ : ದೇಶಾದ್ಯಂತ ಹೋರಾಟ

• ಉದಯವಾಹಿನಿ, ಬೆಂಗಳೂರು

ಬಹುನಿರೀಕ್ಷಿತ ಮಹಿಳಾ ಮೀಸಲಾತಿ ಮಸೂದೆಗೆ ಲೋಕಸಭೆಯಲ್ಲಿ ಅಂಗೀಕಾರವಾಗದೇ ಸೋಲುಂಟಾಗಿರುವುದರಿಂದ ಕೆರಳಿ ಕೆಂಡವಾಗಿರುವ ಬಿಜೆಪಿ ಪಕ್ಷವು ಕಾಂಗ್ರೆಸ್ ವಿರುದ್ಧ ದೇಶದಾದ್ಯಂತ ಬೀದಿಗಿಳಿದು ಹೋರಾಟ ನಡೆಸಲು ಮುಂದಾಗಿದೆ. ಬಿಜೆಪಿ, ಎನ್‌ಡಿಎ ಮೈತ್ರಿಕೂಟವಿರುವ ರಾಜ್ಯಗಳಲ್ಲಿ ಕಾಂಗ್ರೆಸ್, ಇಂಡಿಯಾ ಮೈತ್ರಿಕೂಟದ ವಿರುದ್ಧ ಕನ್ಯಾಕುಮಾರಿಯಿಂದ ಕಾಶೀರದವರೆಗೂ ದೇಶದ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಹೋರಾಟಕ್ಕೆ ಕರೆ ಕೊಟ್ಟಿದೆ.

ರಾಜ್ಯದಲ್ಲಿ ನಾಳೆಯಿಂದ ಬಿಜೆಪಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ನಡೆಸಲಿದ್ದು, ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲೂ ಕಾಂಗ್ರೆಸ್ ಸರ್ಕಾರದ ಮಹಿಳಾ ಧೋರಣೆ ವಿರುದ್ಧ ಪ್ರತಿಭಟನೆ ನಡೆಸಬೇಕೆಂದು ಎಲ್ಲಾ ಘಟಕಗಳಿಗೂ ಕರೆ ಕೊಟ್ಟಿದೆ. ಮುಂಬರುವ ತಮಿಳುನಾಡು ಮತ್ತು ಪ.ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್, ಅದರ ಮಿತ್ರಪಕ್ಷಗಳನ್ನು ಮಹಿಳಾ ವಿರೋಧಿ ಎಂದು ಬಿಂಬಿಸಲು ಮುಂದಾಗಿರುವ ಬಿಜೆಪಿ ಮಸೂದೆ ವಿರೋಧಿಸುವವರಿಗೆ ತಕ್ಕ ಪಾಠ ಕಲಿಸಬೇಕೆಂದು ಮತದಾರರಲ್ಲಿ ಮನವಿ ಮಾಡಿದೆ.

ಉಳಿದಿರುವ ದಿನಗಳಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹಸಚಿವ ಅಮಿತ್ ಶಾ ಸೇರಿದಂತೆ ಬಿಜೆಪಿ ನಾಯಕರು 2 ರಾಜ್ಯಗಳಲ್ಲಿ ಅಬ್ಬರದ ಪ್ರಚಾರ ನಡೆಸಿ ವಿಶೇಷವಾಗಿ ಕಾಂಗ್ರೆಸ್, ಡಿಎಂಕೆ, ಟಿಎಂಸಿ ಪಕ್ಷಗಳನ್ನು ಮಹಿಳಾ ವಿರೋಧಿ ಎಂದು ಬಿಂಬಿಸಲು ಮುಂದಾಗಿದೆ. ಲೋಕಸಭೆಯಲ್ಲಿ ಮಸೂದೆಗೆ ಸೋಲು ಉಂಟಾಗುತ್ತಿದ್ದಂತೆ ಬಿಜೆಪಿಯ ಮಹಿಳಾ ಸದಸ್ಯರು ಸಂಸತ್‌ನಲ್ಲಿ ಬೃಹತ್ ಪ್ರತಿಭಟನೆ ನಡೆಸಿ ಕಾಂಗ್ರೆಸ್ ಹಾಗೂ ಮಿತ್ರಪಕ್ಷದ ವಿರುದ್ಧ ಕಿಡಿಕಾರಿದ್ದಾರೆ.

**ಮಹಿಳೆಯರಿಗೆ ಮಾಡಿದ ಅಪಮಾನ**

**ನಾವು ಇದರ ವಿರುದ್ಧ ದೇಶದಾದ್ಯಂತ ಹೋರಾಟ ನಡೆಸಲಿದ್ದೇವೆ. ವಿರೋಧಪಕ್ಷಗಳು ಮಸೂದೆಗೆ ಬೆಂಬಲ ನೀಡಬಹುದೆಂದು ನಿರೀಕ್ಷೆ ಮಾಡಿದ್ದೆವು. ಇದು ಮಹಿಳೆಯರಿಗೆ ಮಾಡಿದ ಅಪಮಾನ. ಇದರ ವಿರುದ್ಧ ನಾವು ಹೋರಾಟ ನಡೆಸಲಿದ್ದೇವೆ ಎಂದರು. ಶಾಸನಸಭೆಗಳಲ್ಲಿ ಶೇ.33 ರಷ್ಟು ಮೀಸಲಾತಿ ಜಾರಿಗೆ ಬಂದರೆ ಬಿಜೆಪಿಗೆ ಅದರ ಶ್ರೇಯಸ್ಸು ಸಲ್ಲುತ್ತದೆ ಎಂಬ ಕಾರಣಕ್ಕೆ ವಿರೋಧಿಸಿದ್ದಾರೆ. ದೇಶದ ಜನತೆಗೆ ಇದನ್ನು ಮನವರಿಕೆ ಮಾಡಿಕೊಡುತ್ತೇವೆ ಎಂದು ತಿಳಿಸಿದರು.**

ಮುಂದಿನ ದಿನಗಳಲ್ಲಿ ಸಚಿವರು ಮತ್ತು ಸಂಸದರು ಆಯಾ ರಾಜ್ಯ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ, ಪತ್ರಿಕಾಗೋಷ್ಠಿ ನಡೆಸುವ ಮೂಲಕ ಕಾಂಗ್ರೆಸ್‌ನ ಅಸಲಿ ಮುಖವನ್ನು ಬಯಲು ಮಾಡುವಂತೆ ದೆಹಲಿ ಬಿಜೆಪಿ ನಾಯಕರು ರಾಜ್ಯ ನಾಯಕರಿಗೆ ಸೂಚಿಸಿದ್ದಾರೆ. ಪ್ರತಿಭಟನೆ, ಹೋರಾಟಗಳ ಬಗ್ಗೆ ಈಗಾಗಲೇ ರೂಪುರೇಷೆಗಳನ್ನು ಸಿದ್ಧಪಡಿಸಿರುವ ಬಿಜೆಪಿ ಪ್ರತಿಯೊಬ್ಬರೂ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ಕಟ್ಟುನಿಟ್ಟಿನ ಸೂಚನೆ ನೀಡಿದೆ. ಈ ಕುರಿತು ದೆಹಲಿಯಲ್ಲಿ ಮಾತನಾಡಿರುವ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು, ಕಾಂಗ್ರೆಸ್‌ನ ಮುಖವಾಡ ದೇಶದ ಮುಂದೆ ಕಳಚಿದೆ. ಬಹುನಿರೀಕ್ಷಿತ ಮಸೂದೆಗೆ ಬೆಂಬಲ ನೀಡದೇ ಮಹಿಳೆಯರನ್ನು ಕೇವಲ ವೋಟ್‌ಬ್ಯಾಂಕಿಂಗ್‌ಗಾಗಿ ಬಳಸಿಕೊಂಡಿದೆ ಎಂದು ಆರೋಪಿಸಿದ್ದಾರೆ.

# ಅಲ್ಪಸಂಖ್ಯಾತ ನಾಯಕರ ವಿರುದ್ಧ ಸರಣಿ ಕ್ರಮ

## ಜಮೀರ್ ಅಹ್ಮದ್ ವಿರುದ್ಧ ಆಗುತ್ತಾ ಕ್ರಮ, ಅಲ್ಪಸಂಖ್ಯಾತ ನಾಯಕರ ವಿರುದ್ಧ ಕ್ರಮಕ್ಕೆ ವಿರೋಧ

• ಉದಯವಾಹಿನಿ, ಬೆಂಗಳೂರು

ದಾವಣಗೆರೆ ಉಪ ಚುನಾವಣೆಯ ಬೆನ್ನಲ್ಲೇ ರಾಜ್ಯ ಕಾಂಗ್ರೆಸ್ ನಲ್ಲಿ ಬಂಡಾಯದ ವಾತಾವರಣ ಇದೆ. ಅದರಲ್ಲೂ ಟಿಕೆಟ್ ವಿಚಾರವಾಗಿ ಬಂಡಾಯವೆದ್ದಿದ್ದ ನಾಯಕರ ವಿರುದ್ಧ ಕಾಂಗ್ರೆಸ್ ನಾಯಕತ್ವ ಕೈಗೊಂಡ ಕ್ರಮ ಇದೀಗ ಚರ್ಚೆಗೆ ಗ್ರಾಸವಾಗಿದೆ. ಇದಕ್ಕೆ ಭಿನ್ನ ರೀತಿಯಲ್ಲಿ ಪ್ರತಿಕ್ರಿಯೆಗಳು ವ್ಯಕ್ತವಾಗುತ್ತಿದ್ದು, ಪ್ರಮುಖ ನಾಯಕರುಗಳು ಅಖಾಡಕ್ಕಿಳಿದಿದ್ದಾರೆ. ಅದರಲ್ಲೂ ಅಬ್ದುಲ್ ಜಬ್ಬಾರ್ ಹಾಗೂ ನಸೀರ್ ಅಹ್ಮದ್ ವಿರುದ್ಧ ಕೈಗೊಂಡ ಕ್ರಮದ ಬಗ್ಗೆ ಅಪಸ್ವರ ದೊಡ್ಡ ಮಟ್ಟದಲ್ಲೇ ಕೇಳಿಬರುತ್ತಿದೆ.

ದಾವಣಗೆರೆ ದಕ್ಷಿಣದಲ್ಲಿ ಮುಸ್ಲಿಮರಿಗೆ ಟಿಕೆಟ್ ಕೊಡಬೇಕು ಎಂಬುವುದು ಬೇಡಿಕೆಯಾಗಿತ್ತು. ಆದರೆ ಕಾಂಗ್ರೆಸ್ ಹೈಕಮಾಂಡ್ ಇದಕ್ಕೆ ವಿರುದ್ಧವಾದ ನಿರ್ಧಾರ ಕೈಗೊಂಡಿತ್ತು. ಸಮರ್ಥ್ ಅವರಿಗೆ ಟಿಕೆಟ್ ನೀಡುವ ಮೂಲಕ ತನ್ನ ನಿಲುವು ಸ್ಪಷ್ಟಪಡಿಸಿತ್ತು. ಆದರೆ, ಇದರಿಂದ ಅಸಮಾಧಾನಗೊಂಡಿದ್ದ ಸಚಿವ ಜಮೀರ್ ಅಹ್ಮದ್, ವಿಧಾನಪರಿಷತ್ ಸದಸ್ಯರಾದ ನಸೀರ್ ಅಹ್ಮದ್, ಅಬ್ದುಲ್ ಜಬ್ಬಾರ್ ಅಂತರ ಕಾಯ್ದುಕೊಂಡಿದ್ದರು. ಜಮೀರ್ ಕೊನೆಯ ಕ್ಷಣದಲ್ಲಿ ಪ್ರಚಾರದಲ್ಲಿ ಕಾಣಿಸಿಕೊಂಡಿದ್ದರೆ ನಸೀರ್ ಅಹ್ಮದ್, ಅಬ್ದುಲ್‌ಜಬ್ಬಾರ್ ಪೂರ್ಣ ಪ್ರಮಾಣದಲ್ಲಿ ಅಂತರ ಕಾಯ್ದುಕೊಂಡಿದ್ದರು.

**ಸಮರ್ಥ್ ಅವರಿಗೆ ಟಿಕೆಟ್**

**ಅಮಾನತು ಶಿಕ್ಷೆ, ಷಡ್ಯಂತ್ರ ಆರೋಪ:** ಈ ಬೆಳವಣಿಗೆಯ ಬೆನ್ನಲ್ಲೇ ಕಾಂಗ್ರೆಸ್ ಪಕ್ಷದ ಇಬ್ಬರು ಶಾಸಕರಾದ ರಿಜ್ವಾನ್ ಅರ್ಷದ್ ಮತ್ತು ಸಲೀಂ ಅಹ್ಮದ್ ಪತ್ರಿಕಾಗೋಷ್ಠಿಯನ್ನು ನಡೆಸಿ ಗಂಭೀರ ಆರೋಪ ಮಾಡಿದ್ದರು. ದಾವಣಗೆರೆಯಲ್ಲಿ ನಮ್ಮ ಪಕ್ಷದವರೇ ಷಡ್ಯಂತ್ರ ಮಾಡಿದ್ದಾರೆ ಎಂಬ ಆರೋಪ ಮಾಡಲಾಗಿತ್ತು.


ಉದಯವಾಹಿನಿ ಚಿತ್ರ

ಈ ಬೆಳವಣಿಗೆಯಿಂದ ಬೇಸೆತ್ತ ಅಬ್ದುಲ್ ಜಬ್ಬಾರ್ ಅವರು ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಬಳಿಕ ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟನೆ ಮಾಡಲಾಗಿತ್ತು. ಇದೇ ಸಂದರ್ಭದಲ್ಲಿ ಸಿಎಂ ರಾಜಕೀಯ ಕಾರ್ಯದರ್ಶಿ ಹುದ್ದೆಯಿಂದ ನಸೀರ್ ಅಹ್ಮದ್ ಅವರನ್ನು ವಜಾ ಮಾಡಲಾಯಿತು.

**ಅಖಾಡಕ್ಕಿಳಿದ ಇತರರು:** ಆರಂಭದಲ್ಲಿ ಇದು ಕೇವಲ ಕಾಂಗ್ರೆಸ್ ಪಕ್ಷದ ಮುಸ್ಲಿಂ ನಾಯಕರದಲ್ಲಿ ಮಾತ್ರ ಚರ್ಚೆಗೆ ಎಡೆ ಮಾಡಿಕೊಟ್ಟಿತ್ತು. ಆದರೆ ಇದೀಗ ಇತರ ನಾಯಕರು ಅಖಾಡಕ್ಕಿಳಿದಿದ್ದಾರೆ. ಮಾಜಿ ಸಚಿವ ಕೆ ಎನ್ ರಾಜಣ್ಣ, ಸಚಿವ ಸತೀಶ್ ಜಾರಕಿಹೊಳಿ ಕೂಡಾ ಪ್ರತಿಕ್ರಿಯೆ ನೀಡಿದ್ದಾರೆ. ಗುರುವಾರ ನಡೆದಿದ್ದ ಸಚಿವ ಸಂಪುಟ ಸಭೆಯಲ್ಲೂ ಈ ವಿಚಾರ ಗಂಭೀರ ಚರ್ಚೆಗೆ ಕಾರಣವಾಗಿದೆ. ಇಂತಹ ಕ್ರಮದಿಂದ ಮುಸ್ಲಿಂ ಸಮುದಾಯ ಕಾಂಗ್ರೆಸ್‌ನಿಂದ ಅಂತರ ಕಾಯ್ದುಕೊಳ್ಳಲು ಅವಕಾಶ ಸೃಷ್ಟಿ ಮಾಡಿಕೊಟ್ಟಂತಾಗುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಕಾಂಗ್ರೆಸ್ ಪಕ್ಷಕ್ಕೆ ಶೇ 95 ರಷ್ಟು ಮುಸ್ಲಿಮರು ಮತ ನೀಡುತ್ತಾರೆ. ಈ ಸಂದರ್ಭವನ್ನು ಬಳಸಿಕೊಂಡು ಮತಗಳ ವಿಭಜನೆಯ ಪ್ರಯತ್ನಗಳು ನಡೆಯುತ್ತಿವೆ. ಹೀಗಾಗಿ ಎಚ್ಚರಿಕೆಯಿಂದ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಆಂತರಿಕವಾಗಿ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ.

**ಸಾರ್ವಜನಿಕ ವಲಯದಲ್ಲೂ ಚರ್ಚೆ**

**ಕಾಂಗ್ರೆಸ್ ಪಕ್ಷ ಕೈಗೊಂಡ ಈ ಕ್ರಮಗಳು ಇದೀಗ ಸಾರ್ವಜನಿಕ ವಲಯದಲ್ಲೂ ಚರ್ಚೆಗೆ ಗ್ರಾಸವಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಗಂಭೀರ ಚರ್ಚೆಗೆ ಎಡೆಮಾಡಿಕೊಟ್ಟಿದೆ. ಕಾಂಗ್ರೆಸ್ ನಾಯಕತ್ವಕ್ಕೆ ಯುವಕರು ಈ ಸಂಬಂಧಿಸಿದಂತೆ ಪ್ರಶ್ನೆ ಮಾಡುತ್ತಿದ್ದಾರೆ. ಅಲ್ಲದೆ, ಮೌಲಾನಗಳು ಕೂಡಾ ಇದೇ ವಿಚಾರವಾಗಿ ಅಖಾಡಕ್ಕಿಳಿದಿದ್ದಾರೆ. ಜಮೀರ್ ವಿರುದ್ಧ ಕ್ರಮ ಆದರೆ ಪರಿಣಾಮ ಅಗುತ್ತದೆ ಎಂಬ ಎಚ್ಚರಿಕೆ ನೀಡಿದ್ದಾರೆ. ಇವೆಲ್ಲದರ ಹಿನ್ನೆಲೆಯಲ್ಲಿ ಈ ವಿಚಾರ ಕಾಂಗ್ರೆಸ್ ಪಕ್ಷದಲ್ಲೂ ಚರ್ಚೆಗೆ ಗ್ರಾಸವಾಗಿದೆ.**

**ಭುಗಿಲೆದ್ದ ಅಸಮಾಧಾನ**

**ಪಕ್ಷದ ಈ ನಡೆಯಿಂದ ಅಲ್ಪಸಂಖ್ಯಾತರ ಮುಖಂಡರಲ್ಲಿ ಒಂದು ಬಣದಲ್ಲಿ ತೀವ್ರ ಅಸಮಾಧಾನ ಸೃಷ್ಟಿಯಾಗಿದೆ. ಇಷ್ಟೊಂದು ಕಠಿಣ ಕ್ರಮ ಕೈಗೊಳ್ಳುವ ಅಗತ್ಯ ಏನಿತ್ತು ಎಂಬ ಪ್ರಶ್ನೆಯನ್ನು ಹಲವು ಕೇಳುತ್ತಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿ ಆಂತರಿಕವಾಗಿಯೂ ಇದು ಚರ್ಚೆಗೆ ಒಳಗಾಗಿದೆ. ಇಲ್ಲಿ ಸಿದ್ದರಾಮಯ್ಯ ಬಣವನ್ನು ಟಾರ್ಗೆಟ್ ಮಾಡಲಾಗುತ್ತಿದೆ ಎಂಬ ಆರೋಪವೂ ಇದೀಗ ಕೇಳಿಬರುತ್ತಿದೆ. ಕಾಂಗ್ರೆಸ್ ಪಾಳಯದಲ್ಲಿ ಭುಗಿಲೆದ್ದ ಈ ಆಕ್ರೋಶ ಮುಂದಿನ ದಿನಗಳಲ್ಲಿ ಮತ್ತಷ್ಟು ತೀವ್ರ ಸ್ವರೂಪ ಪಡೆದುಕೊಳ್ಳುವ ಸಾಧ್ಯತೆ ದಟ್ಟವಾಗಿದೆ.**

## ನೂತನ ಜನಗಣತಿ ಆಧರಿಸಿ ಮಹಿಳಾ ಮೀಸಲಾತಿ ಜಾರಿಗೊಳಿಸಿ: ಎಂಎಲ್‌ಸಿ ಶಿವಕುಮಾರ್ ಒತ್ತಾಯ

ಉದಯವಾಹಿನಿ ಚಿತ್ರ



• ಉದಯವಾಹಿನಿ, ಮೈಸೂರು

ಲೋಕಸಭೆಯಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಹಾಗೂ ಕ್ಷೇತ್ರ ಮರುವಿಂಗಡಣೆ ಕುರಿತ ಸಂವಿಧಾನ ತಿದ್ದುಪಡಿ ಮಸೂದೆಗೆ ಸೋಲಾಗಿರುವುದು ದೇಶದ ಸಾರ್ವಭೌಮದ ಹಿತದೃಷ್ಟಿಯಿಂದ ಒಳ್ಳೆಯದು. ನೂತನ ಜನಗಣತಿಯ ಆಧಾರದಲ್ಲಿ ಮಹಿಳಾ ಮೀಸಲಾತಿ ಜಾರಿಗೊಳಿಸಬೇಕು ಎಂದು ವಿಧಾನಪರಿಷತ್ ಸದಸ್ಯ ಕೆ.ಶಿವಕುಮಾರ್ ಒತ್ತಾಯಿಸಿದರು. ಇಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ಮಹಿಳೆಯರಿಗೆ ರಾಜಕೀಯವಾಗಿ ಮೀಸಲಾತಿ ನೀಡುವುದಕ್ಕೆ ನಮ್ಮ ವಿರೋಧವಿಲ್ಲ. ಮಹಿಳೆಯರ ಸಮರ್ಥ ನಾಯಕತ್ವಕ್ಕೆ ಮೀಸಲಾತಿ ಅಗತ್ಯವಿದೆ. ಆದರೆ, ಕೇಂದ್ರ ಸರ್ಕಾರವು ಸರ್ವಪಕ್ಷ ಸಭೆ ಕರೆಯದೆ ನೇರವಾಗಿ ವಿಶೇಷ ಅಧಿವೇಶನ ನಡೆಸಿ ಮಸೂದೆ ಮಂಡಿಸಿದೆ. ಈ ರೀತಿಯ ತರಾತುರಿಯಲ್ಲಿ ಮಹಿಳಾ ಮೀಸಲಾತಿ ಜಾರಿ ಮಾಡುವುದು ಸರಿಯಲ್ಲ ಎಂದು ಪ್ರತಿಪಾದಿಸಿದರು. ಈ ಮಸೂದೆ ಪ್ರಕಾರ 2011ರ ಜನಗಣತಿಯ ಆಧಾರದಲ್ಲಿ ಕ್ಷೇತ್ರ ಮರುವಿಂಗಡಣೆ ಮಾಡಿ, ಮಹಿಳಾ ಮೀಸಲಾತಿ ಕಾನೂನು ಜಾರಿಗೊಳಿಸುವುದಾಗಿತ್ತು. ಕ್ಷೇತ್ರ ಮರುವಿಂಗಡಣೆಯ ಹಿಂದೆ ಬಹುದೊಡ್ಡ ಹುನ್ನಾರ ಅಡಗಿದೆ. ಈಗಾಗಲೇ ಅಸ್ಸಾಂ ಹಾಗೂ ಜಮ್ಮು ಕಾಶ್ಮೀರದಲ್ಲಿ ನಡೆದಂತಹ ಕ್ಷೇತ್ರ ಮರುವಿಂಗಡಣೆ ಬೇಡವಾಗಿದೆ. ತಮಿಳುನಾಡು ಮತ್ತು ಪಶ್ಚಿಮಬಂಗಾಳ ರಾಜ್ಯಗಳ ಚುನಾವಣೆಯ ಹೊಸ್ತಿಲಲ್ಲಿ ಕೇಂದ್ರ ಸರ್ಕಾರವು ಈ ರಾಜಕೀಯ ಮಾಡುತ್ತಿದೆ ಎಂದು ದೂರಿದರು.

ಸರ್ವಪಕ್ಷಗಳ ಸಲಹೆ ಪಡೆದು ಜಾತಿ, ಜನಗಣತಿ ಆಧಾರದಂತೆ ಮಹಿಳಾ ಮೀಸಲಾತಿಯ ಪ್ರತ್ಯೇಕ ಮಸೂದೆಯನ್ನು ಮಂಡಿಸಿ ಮಹಿಳೆಯರಿಗೆ ಶಾಸನಬದ್ಧವಾದ ಅಧಿಕಾರ ನೀಡಬೇಕು. ಅದರಲ್ಲೂ ಮುಖ್ಯವಾಗಿ ಎಸ್.ಸಿ, ಎಸ್‌ಟಿ, ಒಬಿಸಿ ಮಹಿಳೆಯರಿಗೆ ಈ ಒಳಮೀಸಲು ಕಲ್ಪಿಸಬೇಕು. ಇಲ್ಲವಾದಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ನಾಯಕರ ಕುಟುಂಬದವರ ಪಾಲಾಗಲಿದೆ ಎಂದರು.

ತರಾತುರಿಯಲ್ಲಿ ತಂದಿದ್ದ ಮಸೂದೆಗೆ ಸೋಲಾಗಿರುವುದನ್ನು ಸ್ವಾಗತಿಸುತ್ತೇನೆ. ಈ ನಿಟ್ಟಿನಲ್ಲಿ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಎಲ್ಲಾ ವಿರೋಧ ಪಕ್ಷಗಳ ನಡೆ ಉತ್ತಮವಾಗಿದೆ. ಮುಂದಿನ ದಿನಗಳಲ್ಲಿ ಯಾವುದೇ ಪೂರ್ವಗ್ರಹವಿಲ್ಲದೆ ಈ ಮಸೂದೆ ಜಾರಿ ಮಾಡಿದರೆ ಬೆಂಬಲಿಸಲಾಗುವುದು ಎಂದು ಹೇಳಿದರು.

1993ರ ಮಂಡಲ್ ಕಮಿಷನ್ ಆಧಾರದ ಮೀಸಲಾತಿಯಡಿ ಹಿಂದುಳಿದ ವರ್ಗಗಳಿಗೆ ರಾಜಕೀಯವಾಗಿ ಆಯಕಟ್ಟಿನ ಸ್ಥಾನಗಳಲ್ಲಿ ಸಂಪೂರ್ಣವಾಗಿ ಅವಕಾಶ ಸಿಕ್ಕಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ರಾಜಕೀಯ ಸ್ಥಾನಮಾನ ದೊರೆಯಲು ಅಂಬೇಡ್ಕರ್ ನೀಡಿದ ರಾಜಕೀಯ ಮೀಸಲಾತಿ ಕಾರಣ. ಇಲ್ಲವಾದಲ್ಲಿ ಈ ಸಮುದಾಯಗಳು ತೊಂದರೆಗೆ ಸಿಲುಕುತ್ತಿದ್ದವು ಎಂದರು.

# ಭೂಮಾಪನ ಸ್ಥಗಿತ: ಅತಂತ್ರ ಸ್ಥಿತಿಯಲ್ಲಿ ಅರ್ಜಿದಾರರು

**ಮುಗಿಯದ ಪರವಾನಗಿ ಭೂ ಮಾಪಕರ ಮುಷ್ಕರ; ಬೇಡಿಕೆ ಈಡೇರಿಕೆಗೆ ಸರ್ಕಾರದೊಂದಿಗೆ ಹಗ್ಗಜಗ್ಗಾಟ; ಸರ್ವೆ, ಪೋಡಿ ಸೇರಿದಂತೆ 18 ಬಗೆಯ ಸೇವೆಗಳಿಗೆ ಗ್ರಹಣ**

• ಉದಯವಾಹಿನಿ, ರಾಮನಗರ

ತಮ್ಮನ್ನು ಕಾಯಂ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರಿ ಪರವಾನಗಿ ಭೂ ಮಾಪಕರು ರಾಜ್ಯದಾದ್ಯಂತ ಎರಡು ತಿಂಗಳಿಂದ ನಡೆಸುತ್ತಿರುವ ಮುಷ್ಕರದಿಂದಾಗಿ, ಭೂಮಾಪನ ಮತ್ತು ಭೂ ದಾಖಲೆಗಳ ಇಲಾಖೆಯ ಬಹುತೇಕ ಕೆಲಸಗಳು ಸ್ಥಗಿತಗೊಂಡಿವೆ. ಜಮೀನು ಸರ್ವೆ, ಹದ್ದುಬಸ್ತು, ನಕ್ಷೆ, ಪೋಡಿ, ದಾರಿ ನಕ್ಷೆ ಸೇರಿದಂತೆ ವಿವಿಧ ರೀತಿಯ ಸರ್ವೆ ಕೆಲಸಗಳಿಗೆ ಗ್ರಹಣ ಹಿಡಿದಿದೆ. ಜಮೀನು, ನಿವೇಶನ ಖರೀದಿ, ಹಕ್ಕು ಬದಲಾವಣೆಗೆ ತೊಡಕುಂಟಾಗಿದೆ. ಮುಷ್ಕರದಿಂದಾಗಿ ತಮ್ಮ ಕೆಲಸ-ಕಾರ್ಯಗಳಾಗದೆ ಅರ್ಜಿದಾರರು ಪರಿತಪಿಸುತ್ತಿದ್ದಾರೆ.

**ವಿಲೇವಾರಿಗೆ ಗ್ರಹಣ:** ತಮ್ಮ ವಿವಿಧ ಕೆಲಸಗಳಿಗಾಗಿ ಇಲಾಖೆಗೆ ತಿಂಗಳುಗಳ ಹಿಂದೆಯೇ ಅರ್ಜಿ ಸಲ್ಲಿಸಿರುವ ಸಾರ್ವಜನಿಕರು, ಯಾವಾಗ ತಮ್ಮ ಕೆಲಸವಾಗುತ್ತದೆ ಎಂದು ಕಾಯುತ್ತಿದ್ದಾರೆ. ಆದರೆ, ಮುಷ್ಕರದ ಕಾರಣಕ್ಕೆ ಒಂದೇ ಒಂದು ಅರ್ಜಿ ಸಹ ವಿಲೇವಾರಿಯಾಗುತ್ತಿಲ್ಲ. ನಮ್ಮ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ರಾಜ್ಯದಾದ್ಯಂತ ಫೆ. 20ರಿಂದಲೇ ಕರ್ತವ್ಯ ಸ್ಥಗಿತಗೊಳಿಸಿ ಮುಷ್ಕರ ಆರಂಭಿಸಿದ್ದೇವೆ. ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಇಲಾಖೆಗೆ ಸಂಬಂಧಿಸಿದ ವಿಶೇಷ ಕಾರ್ಯಗಳು ನಡೆಯುತ್ತಿದ್ದರಿಂದ ಮಾರ್ಚ್ 1ರಿಂದ ಸ್ಥಗಿತಗೊಳಿಸಿ ಮುಷ್ಕರ ಮಾಡುತ್ತಿದ್ದೇವೆ ಎಂದು ಭೂ ಮಾಪಕರ ಸಂಘದ ಜಿಲ್ಲಾಧ್ಯಕ್ಷ ಕೆ. ನವಕೋಟಿ ತಿಳಿಸಿದರು.

### ಬೇಡಿಕೆಗಳೇನು

- ಪರವಾನಗಿ ಭೂ ಮಾಪಕರನ್ನು ಸರ್ಕಾರಿ ಭೂಮಾಪಕರಾಗಿ ಕಾಯಂಗೊಳಿಸಬೇಕು.
- ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು.
- ಆರೋಗ್ಯ ವಿಮೆ, ಪಿಎಫ್, ಭತ್ಯೆಯೊಂದಿಗೆ ಸೇವಾ ಭದ್ರತೆ ಒದಗಿಸಬೇಕು.
- ಪ್ರತಿ ಬ್ಲಾಕ್‌ಗೆ ನೀಡುವ ಸೇವಾ ಶುಲ್ಕ 1,200 ಅನ್ನು ಪರಿಷ್ಕರಿಸಿ 3 ಸಾವಿಕ್ಕೆ ಏರಿಸಬೇಕು.
- ಬಾಂದು ಜವಾನರನ್ನು ನಿಯೋಜಿಸಬೇಕು.
- ಅಂತರ ಜಿಲ್ಲಾ ನಿಯೋಜನೆ ನಿಲ್ಲಿಸಬೇಕು.
- ಬಾಕಿ ಸೇವಾ ಶುಲ್ಕವನ್ನು ಪಾವತಿಸಬೇಕು.

ಉದಯವಾಹಿನಿ ಚಿತ್ರ



> ಸರ್ಕಾರಿ ಪರವಾನಗಿ ಭೂ ಮಾಪಕರನ್ನು ಕಾಯಂ ಮಾಡುವುದಾಗಿ ಹಿಂದೆ ಮುಖ್ಯಮಂತ್ರಿ ಭರವಸೆ ನೀಡಿದ್ದರು. ಮುಷ್ಕರಕ್ಕೆ ಮುಂಚೆ ಬೇಡಿಕೆಯನ್ನು ಮತ್ತೆ ಗಮನಕ್ಕೆ ತಂದೆವು. ಆದರೂ ಪ್ರಯೋಜನವಾಗಲಿಲ್ಲ. ಅನಿವಾರ್ಯವಾಗಿ ಮುಷ್ಕರದ ಹಾದಿ ಹಿಡಿಯಬೇಕಾಯಿತು.
>
> -ಕೆ. ನವಕೋಟಿ, ಜಿಲ್ಲಾಧ್ಯಕ್ಷ, ಬೆಂಗಳೂರು ದಕ್ಷಿಣ ಜಿಲ್ಲೆಯ ಪರವಾನಗಿ ಭೂ ಮಾಪಕರ ಸಂಘ

ಸರ್ಕಾರದ ಪರವಾನಗಿ ಪಡೆದು 2002ರಿಂದಲೂ ಸೇವೆ ಸಲ್ಲಿಸುತ್ತಿರುವ 6 ಸಾವಿರಕ್ಕೂ ಹೆಚ್ಚು ಭೂ ಮಾಪಕರಿಗೆ ಸೇವಾ ಭದ್ರತೆ ಇಲ್ಲ. ಸರ್ಕಾರಿ ಭೂ ಮಾಪಕರಂತೆ ಸಮಾನ ಕೆಲಸ ಮಾಡುತ್ತಿರುವ ನಮಗೆ ಸಮಾನ ವೇತನ ನೀಡಬೇಕು. ಜೊತೆಗೆ ಸೇವೆ ಕಾಯಂ ಮಾಡಬೇಕು ಎಂದು ಒತ್ತಾಯಿಸಿದರು.

**ಕೇವಲ 1,200 ಶುಲ್ಕ:** ಸದ್ಯಕ್ಕೆ ಭೂ ಮಾಪನದ ಒಂದು ಕೆಲಸ ಮುಗಿಸಿದರೆ ಕೇವಲ 1,200 ಸೇವಾ ಶುಲ್ಕ ನೀಡಲಾಗುತ್ತಿದೆ. ಒಂದು ವೇಳೆ ವ್ಯಾಜ್ಯ, ವಿವಾದಗಳಿಂದ ಅಡ್ಡಿಯುಂಟಾದಲ್ಲಿ ಕೇವಲ 360 ಸಿಗುತ್ತದೆ ಸರ್ಕಾರಿ ಭೂ ಮಾಪಕರಂತೆಯೇ ಶೈಕ್ಷಣಿಕ ಅರ್ಹತೆ, ತರಬೇತಿ ನಮಗಿದೆ. ಆದರೂ, ವೇತನದಲ್ಲಿ ತಾರತಮ್ಯ ಅನುಸರಿಸಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು. ಸರ್ಕಾರದ ಪೋಡಿ ಮುಕ್ತ ಅಭಿಯಾನ, ದರಾಖಾಸ್ತು ಪೋಡಿ, ನಕ್ಷಾ ಯೋಜನೆ, ಮುಜರಾಯಿ ದೇವಸ್ಥಾನ, ಕೆರೆ, ನಾಲೆ, ವಿದ್ಯುತ್ ತಂತಿ ಮಾರ್ಗ ಸರ್ವೆ ಕೆಲಸಲ್ಲಿ ಕನಿಷ್ಠ ಸೇವಾ ಶುಲ್ಕ ಪಡೆದು ಇಲಾಖೆಗೆ ಹೆಸರು ತಂದಿದ್ದೇವೆ. ಫೈಲ್‌ಗೆ ಇಂತಿಷ್ಟು ಹಣ ಎಂಬ ಕೂಲಿ ಬದಲು ವೇತನ ವ್ಯವಸ್ಥೆ ಜಾರಿಗೆ ತರಬೇಕು. ಜೊತೆಗೆ ಆರೋಗ್ಯ ವಿಮೆ, ಭವಿಷ್ಯ ನಿಧಿ, ಪಿಂಚಣಿ ಸೌಲಭ್ಯ ಸಿಗಬೇಕು. ವಿಶೇಷ ನೇಮಕಾತಿಯಡಿ ನಮ್ಮನ್ನು ಕಾಯಂಗೊಳಿಸಬೇಕು. ಆಧುನಿಕ ಜೀತ ಪದ್ಧತಿಯಿಂದ ಮುಕ್ತಿಗೊಳಿಸಬೇಕು ಎಂದು ಆಗ್ರಹಿಸಿದರು.

**ಸರ್ಕಾರ ಸ್ಪಂದಿಸಲಿ:** ಭೂ ಮಾಪಕರ ಮುಷ್ಕರದಿಂದ ರೈತರಿಗೆ ಬಹಳ ಕಷ್ಟವಾಗುತ್ತಿದೆ. ಇದರಿಂದಾಗಿ ಇತರ ಕೆಲಸ ಕಾರ್ಯಗಳಿಗೂ ಅಡಚಣೆಯಾಗಿದೆ. ಸರ್ಕಾರ ಕೂಡಲೇ ಭೂ ಮಾಪಕರ ಬೇಡಿಕೆಗಳಿಗೆ ಸ್ಪಂದಿಸಿ, ಮುಷ್ಕರಕ್ಕೆ ಅಂತ್ಯ ಹಾಡಬೇಕು ಎಂದು ಬಿಡದಿ ಹೋಬಳಿಯ ಬೋರೆಹಳ್ಳಿಯ ಸಂದೀಪ್ ಗೌಡ ಒತ್ತಾಯಿಸಿದರು.

> ಜಿಲ್ಲೆಯಲ್ಲಿರುವ 173 ಸರ್ಕಾರಿ ಪರವಾನಗಿ ಭೂ ಮಾಪಕರ ಮುಷ್ಕರದಿಂದಾಗಿ ಇಲಾಖೆಯ ಕೆಲಸಗಳು ಮಂದಗತಿಯಲ್ಲಿ ಸಾಗುತ್ತಿವೆ. ಇಲಾಖೆಯ 34 ಸರ್ಕಾರಿ ಭೂ ಮಾಪಕರೇ ಆದ್ಯತೆ ಮೇರೆಗೆ ಕಾರ್ಯ ನಿರ್ವಹಿಸುತ್ತಿದ್ದಾರೆ.
>
> -ಬಿ.ಆರ್. ಹನುಮೇಗೌಡ, ಉಪ ನಿರ್ದೇಶಕ, ಭೂ ದಾಖಲೆಗಳ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ

**ಬೇಡಿಕೆ ಈಡೇರುವವರೆಗೆ ಮುಷ್ಕರ ನಿಲ್ಲದು:** ನಮ್ಮ ನ್ಯಾಯಯುತ ಬೇಡಿಕೆ ಈಡೇರಿಕೆಗಾಗಿ ಈಗಾಗಲೇ ವಿಭಾಗವಾರು ಹೋರಾಟ ಆರಂಭಿಸಿದ್ದು, ಬೆಳಗಾವಿ, ಮೈಸೂರಿನಲ್ಲಿ ಪ್ರತಿಭಟನೆ ನಡೆಸಿದ್ದೇವೆ. ಮುಂದಿನ ಹೋರಾಟವನ್ನು ಬೆಂಗಳೂರಿನಲ್ಲಿ ನಡೆಸಲು ತೀರ್ಮಾನಿಸಿದ್ದೇವೆ. ಬೇಡಿಕೆಗಳನ್ನು ಈಡೇರಿಸುವ ಕುರಿತು ಇಲಾಖೆಯ ಮೇಲಧಿಕಾರಿಗಳ ಜೊತೆ ನಮ್ಮ ಸಂಘದ ರಾಜ್ಯಾಧ್ಯಕರು ಮಾತುಕತೆ ನಡೆಸಲಿದ್ದಾರೆ. ಸರ್ಕಾರಿ ಭೂ ಮಾಪಕರು ರಾಜ್ಯದಲ್ಲಿ ಕೇವಲ 2,800 ಇದ್ದರೆ, ಪರವಾನಗಿ ಭೂ ಮಾಪಕರು 6 ಸಾವಿರ ಇದ್ದೇವೆ. ಆದರೂ, ವೇತನ ಸೇರಿದಂತೆ ಇತರ ಸೌಲಭ್ಯಗಳಲ್ಲಿ ಭಾರಿ ತಾರತಮ್ಯವಿದೆ. ಇದು ಕೊನೆಯಾಗಬೇಕು. ನಮ್ಮ ಬೇಡಿಕೆ ಈಡೇರುವವರೆಗೆ ಮುಷ್ಕರ ನಿಲ್ಲಿಸುವುದಿಲ್ಲ ಎಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಪರವಾನಗಿ ಭೂ ಮಾಪಕರ ಸಂಘದ ಜಿಲ್ಲಾಧ್ಯಕ್ಷ ಕೆ. ನವಕೋಟಿ ತಿಳಿಸಿದರು.

## ಮಿನಿ ನ್ಯೂಸ್

### ಏ.19 ರಂದು ಸಾಹಿತಿ ವಿಎಚ್‌ಆರ್ ಅವರ ಎರಡು ಕೃತಿ ಲೋಕಾರ್ಪಣೆ




• ಉದಯವಾಹಿನಿ, ರಾಮನಗರ

ತನ್ಮಯ್, ಹೇಮಾದ್ರಿ ಸಿರಿ ಸಾಂಸ್ಕೃತಿಕ ಸಾಮಾಜಿಕ ವೇದಿಕೆ ವತಿಯಿಂದ ಸಾಹಿತಿ ವಿ.ಎಚ್.ರಾಜಶೇಖರ್ ಅವರು ರಚಿಸಿರುವ 10, 11ನೇ ಕೃತಿಗಳಾದ ಎದೆಯಾಳದ ದನಿ, ಅಂತರಾಳದ ಅಮೃತ ಬಿಂದು ಕೃತಿಗಳನ್ನು ಏಪ್ರಿಲ್ 19ರ ಭಾನುವಾರ ಬಿಡುಗಡೆ ಮಾಡಲಾಗುತ್ತಿದೆ. ನಗರದ ವಿವೇಕಾನಂದ ನಗರದ ಆಂಜನೇಯ ಸ್ವಾಮಿ ರಸ್ತೆಯಲ್ಲಿರುವ ತನ್ಮಯ್ ನಿಲಯದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದ್ದು, ಇದೇ ಸಂದರ್ಭದಲ್ಲಿ ತುಂಟನ ಕಲರವ ಮತ್ತು ಮನದ ಮಂಥನ ಕೃತಿಯ ಎರಡನೇ ಮರುಮುದ್ರಣ ಬಿಡುಗಡೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಇದೀಗ ಬಿಡುಗಡೆಗೊಳಿಸಿರುವ ಕೃತಿಗಳಲ್ಲಿ ಎದೆಯಳದ ದನಿ ಕವನ ಸಂಕಲನವಾಗಿದ್ದು, ಅಂತರಾಳದ ಅಮೃತ ಬಿಂದು ಕೃತಿಯು ನುಡಿಮುತ್ತುಗಳ ಗುಚ್ಛವಾಗಿದೆ.

### ಮುಂದುವರಿದ ಒಂಟಿಸಲಗ ಹಾವಳಿ : ಈರುಳ್ಳಿ ಫಸಲು ನಾಶ

• ಉದಯವಾಹಿನಿ, ಗುಂಡ್ಲುಪೇಟೆ

ಸೋಲಾರ್ ತಂತಿ ಬೇಲಿಯನ್ನ ಜಖಂಗೊಳಿಸಿ ಜಮೀನಿಗೆ ನುಗ್ಗಿದ ಒಂಟಿಸಲಗ ಕಷ್ಟಪಟ್ಟು ಬೆಳೆದಿದ್ದ ಈರುಳ್ಳಿ ಪಸಲನ್ನ ನಾಶಪಡಿಸಿರುವ ಘಟನೆ ತಾಲ್ಲೂಕಿನ ಮಂಚಹಳ್ಳಿ ಗ್ರಾಮದಲ್ಲಿ ನಡೆದಿದೆ. ಬಂಡೀಪುರ ಹುಲಿ ಸಂರಕ್ಷಿತಾ ಪ್ರದೇಶದ ಓಂಕಾರ್ ವ್ಯಾಪ್ತಿಗೆ ಸೇರಿದ ಮಂಚಹಳ್ಳಿ ಗ್ರಾಮದ ರೈತ ಸಿದ್ದಶೆಟ್ಟಿ ಎಂಬವರ ಜಮೀನಿಗೆ ಲಗ್ಗೆಯಿಟ್ಟ ಸಲಗ ಸೋಲಾರ್ ತಂತಿ ಬೇಲಿಯನ್ನ ಜಖಂಗೊಳಿಸಿ ಅಪಾರ ನಷ್ಟವನ್ನುಂಟುಮಾಡಿದೆ, ರೈತನ ಕೈ ಸೇರಬೇಕಿದ್ದ ಈರುಳ್ಳಿ ಫಸಲು ಸಹ ನಾಶವಾಗಿರುವುದು ಲಾಭದ ನಿರೀಕ್ಷೆಯಲ್ಲಿದ್ದ ಅನ್ನದಾತನಿಗೆ ನಿರಾಸೆಯಾಗಿದೆ.



ಮಂಚಹಳ್ಳಿ ವ್ಯಾಪ್ತಿಯಲ್ಲಿ ಒಂಟಿಸಲಗದ ಹಾವಳಿ ಮಿತಿ ಮೀರಿದ್ದು ರೈತರ ಫಸಲು ಮಣ್ಣುಪಾಲಾಗುತ್ತಿದ್ದರೂ ಸಹ ಅರಣ್ಯ ಇಲಾಖೆ ಅಧಿಕಾರಿಗಳು ಯಾವುದೇ ಕ್ರಮಕ್ಕೆ ಮುಂದಾಗದೆ ನಿರ್ಲಕ್ಷ್ಯ ತೋರುತ್ತಿದ್ದಾರೆ ಎಂದು ಸ್ಥಳೀಯರು ಆರೋಪಿಸುತ್ತಿದ್ದಾರೆ. ನಿರಂತರವಾಗಿ ಆನೆ ಉಪಟಳ ಕುರಿತಾಗಿ ಅರಣ್ಯ ಇಲಾಖೆಗೆ ಮನವಿ ಮಾಡುತ್ತಲೇ ಬಂದಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಅಧಿಕಾರಿಗಳ ಉಡಾಪೆತನಕ್ಕೆ ಅನ್ನದಾತ ಸಾಲದ ಸುಳಿಗೆ ಸಿಲುಕುತ್ತಿದ್ದಾನೆ ಎಂದು ರೈತ ಮುಖಂಡರು ಬೇಸರ ಹೊರಹಾಕಿದ್ದಾರೆ. ಬೆಳೆನಷ್ಟಕ್ಕೊಳಗಾದ ರೈತ ಸಿದ್ದಶೆಟ್ಟಿಗೆ ಸೂಕ್ತಪರಿಹಾರ ನೀಡಬೇಕು ಎಂದು ಮುಖಂಡರು ಆಗ್ರಹಿಸಿದ್ದಾರೆ.

## ಆಮೆನಡಿಗೆಯಲ್ಲಿ ಸಾಗುತ್ತಿರುವ ಹೆದ್ದಾರಿ ಅಗಲೀಕರಣ ಕಾಮಗಾರಿ

# ವಿಪರೀತ ದೂಳಿನಿಂದ ಹೈರಾಣಾದ ಜನರು

• ಉದಯವಾಹಿನಿ, ಗುಂಡ್ಲುಪೇಟೆ

ಗುಂಡ್ಲುಪೇಟೆ ಮೈಸೂರು ರಾಷ್ಟ್ರೀಯ ಹೆದ್ದಾರಿ ಕುರಿತಾಗಿ ಜನಪ್ರತಿನಿಧಿಗಳಿಗೆ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ಗಮನಕ್ಕೆ ತಂದರೂ ಸಹ ಪ್ರಾಧಿಕಾರ ಅಧಿಕಾರಿಗಳ ನಿರ್ಲಕ್ಷ್ಯ ಮುಂದುವರಿದಿದ್ದು ಪರಿಣಾಮವನ್ನ ಜನಸಾಮಾನ್ಯರು ಎದುರಿಸುವಂತಾಗಿದೆ, ಅಗಲೀಕರಣಕ್ಕಾಗಿ ರಸ್ತೆಯ ಎರಡೂ ಇಕ್ಕೆಲೆಗಳನ್ನ ಅಗೆದಿರುವುದರಿಂದ ವಾಹನ ಸವಾರರಿಗೆ ಸಮಸ್ಯೆ ಎದುರಾಗಿದೆ.

ರಾಷ್ಟ್ರೀಯ ಹೆದ್ದಾರಿಗಳನ್ನ ಮೇಲ್ದರ್ಜೆಗೇರಿಸುವ ದೃಷ್ಟಿಯಿಂದ ಕೈಗೊಂಡಿರುವ ಕಾಮಗಾರಿಯೂ ನಿಧಾನಗತಿಯಲ್ಲಿ ಸಾಗುತ್ತಿರುವುದರಿಂದ ಹಲವು ಸಮಸ್ಯೆಗಳು ಉದ್ಭವವಾಗಿವೆ. ಗುಣಮಟ್ಟದ ರಸ್ತೆ ನಿರ್ಮಾಣಕ್ಕಾಗಿ ಗುಂಡ್ಲುಪೇಟೆಯಿಂದ ಮಾಡ್ರಹಳ್ಳಿ ಬಸ್ ನಿಲ್ದಾಣದವರೆಗೆ, ಗರಗನಹಳ್ಳಿ ಹಾಗೂ ಹಿರಿಕಾಟಿ ಸೀಮಿತ ಭಾಗಗಳಲ್ಲಿ ರಸ್ತೆ ಬದಿಯಲ್ಲಿ ಜಲ್ಲಿಕಲ್ಲು, ವೇಟ್ ಮಿಶ್ರಣ ಮಾಡಿ ಕಾಮಗಾರಿ ಪೂರ್ಣಗೊಳಿಸದೆ ಬಿಟ್ಟಿರುವುದರಿಂದ ಹೆಚ್ಚಾದ ದೂಳಿನಿಂದ ಅಪಘಾತ ಭೀತಿ ಎದುರಾಗಿದೆ. ಸಾರ್ವಜನಿಕರಲ್ಲಿ ಆರೋಗ್ಯ ಸಮಸ್ಯೆ ಕಾಣಿಸಿಕೊಳ್ಳತೊಡಗಿದೆ, ರಾಷ್ಟ್ರೀಯ ಹೆದ್ದಾರಿಯಲ್ಲಿ ಪ್ರಾಧಿಕಾರ ಹಾಗೂ ಜನಪ್ರತಿನಿಧಿಗಳ ನಿರ್ಲಕ್ಷ್ಯಕ್ಕೆ ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಕಾಮಗಾರಿ ಆರಂಭವಾಗಿ ವರ್ಷಗಳೆ ಕಳೆದರೂ ಪೂರ್ಣಗೊಳಿಸದ ತಮಿಳುನಾಡು ಮೂಲದ ಏಜೆನ್ಸಿ ಮೌನವಹಿಸಿದೆ ಎಂದು ಸ್ಥಳೀಯರು ಕಿಡಿಕಾರಿದ್ದಾರೆ.

ಉದಯವಾಹಿನಿ ಚಿತ್ರ



**ರಸ್ತೆ ಬದಿಯ ಮನೆಯವರಿಗೆ ಧೂಳಿನಾಭಿಷೇಕ:** ರಸ್ತೆಯ ಇಕ್ಕೆಲಗಳಲ್ಲಿ ಮನೆ ಕಟ್ಟಿಕೊಂಡವರ ಕಥೆಯಂತೂ ಹೇಳತೀರದ್ದಾಗಿದೆ, ಬಾಗಿಲು ತೆರೆದರೆ ಧೂಳು, ಕಿಟಕಿ ಮುಚ್ಚಿದರೂ ಧೂಳು ಸೂಸುವುದರಿಂದ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ ಇದರ ಜೊತೆಯಲ್ಲೇ ತರಾತುರಿಯಲ್ಲಿ ಅಲ್ಲಲ್ಲಿ ಮರಗಳನ್ನು ಕಡಿದು ಅಪಾಯಕಾರಿ ಸ್ಥಿತಿ ನಿರ್ಮಾಣ ಮಾಡಿದ್ದಾರೆ. ದೊಡ್ಡ ವಾಹನ ತೆರಳುವಾಗ ಬೈಕ್ ಸವಾರರು, ಸಣ್ಣಪುಟ್ಟ ವಾಹನಗಳಲ್ಲಿ ಹೋಗುವವರ ಪರಿಸ್ಥಿತಿ ಭಯಾನಕವಾಗಿದೆ. ಇನ್ನೇನು ಕೆಲವೇ ತಿಂಗಳಲ್ಲಿ ಮಳೆಗಾಲ ಪ್ರಾರಂಭಗೊಳ್ಳಲಿದ್ದು, ಆಗ ಸಮಸ್ಯೆ ಇನ್ನಷ್ಟು ತೀವ್ರವಾಗಲಿದೆ ಹಾಗಾಗಿ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ವಿಶೇಷ ಗಮನಹರಿಸಿ, ಅಗೆದ ರಸ್ತೆಗಾದರೂ ಡಾಂಬರ್ ಹಾಕಿಸಲು ಕ್ರಮ ಕೈಗೊಳ್ಳಬೇಕು ಎಂದು ಹೊಸೂರು ನಿವಾಸಿ ಪಚ್ಚೇಗೌಡ ಒತ್ತಾಯಿಸಿದ್ದಾರೆ.

> ತಮಿಳುನಾಡು ಮೂಲದ ಕೌಶಿಕ್ ಅಂಡ್ ಕೋ ಕಂಪನಿಯ ಪ್ರಮಾದದಿಂದ ಅಚ್ಚುಕಟ್ಟಾಗಿದ್ದ ರಸ್ತೆ ಅದ್ವಾನವಾಗಿದೆ, ಅಧಿಕಾರಿಗಳ ಜಾಣ ನಡೆ ಹಾಗೂ ಗುತ್ತಿಗೆದಾರರ ಹೊಣೆಗೇಡಿತನಕ್ಕೆ ಹಲವು ಬಾರಿ ಅಪಘಾತಗಳು ಸಂಭವಿಸಿ ಸಾವು ನೋವುಗಳಾಗಿವೆ. ನಿಧಾನಗತಿಯ ಕಾಮಗಾರಿ ಕುರಿತು ಅಧಿಕಾರಿಗಳ ಗಮನಕ್ಕೆ ತಂದರೂ ಸಹ ಯಾವುದೇ ಪ್ರಯೋಜನವಾಗಿಲ್ಲ ಮುಂದೆ ಸಂಭವಿಸಬಹುದಾದ ಅನಾಹುತಗಳಿಗೆ ಗುತ್ತಗೆ ಪಡೆದ ಕಂಪನಿಯೇ ನೇರ ಹೊಣೆ ಹೊರಬೇಕಾಗುತ್ತದೆ.
>
> -ನಾಗೇಂದ್ರ, ಮಾಡ್ರಹಳ್ಳಿ, ಬಿಜೆಪಿ ಮುಖಂಡ

## ಭ್ರಷ್ಟಾಚಾರ ಎಳೆಎಳೆಯಾಗಿ ಬಿಚ್ಚಿಡುವೆ

• ಉದಯವಾಹಿನಿ, ಶಿಡ್ಲಘಟ್ಟ



ನೀವು ನಿಜವಾದ ರಾಜಕಾರಣ ಮಾಡುವುದೇ ಆದಲ್ಲಿ, ನಿಮಗೆ ತಾಕತ್ತು ಇದ್ದರೆ, ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಚುನಾವಣಾ ಕಣಕ್ಕಿಳಿಯಲು ಬಿ ಫಾರಂ ಪಡೆಯಿರಿ ನೋಡೋಣ ಹೀಗೆಂದು ಸಂಸದ ಡಾ.ಕೆ ಸುಧಾಕರ್ ಅವರಿಗೆ ಶಿಡ್ಲಘಟ್ಟ ಶಾಸಕ ಬಿ.ಎನ್.ರವಿಕುಮಾರ್ ನೇರ ಸವಾಲು ಹಾಕಿದ್ದಾರೆ. ಮೇಲೂರಿನ ತಮ್ಮ ಗೃಹ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಮೂರು ಬಾರಿ ಶಾಸಕ, ಒಮ್ಮೆ ಸಚಿವರಾಗಿದ್ದ ನೀವು ಯಾರ ವಿರುದ್ಧ ಸೋತು ಹೋಗಿದ್ದೀರಿ ಎಂಬ ಪರಿಜ್ಞಾನ ಇದೆಯೇ ಒಬ್ಬ ಸಾಧಾರಣ ವ್ಯಕ್ತಿ ವಿರುದ್ಧ ಗೆಲ್ಲಲು ಸಾಧ್ಯವಾಗಿಲ್ಲ. ನಿಮಗೆ ನಾಚಿಕೆ ಆಗಲ್ಲವೇ. ಲೋಕಸಭೆ ಚುನಾವಣೆ ವೇಳೆ ನಿಮ್ಮ ಮುಖ ನೋಡಿ ನಿಮಗೆ ಜನರು ಮತ ಹಾಕಿಲ್ಲ. ಬದಲಿಗೆ, ಮಾಜಿ ಪ್ರಧಾನಿಯಾದ ಜೆಡಿಎಸ್ ವರಿಷ್ಠ ದೇವೇಗೌಡ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ಕಾರಣಕ್ಕಾಗಿ ನೀವು ಲೋಕಸಭೆ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದೀರಿ' ಎಂದು ವಾಗ್ದಾಳಿ ನಡೆಸಿದರು.

ಚುನಾವಣೆ ಗೆದ್ದ ಅಹಂಕಾರದಲ್ಲಿ ನೀವು ಏನು ಮಾಡುತ್ತಿದ್ದೀರಿ, ಏನು ಮಾತನಾಡುತ್ತಿದ್ದೀರಿ ಎಂಬ ಪರಿಜ್ಞಾನ ಇದೆಯೇ. ನೀವು ಯಾರ ವಿರುದ್ಧ ಸೋತು ಹೋದಿರೊ ಅವರ ರೀತಿಯೇ ಹುಚ್ಚುಚ್ಚಾಗಿ ಮಾತನಾಡುತ್ತಿದ್ದೀರಿ. ನಿಮಗೆ ಮಾನ ಮರ್ಯಾದೆ ಇದೆಯೇ ಎಂದು ಪ್ರಶ್ನಿಸಿದರು. 'ನೀವು ಅಧಿಕಾರಕ್ಕೆ ಬಂದ ಮೇಲೆ ಏನೇನು ಮಾಡಿದ್ದೀರಿ. ಯಾರನ್ನು ತುಳಿದಿರಿ.

ಪಕ್ಷವನ್ನು ಎಷ್ಟು ಗುಂಪುಗಳನ್ನಾಗಿ ಮಾಡಿದ್ದೀರಿ. ಎಷ್ಟೆಷ್ಟು ಪ್ರಕರಣಗಳನ್ನು ಹಾಕಿಸಿದ್ದೀರಿ ಎಂಬ ಲೆಕ್ಕ ನನ್ನ ಬಳಿ ಇದೆ. ಮತದಾರರು ನಿಮಗೆ ಮತ ಹಾಕಿದ್ದರಿಂದಾಗಿ ನೀವು ಅಧಿಕಾರಕ್ಕೆ ಬಂದಿದ್ದೀರಿ. ಈ ಭಯ ನಿಮಗೆ ಇರಬೇಕು. ಜನರು ನಿಮ್ಮನ್ನು ಗಮನಿಸುತ್ತಿರುತ್ತಾರೆ ಎಂಬ ಅರಿವು ಇರಲಿ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ. ಸುಧಾಕರ್ ಅವರನ್ನು ನೋಡಿ ಕಲಿಯಿರಿ. ಅವರ ಕಾಲ ಕೆಳಗೆ ಹತ್ತು ಸಲ ನುಗ್ಗಿ, ಆಗಲಾದರೂ ಬುದ್ಧಿ ಬರುತ್ತದೆ ಎಂದು ಹೇಳಿದರು.

ನೀವು ಆರೋಗ್ಯ ಸಚಿವರಾಗಿದ್ದಾಗ ಕೋವಿಡ್ ಅವಧಿಯಲ್ಲಿ ಸಾವಿರಾರು ಕೋಟಿ ರೂಪಾಯಿ ಹಗರಣ ಮಾಡಿದ್ದೀರಿ. ಅದು ಇಡೀ ದೇಶಕ್ಕೆ ಗೊತ್ತು. ನಿಮ್ಮ ಮಾತು ಕೇಳಿ ಅಧಿಕಾರಿಗಳು ತಪ್ಪು ಮಾಡಿದ್ದಾರೆ. ವರದಿ ಬಹಿರಂಗಗೊಂಡರೆ ಅನೇಕ ಐಎಎಸ್, ಕೆಎಎಸ್ ಅಧಿಕಾರಿಗಳು ಜೈಲಿಗೆ ಹೋಗುತ್ತಾರೆ. ಅವರ ಮುಖ ನೋಡಿ ಸಿಎಂ ಸಿದ್ದರಾಮಯ್ಯ ಅವರು ತನಿಖಾ ವರದಿ ಬಹಿರಂಗಪಡಿಸದೆ ಪೆಂಡಿಂಗ್ ಇಟ್ಟಿದ್ದಾರೆ. ಇದು ಸತ್ಯ ಎಂದರು. ಮುಂದಿನ ಸಲ ರಾಜ್ಯದಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿಕೂಟ ಅಧಿಕಾರಕ್ಕೆ ಬರಲಿದೆ. ಕುಮಾರಸ್ವಾಮಿ ಅವರೇ ಮುಖ್ಯಮಂತ್ರಿಯಾಗಲಿದ್ದಾರೆ. ಆಗ ನಾನೇ ಕೊವಿಡ್ ಹಗರಣವನ್ನು ತನಿಖೆ ನಡೆಸಲು ಮನವಿ ಅವರಲ್ಲಿ ಮಾಡುತ್ತೇನೆ. ನಿಮಗೆ ಶಿಕ್ಷೆ ಆಗಬೇಕೆಂದು ಕೂಡ ಒತ್ತಾಯಿಸುತ್ತೇನೆ ಎಂದರು.

### ಲೋಕಾಯುಕ್ತರ ಬಲೆಗೆ ಬಿದ್ದ ಕರವಸೂಲಿಗಾರ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಇ-ಖಾತೆಯಲ್ಲಿನ ಹೆಸರು ತಿದ್ದುಪಡಿಗೆ 10 ಸಾವಿರ ಬೇಡಿಕೆ ಇಟ್ಟು ಫೋನ್ ಪೇ ಮಾಡಿಸಿ ಕೊಂಡ ಆರೋಪದ ಮೇಲೆ ತಾಲ್ಲೂಕಿನ ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿ ಕರವಸೂಲಿಗಾರ ದ್ಯಾವಪ್ಪ ಸಿ. ಅವರನ್ನು ಲೋಕಾಯುಕ್ತ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಇ-ಖಾತೆಯಲ್ಲಿ ತಮ್ಮ ತಂದೆಯ ಹೆಸರು ತಪ್ಪಾಗಿ ನಮೂದಾಗಿದೆ. ಇದನ್ನು ತಿದ್ದುಪಡಿ ಮಾಡಿಕೊಡಿ ಎಂದು ವ್ಯಕ್ತಿಯೊಬ್ಬರು ಅರ್ಜಿ ಸಲ್ಲಿಸಿದ್ದರು. ಆಗ ಕರವಸೂಲಿಗಾರ ದ್ಯಾವಪ್ಪ 10 ಸಾವಿರಕ್ಕೆ ಬೇಡಿಕೆ ಇಟ್ಟಿದ್ದರು. ಪಂಚಾಯಿತಿ ವಾಟರ್‌ಮೆನ್ ರಾಜಪ್ಪ ಅವರ ಫೋನ್ ಪೇಗೆ 9,500 ಹಾಕಿಸಿಕೊಂಡಿದ್ದರು. ಈ ಬಗ್ಗೆ ಲೋಕಾಯುಕ್ತ ಪೊಲೀಸರಿಗೆ ದೂರು ಬಂದಿದ್ದು ದ್ಯಾವಪ್ಪ ಬಲೆಗೆ ಬಿದ್ದಿದ್ದಾರೆ.

## ಪಟ್ಟಿಯಲ್ಲಿ ಹೆಸರಿಲ್ಲದಿದ್ದರೆ ಸವಲತ್ತು ಸಿಗಲ್ಲ

• ಉದಯವಾಹಿನಿ, ಶ್ರೀರಂಗಪಟ್ಟಣ

ಮತದಾರರ ಪಟ್ಟಿಯಲ್ಲಿ ಹೆಸರು ಇಲ್ಲದಿದ್ದರೆ ಸರ್ಕಾರದ ಸವಲತ್ತುಗಳಿಂದ ವಂಚಿತರಾಗಬೇಕಾತ್ತದೆ. ಹಾಗಾಗಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಸಂದರ್ಭದಲ್ಲಿ ಎಲ್ಲಾ ಅರ್ಹರೂ ತಮ್ಮ ಹೆಸರನ್ನು ಖಚಿತಪಡಿಸಿಕೊಳ್ಳಿ ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ತಿಳಿಸಿದರು. ತಾಲ್ಲೂಕಿನ ಹೆಬ್ಬಾಡಿ ಗ್ರಾಮದಲ್ಲಿ 3 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುರುವಾರ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ನಮ್ಮ ಕ್ಷೇತ್ರದಲ್ಲಿ ಇದುವರೆಗೆ ಶೇ 92ರಷ್ಟು ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ನಡೆದಿದ್ದು, ಇನ್ನೂ ಶೇ 8ರಷ್ಟು ಉಳಿದಿದೆ. ಮತದಾರರ ಪಟ್ಟಿಯಲ್ಲಿ ಹೆಸರು ಕೈಬಿಟ್ಟರೆ ಸಾಕಷ್ಟು ಅವಕಾಶಗಳಿಂದ ವಂಚಿತರಾಗಬೇಕಾಗುತ್ತದೆ. ಎಸ್‌ಐಆರ್ ಕಾರ್ಯಕ್ಕೆ ನಿಯೋಜಿಸಿರುವ ಸಿಬ್ಬಂದಿ ನಿಗದಿತ ಅವಧಿಯಲ್ಲಿ ಮ್ಯಾಪಿಂಗ್ ಕಾರ್ಯವನ್ನು ಪೂರ್ಣಗೊಳಿಸಬೇಕು ಎಂದು ಸೂಚಿಸಿದರು.

2027ರ ಫೆ1ರಿಂದ ಫೆ28ರವರೆಗೆ ನಡೆಯಲಿರುವ ಜನಗಣತಿ ಹಿನ್ನೆಲೆಯಲ್ಲಿ ಗುರುವಾರದಿಂದ ಕ್ಷೇತ್ರದಾದ್ಯಂತ ಮನೆ ಗಣತಿ ಕಾರ್ಯ ಆರಂಭವಾಗಿದ್ದು, ಮನೆ ಗಣತಿಗೆ ಬರುವ ಅಧಿಕಾರಿಗಳಿಗೆ ಜನರು ನಿಖರ ಮಾಹಿತಿ ನೀಡಬೇಕು. ಗಣತಿದಾರರು ಅಧಿಕೃತ ಮಾಹಿತಿಯನ್ನು ದಾಖಲಿಸಬೇಕು ಎಂದು ತಿಳಿಸಿದರು.




ಉದಯವಾಹಿನಿ ಚಿತ್ರ

ಹೆಬ್ಬಾಡಿ ಗ್ರಾಮಕ್ಕೆ ಮೈಸೂರಿನಿಂದ ಸಕಾಲಕ್ಕೆ ಬಸ್‌ಗಳು ಬರುತ್ತಿಲ್ಲ ಎಂದು ಜನರು ಸಮಸ್ಯೆ ತೋಡಿಕೊಂಡರು. ಮೈಸೂರು ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಕರ ಜತೆ ಮಾತನಾಡಿದ ರಮೇಶ ಬಂಡಿಸಿದ್ದೇಗೌಡ, ಬಸ್ ಸಂಚಾರದಲ್ಲಿ ವ್ಯತ್ಯಯ ಆಗದಂತೆ ನೋಡಿಕೊಳ್ಳಿ ಎಂದು ಸೂಚಿಸಿದರು.

## ಪಾದಯಾತ್ರೆ ಅರ್ಧಕ್ಕೆ ಸ್ಥಗಿತ

• ಉದಯವಾಹಿನಿ, ಕೊಳ್ಳೇಗಾಲ

ನಗರಸಭೆಯಲ್ಲಿ ಇ- ಸ್ವತ್ತು ವಿಳಂಬ ಆಗುತ್ತಿರುವುದನ್ನು ಖಂಡಿಸಿ ನಗರಸಭೆ ಮಾಜಿ ನಾಮನಿರ್ದೇಶಿತ ಸದಸ್ಯ ಮಧುಚಂದ್ರ ಅವರು ಚಾಮರಾಜನಗರ ಜಿಲ್ಲಾಧಿಕಾರಿ ಕಚೇರಿ ವರೆಗೆ ಹಮ್ಮಿಕೊಂಡಿದ್ದ ಪಾದಯಾತ್ರೆ ಅರ್ಧಕ್ಕೆ ಸ್ಥಗಿತಗೊಳಿಸಿದರು.

ನಗರದ ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಮೆ ಹಾಗೂ ದೇವಲ ಮಹರ್ಷಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಹೊರಟ ಪಾದಯಾತ್ರೆಯನ್ನು ಬಾಪುನಗರದ ಬಡಾವಣೆ ಬಳಿ ಪೊಲೀಸ್ ಅಧಿಕಾರಿಗಳ ಆದೇಶ ಹಾಗೂ ಪೌರಾಯುಕ್ತರ ಮನವಿ ಮೇರೆಗೆ ನಿಲ್ಲಿಸಲಾಯಿತು. ಮಧುಚಂದ್ರ ಅವರು ಕಳೆದ ತಿಂಗಳು ನಗರಸಭೆ ಮುಂದೆ ಉಪವಾಸ ಸತ್ಯಾಗ್ರಹವನ್ನು ಹಮ್ಮಿಕೊಂಡಿದ್ದರು.

ಆಗ ಪೌರಾಯುಕ್ತ ರುದ್ರಮ್ಮ ಶರಣಯ್ಯ 'ಏ.10 ರೊಳಗೆ ನಿಮ್ಮ ಸಮಸ್ಯೆಗಳನ್ನು ಬಗೆಹರಿಸುತ್ತೇವೆ' ಎಂದು ಭರವಸೆ ನೀಡಿದ್ದರು. ಹಾಗಾಗಿ ಮಧುಚಂದ್ರ ಅವರು ಉಪವಾಸ ಕೈಬಿಟ್ಟಿದ್ದರು. ಏ.10 ಕಳೆದರೂ ನಗರಸಭೆಯಲ್ಲಿ ಯಾವುದೇ ಇ-ಸ್ವತ್ತು ಸೇರಿದಂತೆ ಇತರೆ ಕೆಲಸಗಳು ಆಗುತ್ತಿಲ್ಲ ಎಂದು ಆರೋಪಿಸಿ ಬೆಳಿಗ್ಗೆ ಚಾಮರಾಜನಗರಕ್ಕೆ ಪಾದಯಾತ್ರೆ ಆರಂಭಿಸಲು ನಿರ್ಧರಿಸಿದ್ದರು.




ಉದಯವಾಹಿನಿ ಚಿತ್ರ

ಸ್ಥಳಕ್ಕೆ ಆಗಮಿಸಿದ್ದ ಪೌರಾಯುಕ್ತ ರುದ್ರಮ್ಮ ಶರಣಯ್ಯ, 'ಈಗಾಗಲೇ ನಗರಸಭೆಯಲ್ಲಿ ಕೆಲಸ ಕಾರ್ಯಗಳು ಆಗುತ್ತಿವೆ, ಹಾಗಾಗಿ ಇನ್ನು ಒಂದು ತಿಂಗಳ ಒಳಗೆ ಎಲ್ಲಾ ಸಮಸ್ಯೆಗಳು ಬಗೆಹರಿಯುತ್ತವೆ. ಮುಂದಿನ ಗುರುವಾರ ಸಾರ್ವಜನಿಕರ ಸಭೆ ಕರೆದು ಸ್ಥಳದಲ್ಲೇ ಬಗೆಹರಿಸುತ್ತೇವೆ' ಎಂದು ಮನವೊಲಿಸಿದ ನಂತರ ಪ್ರತಿಭಟನೆ ಕೈಬಿಟ್ಟು ವಾಪಸ್ ತೆರಳಿದರು.

ಈ ವೇಳೆ ಮಾತನಾಡಿದ ಮಧುಚಂದ್ರ, 'ಇ-ಸ್ವತ್ತು ಸಮಸ್ಯೆಗೆ ಶೀಘ್ರ ಪರಿಹಾರ ಒದಗಿಸುವ ಭರವಸೆ ದೊರೆತ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಹೋರಾಟವನ್ನು ಹಿಂತೆಗೆದುಕೊಳ್ಳಲಾಗಿದೆ. ಈ ಸ್ವತ್ತು ಸೇರಿದಂತೆ ಅನೇಕ ಸಮಸ್ಯೆಗಳನ್ನು ಬಗೆಹರಿಸಿ ಕೊಡುವುದಾಗಿ ಒಪ್ಪಿಕೊಂಡಿದ್ದಾರೆ. ಮುಖ್ಯವಾಗಿ ಸಾರ್ವಜನಿಕರ ಸಭೆಯನ್ನು ಕರೆದು ಸಮಸ್ಯೆಗಳನ್ನು ಬಗೆಹರಿಸುತ್ತೇವೆ ಎಂದು ಹೇಳಿದ ಹಿನ್ನೆಲೆ ಪ್ರತಿಭಟನೆಯನ್ನು ಕೈಬಿಟ್ಟಿದ್ದೇನೆ' ಎಂದರು.

### ತಾಯಲೂರು ಪಿಡಿಒಗೆ ಶಾಸಕ ತರಾಟೆ

• ಉದಯವಾಹಿನಿ ಮುಳಬಾಗಿಲು

ತಾಲ್ಲೂಕಿನ ತಾಯಲೂರು ಗ್ರಾಮ ಪಂಚಾಯಿತಿಯಲ್ಲಿ ಶಾಸಕ ಸಮೃದ್ಧಿ ಮಂಜುನಾಥ್ ನೇತೃತ್ವದಲ್ಲಿ ನಮ್ಮ ನಡಿಗೆ ಗ್ರಾಮ ಪಂಚಾಯಿತಿಗಳ ಕಡೆಗೆ ಕಾರ್ಯಕ್ರಮ ನಡೆಯಿತು.

ತಾಯಲೂರು ಗ್ರಾಮ ಪಂಚಾಯಿತಿಯಲ್ಲಿ ಶಾಸಕರು 78 ದೂರುಗಳನ್ನು ಸ್ವೀಕರಿಸಿದರು. ಅವುಗಳಲ್ಲಿ 56 ದೂರುಗಳು ತಾಯಲೂರು ಪಿಡಿಒ ಶ್ರೀನಿವಾಸ ರೆಡ್ಡಿ ವಿರುದ್ಧ ಅನೇಕ ಕಾನೂನು ಬಾಹಿರ ಕ್ರಮಗಳನ್ನು ಕೈಗೊಂಡಿದ್ದಾರೆಂದು ನೀಡಿದ್ದರು ಇದರಿಂದ ರೊಚ್ಚಿಗೆದ್ದ ಶಾಸಕ ಸಮೃದ್ಧಿ ಮಂಜುನಾಥ್ ಪಿಡಿಒ ಅವರನ್ನು ಸಾರ್ವಜನಿಕರು, ತಾಲ್ಲೂಕಿನ ವಿವಿಧ ಇಲಾಖೆ ಅಧಿಕಾರಿಗಳ ಮುಂದೆಯೇ ತರಾಟೆಗೆ ತೆಗೆದುಕೊಂಡರು. ಕೂಡಲೇ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಭ್ರಷ್ಟ ಪಿಡಿಒ ಶ್ರೀನಿವಾಸ ರೆಡ್ಡಿ ಅವರನ್ನು ತಾಲ್ಲೂಕಿನಿಂದ ಬೇರೆಡೆಗೆ ವರ್ಗಾಯಿಸಬೇಕು. ಇಲ್ಲವಾದಲ್ಲಿ ಪಂಚಾಯಿತಿ ಕಚೇರಿಯ ಮುಂದೆಯೇ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಶಾಸಕ ಸಮೃದ್ಧಿ ಮಂಜುನಾಥ್ ಆಕ್ರೋಶ ವ್ಯಕ್ತಪಡಿಸಿದರು.

### ಎಸ್‌ಐಆರ್ ಸ್ಥಗಿತಗೊಳಿಸುವಂತೆ ಆಗ್ರಹಿಸಿ ಪ್ರತಿಭಟನೆ

• ಉದಯವಾಹಿನಿ, ಮೈಸೂರು

ಎಸ್‌ಐಆರ್ ಬೇಡ ಎಂದು ಆಗ್ರಹಿಸಿ ಪಿಯುಸಿಎಲ್, ಎಪಿಸಿಆರ್ ಹಾಗೂ ಸಮತ ಸಂಘಟನೆ ಸದಸ್ಯರು ಪುರಭವನದ ಆವರಣದ ಅಂಬೇಡ್ಕರ್ ಪ್ರತಿಮೆ ಎದುರು ಈಚೆಗೆ ಪ್ರತಿಭಟಿಸಿದರು. ರಾಜ್ಯದಲ್ಲಿ ಮತದಾರರ ಪಟ್ಟಿಯ ಮ್ಯಾಪಿಂಗ್‌ಗಾಗಿ ಸಿಇಒ ಹೊರಡಿಸಿರುವ ಮಾರ್ಗಸೂಚಿ ಮತ್ತು ವೇಳಾಪಟ್ಟಿಯನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು. ಬಿಎಲ್‌ಒ, ಎಇಆರ್‌ಒ ಮತ್ತು ಇಆರ್‌ಒಗಳಿಗೆ ಒದಗಿಸಲಾದ ಲಿಖಿತ ಸೂಚನೆಗಳ ಬಗ್ಗೆಯೂ ಮಾಹಿತಿ ನೀಡಬೇಕು ಎಂದು ಆಗ್ರಹಿಸಿದರು. ಕರ್ನಾಟಕ ಸರ್ಕಾರ ಅಕ್ರಮ ಎಸ್‌ಐಆರ್ ವಿರುದ್ಧ ಬಲವಾದ

ನಿಲುವನ್ನು ತೆಗೆದುಕೊಳ್ಳಬೇಕು. ಅದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಇರುವ ಪ್ರಕರಣಗಳಲ್ಲಿ ತೀರ್ಪು ನೀಡುವವರೆಗೆ ರಾಜ್ಯದಲ್ಲಿ ಎಸ್‌ಐಆರ್ ಜಾರಿಗೆ ತರುವುದನ್ನು ಸ್ಥಗಿತಗೊಳಿಸಬೇಕು. ಎಸ್‌ಐಆರ್‌ನ ಮೊದಲ ಮತ್ತು ಎರಡನೇ ಹಂತದಲ್ಲಿನ ಸಮಸ್ಯೆ ಇಲ್ಲಿ ಬರದಂತೆ ಎಚ್ಚರಿಕೆ ವಹಿಸಬೇಕು ಎಂದು ಹೇಳಿದರು. ಲಮಲ್ ಗೋಪಿನಾಥ್, ಎಂ.ಎಫ್.ಖಲೀಂ, ಇ.ರತಿರಾವ್, ಫಯಾಜ್ ಮಲಿಕ್, ಲತಾ ಕೆ.ಬಿದ್ದಪ್ಪ, ಸುಶೀಲಾ, ಶ್ರೀ ದೇವಿ, ರೂಪಾ ಇದ್ದರು.

# ಭೂಮಾಪಕರ ಮುಷ್ಕರ: 39 ಸಾವಿರ ಅರ್ಜಿ ಬಾಕಿ

**ಕಂದಾಯ ವ್ಯವಸ್ಥೆ, ಭೂ ದಾಖಲೆಗಳ ಇಲಾಖೆ ಬಿಕೋ ಎನ್ನುತ್ತಿದ್ದ ದೃಶ್ಯಗಳು ಕಂಡು ಬಂದವು**

• ಉದಯವಾಹಿನಿ, ತುಮಕೂರು

ರೈತರು ಮತ್ತು ಸರ್ಕಾರದ ಮಧ್ಯೆ ಸೇತುವೆಯಂತೆ ಕೆಲಸ ಮಾಡುತ್ತಿರುವ ಭೂ ಮಾಪಕರು ಕಳೆದ ಎರಡು ತಿಂಗಳಿನಿಂದ ಕರ್ತವ್ಯಕ್ಕೆ ಗೈರಾಗಿದ್ದು, ಸಾವಿರಾರು ಅರ್ಜಿಗಳು ವಿಲೇವಾರಿಗಾಗಿ ಎದುರು ನೋಡುತ್ತಿವೆ. ಸೇವೆ ಕಾಯಮಾತಿ, ಕನಿಷ್ಠ ವೇತನ, ಸಮಾನ ಕೆಲಸಕ್ಕೆ ಸಮಾನ ವೇತನ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸರ್ಕಾರಿ ಪರವಾನಗಿ ಪಡೆದ ಭೂ ಮಾಪಕರು ಕಳೆದ ಫೆಬ್ರುವರಿ ತಿಂಗಳಿನಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ಕೈಗೊಂಡಿದ್ದಾರೆ. ಇದರಿಂದಾಗಿ ರೈತರ ಕೆಲಸಗಳು ಸಂಪೂರ್ಣವಾಗಿ ಸ್ಥಗಿತಗೊಂಡಿವೆ.

ಸದಾ ಜನಸಂದಣಿ ಇರುತ್ತಿದ್ದ ಭೂಮಾಪನ, ಕಂದಾಯ ವ್ಯವಸ್ಥೆ, ಭೂ ದಾಖಲೆಗಳ ಇಲಾಖೆ ಬಿಕೋ ಎನ್ನುತ್ತಿದ್ದ ದೃಶ್ಯಗಳು ಕಂಡು ಬಂದವು. ಜಮೀನಿನ ಹದ್ದುಬಸ್ತು, ಪೋಡಿ, 11 ಇ, ಭೂ ಪರಿವರ್ತನೆ ಒಳಗೊಂಡಂತೆ ಒಟ್ಟು 39,317 ಅರ್ಜಿಗಳು ಬಾಕಿ ಇವೆ. ಭೂ ಮಾಪಕರು ಸಂಪೂರ್ಣವಾಗಿ ಕೆಲಸ ನಿಲ್ಲಿಸಿದ್ದು, ಭೂಮಿ ಖರೀದಿ ಮತ್ತು ಮಾರಾಟಕ್ಕೆ ಸಹ ತೊಡಕಾಗಿದೆ. ಪ್ರತಿಯೊಂದು ಕೆಲಸಕ್ಕೆ 11 ಇ ಅನಿವಾರ್ಯವಾಗಿದೆ. ಹೀಗಾಗಿ ರೈತರ ಯಾವುದೇ ಕೆಲಸ ಸಕಾಲಕ್ಕೆ ಆಗುತ್ತಿಲ್ಲ. ಜಿಲ್ಲೆಯಾದ್ಯಂತ ಒಟ್ಟು 210 ಸರ್ಕಾರಿ ಭೂ ಮಾಪಕರು ಕೆಲಸ ಮಾಡುತ್ತಿದ್ದು, 37 ಹುದ್ದೆಗಳು ಖಾಲಿ ಇವೆ. ಸರ್ಕಾರಿ ಪರವಾನಗಿ ಪಡೆದ 380 ಮಂದಿ ಭೂ ಮಾಪಕರು ವಿವಿಧ ತಾಲ್ಲೂಕುಗಳಲ್ಲಿದ್ದಾರೆ. ಸರ್ಕಾರಿ ಭೂ ಮಾಪಕರು ನಿರ್ವಹಿಸುವ ಎಲ್ಲಾ ತರಹದ ಕಾರ್ಯ ನಾವು ಮಾಡುತ್ತಿದ್ದೇವೆ. ನಮ್ಮನ್ನು ಸರ್ಕಾರಿ ಹುದ್ದೆಯಲ್ಲಿ ವಿಲೀನಗೊಳಿಸಬೇಕು ಎಂಬ ಬೇಡಿಕೆಯನ್ನು ಪರವಾನಗಿ ಪಡೆದ ಭೂ ಮಾಪಕರು ಮುಂದಿಟ್ಟಿದ್ದಾರೆ.

ಭೂ ಮಾಪಕರು ರಜೆ ಹಾಕಿಕೊಂಡು ಹೋಗಿದ್ದರಿಂದ ತುಂಬಾ ತೊಂದರೆಯಾಗುತ್ತಿದೆ ಎಂದು ತಾಲ್ಲೂಕಿನ ಹೊನ್ನುಡಿಕೆ ರೈತ ರವೀಶ್ ಪ್ರತಿಕ್ರಿಯಿಸಿದರು. ಇವತ್ತು, ನಾಳೆ ಎನ್ನುತ್ತಾ ಸಮಯ ಮುಂದೂಡುವುದು ಸರಿಯಲ್ಲ. ಖಾಸಗಿಯವರನ್ನು ಕರೆದು ಸಮೀಕ್ಷೆ ಮಾಡಿಸಲು ಆಗುವುದಿಲ್ಲ. ಪ್ರತಿಯೊಂದು ಕೆಲಸಕ್ಕೂ ಭೂಮಾಪಕರ ಅಗತ್ಯ ಇದೆ. ಅವರು ಜಾಗ ಗುರುತಿಸಿದರೆ ಮುಂದಿನ ಕಾರ್ಯ ನಡೆಯುತ್ತದೆ. ಇಲ್ಲದಿದ್ದರೆ ಎಲ್ಲವೂ ಸ್ಥಗಿತಗೊಳ್ಳುತ್ತದೆ. ಸರ್ಕಾರ ಇದನ್ನು ಅರಿತು ಒಂದು ನಿರ್ಧಾರ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.



ಉದಯವಾಹಿನಿ ಚಿತ್ರ

### ರೈತರಿಗೆ ದಿಕ್ಕು ತೋಚುತ್ತಿಲ್ಲ


ಭೂಮಾಪಕರು ಕರ್ತವ್ಯದಲ್ಲಿ ಇದ್ದಾಗಲೂ ಸಮಯಕ್ಕೆ ಸರಿಯಾಗಿ ಕೆಲಸ ಆಗುತ್ತಿರಲಿಲ್ಲ. ಈಗ ಪ್ರತಿಭಟನೆ ನೆಪ ಹೇಳಿಕೊಂಡು ಇತ್ತ ಸುಳಿಯುವುದೇ ಇಲ್ಲ. ಹೀಗಾಗಿ ರೈತರಿಗೆ ದಿಕ್ಕು ತೋಚದಂತಾಗಿದೆ. ಆದಷ್ಟು ಬೇಗ ಪ್ರತಿಭಟನೆ ಹಿಂಪಡೆದು, ಕೆಲಸಕ್ಕೆ ಮರಳಿದರೆ ಉತ್ತಮ.

### ಪರಿವರ್ತನೆಗೆ ಇದು ಒಳ್ಳೆಯ ಸಮಯ

ಜಮೀನು ಸರ್ವೆಗೆ ಬೇಸಿಗೆ ಸೂಕ್ತ ಕಾಲ. ಉಳಿದ ಸಮಯದಲ್ಲಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಬೇಸಿಗೆಯಲ್ಲಿ ಒಂದಷ್ಟು ಬಿಡುವಿನಲ್ಲಿ ಇರುತ್ತಾರೆ. ಭೂಮಿ ಅಳತೆ, ಪರಿವರ್ತನೆಗೆ ಇದು ಒಳ್ಳೆಯ ಸಮಯ. ಇಂತಹ ವೇಳೆಯಲ್ಲಿಯೇ ಭೂಮಾಪಕರು ಸಿಗುತ್ತಿಲ್ಲ. ಇದು ಕೃಷಿ ಜತೆಗೆ ಇತರೆ ವಲಯಗಳಿಗೂ ಪೆಟ್ಟು ಕೊಟ್ಟಿದೆ. ನಮ್ಮ ಊರಿನ ಹತ್ತಿರ ರಸ್ತೆ ಒತ್ತುವರಿ ಸಂಬಂಧ ಗಲಾಟೆ ನಡೆದಿತ್ತು. ಬಂದು ಸರ್ವೆ ಮಾಡಿಕೊಡಿ ಎಂದು ಮನವಿ ಸಲ್ಲಿಸಿ, ಹಲವು ದಿನಗಳು ಕಳೆದರೂ ಯಾರೂ ಬರಲಿಲ್ಲ. ರೈತರು, ಸ್ಥಳೀಯರು ಪ್ರತಿ ದಿನ ಜಗಳ ಮಾಡುತ್ತಿದ್ದಾರೆ.

ಅಂತರಾಳದಿಂದ... EDITORIAL

# ಏರುಗತಿಯಲ್ಲಿ ಬೇಸಿಗೆಯ ಸವಾಲು
## ಶಾಶ್ವತ ಕ್ರಿಯಾಯೋಜನೆ ಅಗತ್ಯ



ಪ್ರಸಕ್ತ ವರ್ಷದ ಬೇಸಿಗೆಯು ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕ ಎದುರಿಸಿದ ಅತ್ಯಂತ ಕಠಿಣ ಧಗೆಯ ಕಾಲಗಳಲ್ಲಿ ಒಂದಾಗಿದೆ. ಈ ಬೇಸಿಗೆ ಋತು ರಾಜ್ಯದೆಲ್ಲೆಡೆ ಹವಾಮಾನ ಬದಲಾವಣೆ ಅತ್ಯಂತ ತೀವ್ರವಾಗಿರುವುದನ್ನು ಅನುಭವಕ್ಕೆ ತರುವಂತಿದೆ.

ಭಾರತೀಯ ಹವಾಮಾನ ಇಲಾಖೆಯ ದತ್ತಾಂಶಗಳು ಬಿಸಿಲ ಅಲೆಗಳು ದೀರ್ಘಾವಧಿ ಆಗಿರುವುದನ್ನು ಸೂಚಿಸುತ್ತಿವೆ. ಹತ್ತು ವರ್ಷಗಳ ಹಿಂದಿನ ಕಠಿಣ ದಿನಗಳನ್ನು ಈ ಬೇಸಿಗೆ ನೆನಪಿಸುವಂತಿದೆ; ಕಲಬುರಗಿ, ರಾಯಚೂರು ಮತ್ತು ವಿಜಯಪುರ ಜಿಲ್ಲೆಗಳಲ್ಲಿನ ಉಷ್ಣಾಂಶ ಈಗಾಗಲೇ 40 ಡಿಗ್ರಿ ಸೆಂಟಿಗ್ರೇಡ್ ಮೀರಿದೆ.


ಕಲಬುರಗಿ ಜಿಲ್ಲೆಯಲ್ಲಿ 42 ಡಿ.ಸೆಂ. ಆಸುಪಾಸಿನಲ್ಲಿ ಉಷ್ಣಾಂಶವಿದೆ. ಬೀದರ್, ಬಳ್ಳಾರಿ ಮತ್ತು ಕೊಪ್ಪಳದಲ್ಲಿಯೂ ಅಸಹನೀಯ ಧಗೆಯ ವಾತಾವರಣವಿದೆ. ಈ ಬದಲಾವಣೆ ಆಕಸ್ಮಿಕವಾಗಿರದೆ ಪರಿಸರದ ಮೇಲೆ ತೀವ್ರವಾದ ಒತ್ತಡ ಉಂಟಾಗಿರುವುದನ್ನು ಸೂಚಿಸುತ್ತಿದೆ. ಉದ್ಯಾನನಗರಿ ಎನ್ನುವ ವಿಶೇಷಣಕ್ಕೆ ಪಾತ್ರವಾಗಿದ್ದ ಬೆಂಗಳೂರಿನಲ್ಲಿ ಕೂಡ ಉಷ್ಣಾಂಶದ ಗಣನೀಯ ಏರಿಳಿಕೆ ಕಂಡುಬರುತ್ತಿದೆ. ಬೆಂಗಳೂರಿನಲ್ಲಿ 35 ಡಿ.ಸೆಂ. ಆಸುಪಾಸಿನಲ್ಲಿ ತಾಪಮಾನ ದಾಖಲಾಗುತ್ತಿದೆ. ತ್ವರಿತ ಗತಿಯಲ್ಲಿ ನಡೆಯುತ್ತಿರುವ ಕಾಂಕ್ರಿಟೀಕರಣ ಹಾಗೂ ತೀವ್ರವಾಗಿ ಕ್ಷೀಣಿಸುತ್ತಿರುವ ಹಸುರು ಹೊದಿಕೆಯು ಬೆಂಗಳೂರಿನ ತಾಪಮಾನ ಹೆಚ್ಚಳಕ್ಕೆ ಕಾರಣಗಳಾಗಿವೆ. ರಾಜಧಾನಿಯ ನಾಗರಿಕರಿಗೆ ರಾತ್ರಿಗಳು ಅಸಹನೀಯವಾಗುತ್ತಿರುವುದು ಹವಾಮಾನ ವ್ಯವಸ್ಥೆಯಲ್ಲಿ ಆಗಿರುವ ಆಳವಾದ ಬದಲಾವಣೆಯನ್ನು ಸೂಚಿಸುವಂತಿದೆ.

> **ಬಿಸಿಲ ಅಲೆಗಳ ಈ ಝಳವು ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕವನ್ನು ಹೆಚ್ಚಾಗಿ ಬಾಧಿಸುತ್ತಿದೆ. ಬಿಸಿಲು ಇಷ್ಟು ತೀವ್ರ ಆಗಿದ್ದರೂ, ಇದು ರಾಜ್ಯದ ಇತಿಹಾಸದಲ್ಲಿ ಅತ್ಯಂತ ತೀವ್ರವಾದ ಬೇಸಿಗೆಯೇನೂ ಅಲ್ಲ. 2016ರ ಬೇಸಿಗೆ ಕಾಲದಲ್ಲಿ ಬೆಂಗಳೂರು ಮತ್ತು ರಾಜ್ಯದ ಬಹುತೇಕ ಭಾಗಗಳಲ್ಲಿ ಅಸಾಧಾರಣವಾದ ಧಗೆಯ ದಿನಗಳು ಕಂಡುಬಂದಿದ್ದವು.**

ಬೇಸಿಗೆಯ ತೀವ್ರಗೊಂಡಿರುವ ತಕ್ಷಣದ ಪರಿಣಾಮ ನೀರಿನ ಕೊರತೆಯ ಸಂಕಟಕ್ಕೆ ಸಂಬಂಧಿಸಿದ್ದಾಗಿದೆ. ರಾಜ್ಯದ 207 ತಾಲ್ಲೂಕುಗಳಲ್ಲಿ ನೀರಿನ ಕೊರತೆಯು ಗಂಭೀರ ಪ್ರಮಾಣದಲ್ಲಿದೆ ಎಂದು ಗುರ್ತಿಸಲಾಗಿದೆ. ರಾಜ್ಯದ 14 ಪ್ರಮುಖ ಜಲಾಶಯಗಳಲ್ಲಿನ ನೀರಿನ ಮಟ್ಟ ಕುಸಿದಿರುವುದು ಕಳವಳ ಹುಟ್ಟಿಸುವಂತಿದೆ. ಉತ್ತರ ಕನ್ನಡ, ಬೆಳಗಾವಿ ಮತ್ತು ತುಮಕೂರು ಜಿಲ್ಲೆಗಳಲ್ಲಿ ಈಗಾಗಲೇ ನೀರಿನ ಕೊರತೆ ಉಲ್ಬಣಗೊಂಡಿದೆ. ಏರುತ್ತಿರುವ ತಾಪಮಾನ ಹಾಗೂ ನೀರಿನ ಕೊರತೆಯು ವಿದ್ಯುತ್ ಬೇಡಿಕೆಯನ್ನು ಹೆಚ್ಚಿಸುತ್ತಿದೆ. ಫ್ಯಾನು, ತಂಪುಗಾಳಿಯ ಉಪಕರಣಗಳ ಬಳಕೆಯು ಹೆಚ್ಚಾಗುತ್ತಿರುವುದು ವಿದ್ಯುತ್ ಜಾಲದ ಮೇಲೆ ಭಾರೀ ಒತ್ತಡ ಹೇರುತ್ತಿದೆ. ಕೃಷಿ ಕ್ಷೇತ್ರವೂ ಒತ್ತಡ ಎದುರಿಸುತ್ತಿದೆ. ಭತ್ತ, ಕಬ್ಬು, ಮುಂತಾದ ಬೆಳೆಗಳು ತೇವಾಂಶದ ಕೊರತೆಯನ್ನು ಎದುರಿಸುತ್ತಿವೆ. ಇದು ಇಳುವರಿಯ ಮೇಲೆ ಪರಿಣಾಮ ಬೀರುವುದರೊಂದಿಗೆ, ರೈತರನ್ನೂ ಆರ್ಥಿಕ ಸಂಕಷ್ಟಕ್ಕೆ ಸಿಲುಕಿಸಲಿದೆ. ಹವಾಮಾನದಲ್ಲಿನ ವ್ಯತ್ಯಾಸವು ಸಾರ್ವಜನಿಕರ ಆರೋಗ್ಯದ ಮೇಲೂ ಪರಿಣಾಮ ಬೀರುತ್ತಿದೆ.

ನೀರಿನ ಮೂಲಕ ಹರಡುವ ರೋಗಗಳು, ಸೊಳ್ಳೆಯ ಮೂಲಕ ಹಬ್ಬುವ ಕಾಯಿಲೆಗಳು ಹಾಗೂ ಉದರಸಂಬಂಧಿ ಸಮಸ್ಯೆಗಳು ಬೇಸಿಗೆಯೊಂದಿಗೆ ಹೆಚ್ಚುತ್ತಾ ಹೋಗುವಂತಹವು. ನಾಡಿಗೆ ಮಾತ್ರವಲ್ಲದೆ, ಕಾಡಿಗೂ ಕಿಚ್ಚಿನ ರೂಪದಲ್ಲಿ ಪರಿಣಮಿಸುವ ಒಣಹವೆಯು ಅಪಾಯಕರ. ಬೇಸಿಗೆಯ ಸಂಕಷ್ಟಗಳನ್ನು ನಿರ್ವಹಿಸುವಲ್ಲಿ ಸಾರ್ವಜನಿಕರು ಸ್ವಯಂ ಎಚ್ಚರಿಕೆಯ ಕ್ರಮಗಳನ್ನು ಅಳವಡಿಸಿಕೊಳ್ಳುವುದು ಅಗತ್ಯವಾಗಿದೆ. ಬಿಸಿಲು ತೀವ್ರವಾಗಿರುವ ಸಮಯದಲ್ಲಿ ಮನೆಯಿಂದ ಹೊರಗೆ ಬಾರದಿರುವುದು, ದೇಹಕ್ಕೆ ನೀರಿನ ಕೊರತೆ ಉಂಟಾಗದಂತೆ ಎಚ್ಚರಿಕೆ ವಹಿಸುವುದು ಹಾಗೂ ಆಹಾರ ಪಾನೀಯಗಳಲ್ಲಿ ಎಚ್ಚರಿಕೆ ವಹಿಸುವ ಮೂಲಕ ಆರೋಗ್ಯದ ಕಾಳಜಿಯನ್ನು ಮಾಡಬೇಕಾಗಿದೆ. ನೀರಿನ ಬಳಕೆ ಮತ್ತು ಮರುಬಳಕೆಯ ಬಗ್ಗೆ ಸಾರ್ವಜನಿಕರು ಎಚ್ಚರ ಮತ್ತು ವಿವೇಕದಿಂದ ವರ್ತಿಸಬೇಕಾಗಿದೆ. ಸರ್ಕಾರ ಕೂಡ ಬೇಸಿಗೆಯ ಝಳದಿಂದ ಸಾರ್ವಜನಿಕರನ್ನು ರಕ್ಷಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಕುಡಿಯುವ ನೀರಿನ ಕೊರತೆ ಉಂಟಾಗದಂತೆ ನೋಡಿಕೊಳ್ಳುವುದು, ಋತುಮಾನದ ರೋಗಗಳಿಗೆ ಆಸ್ಪತ್ರೆಗಳನ್ನು ಸಿದ್ಧಪಡಿಸುವುದು ಸರ್ಕಾರ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳಲ್ಲಿ ಸೇರಿವೆ. ವಿದ್ಯುತ್ ಉತ್ಪಾದನಾ ಸಂಸ್ಥೆಗಳು ಗರಿಷ್ಠ ಬೇಡಿಕೆಯ ಸವಾಲನ್ನು ನಿರ್ವಹಿಸಲು ಸಜ್ಜಾಗಬೇಕು. ಇವೆಲ್ಲವೂ ಅನುಸರಿಸಬೇಕಾದ ಆದರ್ಶಗಳಾಗಿರದೆ, ಪಾಲಿಸಲೇ ಬೇಕಾದ ಅಗತ್ಯಗಳಾಗಿವೆ. ತೀವ್ರ ಬೇಸಿಗೆಯ 2016 ನಮಗೆ ಎಚ್ಚರಿಕೆಯ ವರ್ಷವಾಗಿತ್ತು. ಆ ಎಚ್ಚರಿಕೆಯಿಂದ ನಾವು ಯಾವ ಪಾಠವನ್ನೂ ಕಲಿತಿಲ್ಲ ಎನ್ನುವುದನ್ನು 2026 ನೆನಪಿಸುವಂತಿದೆ.

# ರಾಮಾಯಣ



### ಅಡ್ಡಿಗಳನ್ನು ಪರಿಹರಿಸಿಕೊಂಡು ಹನುಮಂತನು ಲಂಕೆಯನ್ನು ಪ್ರವೇಶಿಸಿದುದು

• ಹಿಂದಿನ ಸಂಚಿಕೆಯಿಂದ

## ಸುಂದರಕಾಂಡ


ಆಂಜನೇಯನ ಪಾದಹತಿಯಿಂದಾಗಿ ಗುಹೆಗಳಲ್ಲಿದ್ದ ಭೂತಗಳು ಕೋಲಾಹಲ ಮಾಡಲು ಶೈಲೇಂದ್ರನೇ ನೋವಿನಿಂದ ನರಳುವನೋ ಎಂಬಂತೆ ತೋರಿತು, ಅಂಜನಾಸುತನ ಅಧಟನ್ನು ಸೇರಿಸಲಾರದೆ ಸಿಂಹ, ತಾವರೆಗಳಿಂದ ಕೇಸರಗಳುದುರಿದವು. ಸುರಚಾರಣರು ಬೆಚ್ಚಿ ಆಗಸಕ್ಕೆ ಅಡರಿ ಆಶ್ಚರ್ಯದಿಂದ ನೋಡುತ್ತಿರಲು, ಮುನಿಗಳು ಹೊಗಳುವ ಹೆಚ್ಚಳವನ್ನು ಕೇಳಿ ಸಂಭ್ರಮಗೊಳ್ಳುತ್ತ, ಕಿವಿಗಳನ್ನು ಕೊಡವಿ ಹೊಸದಾದ ಕಾಮನಬಿಲ್ಲಿನಂತೆ ಕಾಣುವ ಬಾಲವನ್ನು ಅಲ್ಲಾಡಿಸಿ ಕತ್ತನ್ನು ಕೊಂಕಿಸಿ ಮಾರುತಿಯ ನೀರಧಿಯ ಮೇಲೆ ಹಾರಲು ಕೆಲವು ದೂರ ಓಡಿದ. ಅವನ ಕಾಲ್ತುಳಿತದಿಂದ ಎಲ್ಲವೂ ನಡುಗುತ್ತಿರಲು, ಅದನ್ನು ಕಂಡ ಶರನಿಧಿಯು ಮದನನ ಹಾಗೂ ಪರಶುಧರನ ಉರುಬೆಯನ್ನು ಅನುಭವಿಸುತ್ತ ತಳ್ಳಂಕಗೊಂಡ. ಸಿಂಹದ ರೂಪವನ್ನು ಧರಿಸಿ ಗಿರಿಶಿಖರದಲ್ಲಿ ನಿಂತು ಗಜಾಸುರಮರ್ದನನು ನೋಡುತ್ತಿದ್ದಾನೆ, ಏನು ಮಾಡಲಿ ಎಂಬಂತೆ ನಡುಗುತ್ತಿರಲು ಸುರರೆಲ್ಲರೂ ಬೆಕ್ಕಸಬೆರಗಾದರು. ಆ ಸಮಯದಲ್ಲಿ ಮಹಾಸಾಗರವನ್ನು ದಾಟಲು ಇಂದ್ರನೇ ಮುಂತಾದ ದಿಕ್ಪಾಲಕರನ್ನೂ ಬ್ರಹ್ಮಹರರನ್ನೂ ಸಕಲ ಮುನಿನಿಕರವನ್ನೂ ವಂದಿಸಿ ತನ್ನ ವೀರರಸವನ್ನು ಹೆಚ್ಚಿಸಿಕೊಂಡ ಹನುಮಂತನು ಸಮುದ್ರವನ್ನು ಕಂಡು ಅಂಗದನೊಡನೆ ಹೀಗೆಂದ: ಕಪಿವೀರರೆಲ್ಲರೂ ಕೇಳಿರಿ, ನನ್ನ ಪರಾಕ್ರಮದಿಂದ ಏಳು ಸಮುದ್ರಗಳನ್ನೂ ದಾಟಿ ಭೂತಳದಲ್ಲಿರುವ ಎಲ್ಲಾ ನಿಶಾಚರರನ್ನೂ ಕೋಳುಗೊಳಿಸುತ್ತೇನೆ. ಶ್ರೀರಾಮನ ಬಾಣದ ವೇಗದಲ್ಲಿ ಹಾರಿದರೆ ನೂರು ಯೋಜನ ಮಾತ್ರವಿರುವ ಸಮುದ್ರದ ಅಗಲ ನನಗೆ ಎಷ್ಟರದು! ಆಗಸಮಾರ್ಗದಲ್ಲಿ ಹೋಗಿ ಲಂಕಾನಗರದಲ್ಲಿ ಜಾನಕಿಯನ್ನು ಕಂಡು ರಘುವರನ ಉಂಗುರವನ್ನು ಆ ಸತಿಗೆ ಕೊಟ್ಟು ಆಕೆಯ ಚೂಡಾಮಣಿಯನ್ನು ತೆಗೆದುಕೊಂಡು ಕೃತಕೃತ್ಯನಾಗಿ, ಲೆಕ್ಕವಿಲ್ಲದಷ್ಟು ಮಂದಿ ರಾಕ್ಷಸರನ್ನು ತರಿದುಹಾಕಿ, ರಾವಣನ ಬಲವು ಯಾವ ಮಹಾ ಎನ್ನಿಸಿ, ಆ ನಗರವನ್ನು ಸುಟ್ಟು, ಶ್ರೀರಾಮನ ಪಾದಗಳನ್ನು ನೆನಯುತ್ತ ವಾಪಸ್ಸು ಬರುತ್ತೇನೆ ಎಂದು ಹೇಳಿ ಅವರಿಂದ ಬೀಳ್ಕೊಂಡ.

ಆ ಬಳಿಕ ಶ್ರೀರಾಮ ಲಕ್ಷ್ಮಣ ಸೀತೆಯರಿಗೆ ಮನಸಿನಲ್ಲಿಯೇ ಅಭಿನಮಿಸಿ, ಸುಗ್ರೀವನನ್ನು ನೆನಪಿಸಿಕೊಂಡು, ತನ್ನ ತಂದೆಯ ಚರಣಗಳಿಗೆ ತಲೆಬಾಗಿ, ಮನಸ್ಸು ಮತ್ತು ಪ್ರಾಣಗಳನ್ನು ಒಂದುಗೂಡಿಸಿ ತನ್ನ ದೇಹವನ್ನು ತೂಗಿಸಿ ಜಯ ರಘುರಾಮ ರಘೂತ್ತಮ ರಾಮಚಂದ ಎಂದು ಕೂಗಿ ವಿನತಾಪುತ್ರನಂತೆ ಆಕಾಶಕ್ಕೆ ಪುಟನೆಗೆದ. ಮಹಾವೇಗದಿ0ದ ಮುಂದೆ ಸಾಗಲು ಗಿರಿಯಲ್ಲಿನ ದೊಡ್ಡ ದೊಡ್ಡ ಮರಗಳೆಲ್ಲವೂ ಬಂಧುವನ್ನು ಬೀಳ್ಕೊಡುವಂತೆ ಹಿಂದೆ ಹೋಗಲು, ಪರ್ವತದ ಶಿಖರಗಳೆಲ್ಲ ಹಾರುವ ಆಂಜನೇಯನ ರಭಸದಿಂದ ಕಳಚಿಕೊಂಡು ಅವನ ಸೈನ್ಯದಂತೆ ಸುತ್ತುವರಿದು ಹೋದವು. ಕೆಲವು ಮರಗಿಡಗಳು ಬೇರುಸಹಿತ ಕಿತ್ತುಬಂದು ಬೀಳಲು, ಅವುಗಳಲ್ಲಿದ್ದ ಹೂಗಳು ಚೆಲ್ಲಿ ನಕ್ಷತ್ರಗಳಂತೆ ಬಿದ್ದು ಹರಡಿಕೊಂಡು ಸಮುದ್ರವು ಕೆಳಗಿನ ಆಕಾಶವೋ ಎಂಬಂತೆ ಕಾಣುತ್ತಿತ್ತು ಅಲ್ಲಲ್ಲಿ ಬಿದ್ದ ಹೊಳೆಯುವ ಬಳ್ಳಿಗಳು ಮಿಂಚುಗಳಿಂದ ಕೂಡಿರುವ ಮೋಡದ ಸಂಕುಲದಂತೆ ಸಮುದ್ರವು ತೋರಿತು. ಆಂಜನೇಯನ ಉರುಬನ್ನು ನೋಡಿ ಅಗಸ್ತ್ಯನು ಬೆದರಿದರೆ, ತ್ರಿಶಂಕುವು ತಲ್ಲಣಗೊಂಡ, ದಿಕ್ಕೃತಿಗಳು ಬೆಚ್ಚಿದರು, ಸೂರ್ಯನು ಹೆದರಿ ಮೋಡದಲ್ಲಿ ಮರೆಯಾದ; ಆಕಾಶದಲ್ಲಿ ಹಾರುವ ಮಾರುತಿಯ ಕಣ್ಣುಗಳು ಸೂರ್ಯಚಂದ್ರರಂತೆ ಹೊಳೆಯುತ್ತಿರಲು, ಅವನ ಬಾಲವು ದೇವೇಂದನೆತ್ತಿದ ವಿಜಯಧ್ವಜದಂತೆ ಕಂಗೊಳಿಸಿತು. ಆಗಸದಲ್ಲಿ ಹಾರುವ ಅವನ ಮುಖಮಂಡಲವು ಆಗಾಗ ಮೋಡಗಳಲ್ಲಿ ಕಣ್ಮರೆಯಾಗುತ್ತ ಹೊರಬರುವ ಚಂಡಭಾಸ್ಕರನಂತೆ ದೇದೀಪ್ಯಮಾನವಾಗಿತ್ತು. ವಾಯುವು ಸಾಕಾರನಾಗಿ ಬೀಸುತ್ತಿರುವನೋ, ಮೇರುಪರ್ವತವು ರೆಕ್ಕೆಗಳನ್ನು ಪಡೆದು ಹಾರುತ್ತಿದೆಯೋ, ಗರುಡನು ಎಹರಿಸುತ್ತಿರುವನೋ ಎಂಬ ರೀತಿಯಲ್ಲಿ ಆಕಾಶದಲ್ಲಿ ಬರುವ ಮಾರುತಿಯನ್ನು ಪ್ರಾರ್ಥಿಸಲೆಂದು ಉರಗರಾಜನು ಬಂದನೇನೋ ಎಂಬಂತೆ ಅವನ ಬಾಲವು ಶೋಭಿಸಿ ಆಕಾಶಜೀವಿಗಳು ಬೆಬ್ಬೆರಗಾಗಿ ನೋಡುವಂತಾಗಿತ್ತು.

**ಮುಂದುವರಿಯುವುದು...**

# ದೇವರನ್ನು ಹುಡುಕಬೇಕಾಗಿದೆ: ಒಂದು ಸಾಹಿತ್ಯಿಕ ವಿಮರ್ಶೆ

ವಿಶ್ವಾಸ್ ಡಿ. ಗೌಡ ಅವರ ದೇವರನ್ನು ಹುಡುಕಬೇಕಾಗಿದೆ ಕಾದಂಬರಿಯು ಮನುಷ್ಯನ ಅಂತರಂಗದ ಅನ್ವೇಷಣೆಯನ್ನು ಮತ್ತು ಸಮಾಜದ ವಿವಿಧ ಸ್ತರಗಳಲ್ಲಿ ದೇವರನ್ನು ಕಾಣುವ ಬಗೆಯನ್ನು ಬಹಳ ಮಾರ್ಮಿಕವಾಗಿ ಚಿತ್ರಿಸಿದೆ. ಈ ಕೃತಿಯು ಕೇವಲ ಒಂದು ಕಥೆಯಲ್ಲ, ಬದಲಾಗಿ ಲೇಖಕರ ಭಾಷೆಯಲ್ಲಿ ಹೇಳುವುದಾದರೆ ಇದೊಂದು 'ಆತ್ಮದ ಜಪ' ಮತ್ತು 'ಬದುಕಿನ ಧ್ಯಾನ'. ಮನುಷ್ಯ ಹುಟ್ಟಿದ ಕ್ಷಣದಿಂದಲೇ ಕಾಣದ ಶಕ್ತಿಯ ಬೆನ್ನಟ್ಟಿ ಹೊರಡುವ ಪರಿಯನ್ನು ಲೇಖಕರು ಇಲ್ಲಿನ ಪಾತ್ರಗಳ ಮೂಲಕ ಅದ್ಭುತವಾಗಿ ಕಟ್ಟಿಕೊಟ್ಟಿದ್ದಾರೆ. ಈ ಲೇಖನವು ಕೃತಿಯ ವಸ್ತುನಿಷ್ಠತೆ, ಪಾತ್ರ ಚಿತ್ರಣ ಮತ್ತು ಲೇಖಕರ ಸಾಮಾಜಿಕ ಕಳಕಳಿಯ ಮೇಲೆ ಬೆಳಕು ಚೆಲ್ಲುವ ಸುದೀರ್ಘ ವಿಮರ್ಶೆಯಾಗಿದೆ.



ಉದಯವಾಹಿನಿ ಚಿತ್ರ

ಕಾದಂಬರಿಯ ಮೊದಲ ಭಾಗದಲ್ಲಿ ಜಯರಾಮನ ಸಿಟ್ಟು ಮತ್ತು ದೇಗುಲದ ಘಟನೆಯ ಮೂಲಕ ಕಥೆ ವೇಗವನ್ನು ಪಡೆದುಕೊಳ್ಳುತ್ತದೆ. ದೇವಸ್ಥಾನದ ಗರ್ಭಗುಡಿಯಲ್ಲಿ ಮಾತ್ರ ದೇವರಿದ್ದಾನೆ ಎಂದು ನಂಬುವ ಮಡಿವಂತ ಸಮಾಜಕ್ಕೆ, ದೇವರು ಆತ್ಮದ ಗುಹೆಯಲ್ಲೂ ನೆಲೆಸಿದ್ದಾನೆ ಎಂಬ ಸತ್ಯವನ್ನು ಲೇಖಕರು ಮನವರಿಕೆ ಮಾಡಿಕೊಡುತ್ತಾರೆ. ಹಳ್ಳಿಯ ಕಟ್ಟೆಯ ಮೇಲೆ ನಡೆಯುವ ಕಿಳ್ಳೆ ಮಾತುಗಳು, ಟೀ ಅಂಗಡಿಯ ಮುಂದಿನ ನಾಟಕದ ಸಂಭಾಷಣೆಗಳು ಗ್ರಾಮ್ಯ ಜೀವನದ ನೈಜ ಚಿತ್ರಣವನ್ನು ಕಣ್ಣೆದುರು ತರುತ್ತವೆ. ಇಲ್ಲಿನ ಪ್ರತಿಯೊಂದು ಪಾತ್ರವೂ ಒಂದು ಯಾತ್ರಿಕನಂತೆ ಭಕ್ತಿ, ಶಂಕೆ ಅಥವಾ ನೋವಿನ ಹಾದಿಯಲ್ಲಿ ಸಾಗುವುದು ಕಾದಂಬರಿಯ ಜೀವಾಳವಾಗಿದೆ. ಕೃತಿಯು ಸಾಮಾಜಿಕ ಅಸಮಾನತೆಯನ್ನು ಬಹಳ ಧೈರ್ಯದಿಂದ ಪ್ರಶ್ನಿಸುತ್ತದೆ.

ಜಯರಾಮ ಮತ್ತು ಅರ್ಚಕರ ನಡುವಿನ ಸಂಘರ್ಷವು ಭಕ್ತಿ ಮತ್ತು ವ್ಯವಸ್ಥೆಯ ನಡುವಿನ ತಿಕ್ಕಾಟಕ್ಕೆ ಸಾಕ್ಷಿಯಾಗಿದೆ. ದೇವಸ್ಥಾನದೊಳಗೆ ಅರ್ಚಕರು ಶ್ರೀಮಂತ ಗೌಡತಿ ಮತ್ತು ಬಡ ಹೆಂಗಸರ ನಡುವೆ ಮಾಡುವ ತಾರತಮ್ಯವನ್ನು ಜಯರಾಮ ವಿರೋಧಿಸುವುದು ಅವನ ವೈಚಾರಿಕತೆಗೆ ಸಾಕ್ಷಿ. 'ದೇವರ ತೀರ್ಥ-ಪ್ರಸಾದ ಎಲ್ಲರಿಗೂ ಒಂದೇ' ಎಂಬ ಅವನ ಮಾತುಗಳು ಧಾರ್ಮಿಕ ಕೇಂದ್ರಗಳಲ್ಲಿ ನಡೆಯುವ ಅನ್ಯಾಯದ ವಿರುದ್ಧದ ಧ್ವನಿಯಾಗಿದೆ. ಇಂತಹ ಸನ್ನಿವೇಶಗಳು ಓದುಗರಲ್ಲಿ ದೇವರ ನಿಜವಾದ ನೆಲೆ ಎಲ್ಲಿದೆ ಎಂಬ ಪ್ರಶ್ನೆಯನ್ನು ಮೂಡಿಸುತ್ತವೆ.ಕಾದಂಬರಿಯ ಇನ್ನೊಂದು ಮುಖ್ಯ ಮಗ್ಗುಲೆಂದರೆ ಪಾತ್ರಗಳ ಅಂತರಂಗದ ತಳಮಳ. ಮಲ್ಲಿಗೆಯ ಪರೀಕ್ಷೆ, ಚಲ್ವಿಯ ನಿಟ್ಟುಸಿರು ಮತ್ತು ರುದ್ರನ ಪಾತ್ರಗಳು ಕಥೆಗೆ ಹೊಸ ಆಯಾಮವನ್ನು ನೀಡುತ್ತವೆ. ದಾಸಯ್ಯನ ಶವ ಕಾಲುವೆಯಲ್ಲಿ ತೇಲುವ ಘಟನೆಯು ಕಥೆಯಲ್ಲಿ ತಿರುವು ನೀಡುವ ಮೂಲಕ ಮನುಷ್ಯನ ಅಸ್ಥಿರತೆಯನ್ನು ತೋರಿಸುತ್ತದೆ. ಕಾದಂಬರಿಯ ಅಂತ್ಯದಲ್ಲಿ ಚಲ್ವಿ ಐಎಎಸ್ ಆಫೀಸರ್ ತಾಯಿಯಾಗುವ ಮೂಲಕ ಕೃತಿಯು ಒಂದು ಸಕಾರಾತ್ಮಕ ಮತ್ತು ಆಶಾದಾಯಕ ಮುಕ್ತಾಯವನ್ನು ಪಡೆಯುತ್ತದೆ. ಇದು ಕಷ್ಟಗಳನ್ನು ಎದುರಿಸಿ ಸಾಧನೆ ಮಾಡುವ ಛಲವನ್ನು ಪ್ರತಿಬಿಂಬಿಸುತ್ತದೆ.

ವಿಶ್ವಾಸ್ ಡಿ. ಗೌಡ ಅವರ ಭಾಷಾ ಶೈಲಿಯು ಪ್ರಾರ್ಥನೆಯಂತೆ ಸರಳ ಮತ್ತು ಪ್ರಭಾವಶಾಲಿಯಾಗಿದೆ. ಪ್ರೀತಿ, ಕರುಣೆ ಮತ್ತು ಕ್ಷಮೆಗಳೇ ದೇವರ ರೂಪ ಎಂಬ ಲೇಖಕರ ಸಂದೇಶವು ಪ್ರಸ್ತುತ ಸಮಾಜಕ್ಕೆ ಅತ್ಯಗತ್ಯವಾಗಿದೆ. ಈ ಕೃತಿಯು ಓದುಗರನ್ನು ಕೇವಲ ಕಥೆಯೊಳಗೆ ಕರೆದೊಯ್ಯದೆ, ಅವರನ್ನೂ ಸಹ ಒಂದು ಪವಿತ್ರ ಯಾತ್ರೆಯ ಭಾಗವನ್ನಾಗಿ ಮಾಡುತ್ತದೆ. ಒಟ್ಟಾರೆಯಾಗಿ 'ದೇವರನ್ನು ಹುಡುಕಬೇಕಾಗಿದೆ' ಕಾದಂಬರಿಯು ಮನುಷ್ಯ ತನ್ನೊಳಗಿನ ಮನುಷ್ಯತ್ವವನ್ನು ಕಂಡುಕೊಳ್ಳುವ ಮೂಲಕ ದೇವರನ್ನು ಹುಡುಕುವ ಸತ್ಯದ ಹಾದಿಯನ್ನು ತೋರುತ್ತದೆ. ಇದು ಕನ್ನಡ ಸಾಹಿತ್ಯ ಲೋಕಕ್ಕೆ ಒಂದು ಮೌಲ್ಯಯುತ ಕೊಡುಗೆಯಾಗಿದೆ.


**-ಮೊಹಮ್ಮದ್ ಅಜರುದ್ದೀನ್, ಅಕ್ಕಿಹೆಬ್ಬಾಳು.**

# ಬೇವಿನ ಕಹಿ ಪೈಲ್ವಾನರ ವಿಜಯದ ಸಿಹಿ



ಅಂತರಂಗದ ಮಾತು
ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

ಕರ್ನಾಟಕದ ದೇಸಿ ಕ್ರೀಡಾ ಇತಿಹಾಸದಲ್ಲಿ ಗರಡಿ ಮನೆಗಳಿಗೂ ಹಾಗೂ ಕಲಿಗಳಿಗೂ ಅವಿನಾಭಾವ ನಂಟು. ಕುಸ್ತಿ ಅಖಾಡದ ಮಣ್ಣಿನಲ್ಲಿ ಪಳಗಿ, ದೇಹವನ್ನು ವಜ್ರದಂತೆ ಕಠಿಣಗೊಳಿಸಿದ ಮಲ್ಲರ ಸಾಹಸದ ಹಿಂದೆ ಕೇವಲ ಕಸರತ್ತಷ್ಟೇ ಇಲ್ಲ; ಪ್ರಕೃತಿಯ ಮಡಿಲಲ್ಲಿ ಅಡಗಿದ್ದ ವಿಶಿಷ್ಟ ಆಹಾರ ಪದ್ಧತಿಯೂ ಅಡಗಿದೆ. ಅಂತಹ ಅಪರೂಪದ ರಹಸ್ಯಗಳಲ್ಲಿ ಅತ್ಯಂತ ಗಮನಾರ್ಹವಾದುದು ಬೇವಿನ ತೊಗಟೆಯ ಕಷಾಯ. ಇಂದಿನ ಕೃತಕ ಸತ್ವವರ್ಧಕಗಳಿಗಿಂತಲೂ ಮಿಗಿಲಾದ ರೋಗನಿರೋಧಕ ಕ್ಷಮತೆಯನ್ನು ಈ ನೈಸರ್ಗಿಕ ಪಾನೀಯವು ನೀಡಬಲ್ಲದು ಎಂಬುದು ಅಕ್ಷರಶಃ ಸತ್ಯ.


ಉದಯವಾಹಿನಿ ಚಿತ್ರ

ನಮ್ಮ ಪೂರ್ವಜ ಕ್ರೀಡಾಪಟುಗಳು ಬೇವಿನ ಮರವನ್ನು ಕೇವಲ ಸಸ್ಯವೆಂದು ಭಾವಿಸದೆ, ಆರೋಗ್ಯದಾಯಿನಿ ಎಂದು ಪೂಜಿಸುತ್ತಿದ್ದರು. ಅಖಾಡದ ಕೆಮ್ಮಣ್ಣಿನಲ್ಲಿ ನಿರಂತರವಾಗಿ ಗುದ್ದಾಡುವುದರಿಂದ ಚರ್ಮದ ಸೋಂಕು ಹಾಗೂ ದೈಹಿಕ ಬಳಲಿಕೆಯಿಂದ ಉಂಟಾಗುವ ವ್ಯತಿರಿಕ್ತ ಪರಿಣಾಮಗಳು ದೇಹವನ್ನು ಬಾಧಿಸುವುದು ಸಹಜ. ಇದನ್ನು ತಡೆಗಟ್ಟಲು ಋತುಮಾನಗಳ ಬದಲಾವಣೆಯ ಸಂದರ್ಭದಲ್ಲಿ ಬೇವಿನ ಮರದ ಚಕ್ಕೆಯನ್ನು ಸಂಸ್ಕರಿಸಿ ಅದರ ಸಾರವನ್ನು ಕುಡಿಯುವ ರೂಢಿ ಇತ್ತು. ಇದು ಕೇವಲ ಒಂದು ನಂಬಿಕೆಯಲ್ಲ, ಬದಲಾಗಿ ಶತಮಾನಗಳ ಅನುಭವದಿಂದ ಮಾಗಿದ ಲೋಕಜ್ಞಾನ.

ವೈಜ್ಞಾನಿಕವಾಗಿ ಬೇವಿನ ಎಲೆಗಳಿಗಿಂತಲೂ ಅದರ ಕಾಂಡದ ಹೊರಪದರದಲ್ಲಿ ರೋಗನಿರೋಧಕ ಅಂಶಗಳು ದಟ್ಟವಾಗಿರುತ್ತವೆ. ಇದರ ಪ್ರಯೋಜನಗಳು ಹೀಗಿವೆ. ಪೈಲ್ವಾನರು ಬಲವೃದ್ಧಿಗಾಗಿ ಸೇವಿಸುವ ಅತಿಯಾದ ಹಾಲು, ತುಪ್ಪ ಹಾಗೂ ಒಣಫಲಗಳು ದೇಹದಲ್ಲಿ ಪಿತದ ಅಂಶವನ್ನು ಹೆಚ್ಚಿಸಬಹುದು. ಬೇವಿನ ಕಟುರಸವು ರಕ್ತವನ್ನು ಶೋಧಿಸಿ, ಶರೀರದೊಳಗಿನ ಕಲ್ಮಶಗಳನ್ನು ಉಚ್ಚಾಟಿಸುತ್ತದೆ. ಜಠರದಲ್ಲಿರುವ ಅನಗತ್ಯ ಕ್ರಿಮಿಗಳನ್ನು ಹತೋಟಿಗೆ ತಂದು, ಜೀರ್ಣಾಂಗವ್ಯೂಹವನ್ನು ಸ್ವಚ್ಛಗೊಳಿಸಲು ಇದು ಅತೀವ ಸಹಕಾರಿ. ಇದರಿಂದ ಕ್ರೀಡಾಪಟುಗಳು ಸೇವಿಸುವ ಪೌಷ್ಟಿಕ ಆಹಾರವು ಸ್ನಾಯುಗಳಿಗೆ ನೇರವಾಗಿ ಪೂರೈಕೆಯಾಗುತ್ತದೆ. ಮಣ್ಣಿನ ಸೋಂಕು ಅಥವಾ ಬೆವರಿನ ಕಾರಣದಿಂದ ಸಂಭವಿಸುವ ಯಾವುದೇ ಚರ್ಮವ್ಯಾಧಿಗಳು ಹತ್ತಿರ ಸುಳಿಯದಂತೆ ಈ ದ್ರವವು ದೇಹಕ್ಕೆ ಒಳಗಿನಿಂದಲೇ ಪ್ರತಿರೋಧಕ ಶಕ್ತಿಯನ್ನು ನೀಡುತ್ತದೆ. ಈ ಶಕ್ತಿಜಲದ ಸಿದ್ಧತೆಯು ಅತ್ಯಂತ ಶ್ರದ್ಧಾಪೂರ್ವಕ ಪ್ರಕ್ರಿಯೆ.ದಶಕಗಳ ಕಾಲ ಬೆಳೆದ ಬೃಹತ್ ಬೇವಿನ ವೃಕ್ಷದ ಒರಟಾದ ಚಕ್ಕೆಯನ್ನು ಕೆತ್ತಿ ತರಲಾಗುತ್ತಿತ್ತು. ಇದನ್ನು ಮಣ್ಣಿನ ಮಡಿಕೆಯಲ್ಲಿ ನಿರ್ಮಲವಾದ ನೀರಿನೊಂದಿಗೆ ಹಾಕಿ, ಸಣ್ಣ ಉರಿಯಲ್ಲಿ ಸಾರವು ಸಂಪೂರ್ಣವಾಗಿ ಇಳಿಯುವವರೆಗೆ ಕುದಿಸಲಾಗುತ್ತಿತ್ತು. ದ್ರವವು ಗಾಢವಾಗಿ ಬಣ್ಣ ಬದಲಿಸಿದಾಗ ಅದನ್ನು ಶೋಧಿಸಿ, ಸೂರ್ಯೋದಯದ ಬ್ರಾಹ್ಮೀ ಮುಹೂರ್ತದಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ಸೇವಿಸುವುದು ಅಂದಿನ ಗರಡಿಗಳ ಅಲಿಖಿತ ನಿಯಮವಾಗಿತ್ತು. ಯಾವುದೇ ನೈಸರ್ಗಿಕ ಔಷಧಿಯು ಮಿತಿಯಲ್ಲಿದ್ದರೆ ಮಾತ್ರ ಹಿತಕಾರಿ. ಇದು ಪ್ರಬಲವಾದ ಔಷಧಿಯಾಗಿರುವುದರಿಂದ ಅತಿಯಾದ ಸೇವನೆ ಯಕೃತ್ತಿನ ಮೇಲೆ ಒತ್ತಡ ಹೇರಬಹುದು.

ಹೀಗಾಗಿ ಕೇವಲ 20-30 ಮಿಲಿ ಲೀಟರ್‌ನಷ್ಟು ಸೇವನೆಯೇ ಸಾಕಷ್ಟಾಗುತ್ತದೆ. ಕಠಿಣ ಶ್ರಮಜೀವಿಗಳಿಗೆ ಇದು ವರದಾನವಾಗಿದ್ದರೂ, ಸಾಮಾನ್ಯ ನಾಗರಿಕರು ಅಥವಾ ಹಳೆಯ ಕಾಯಿಲೆ ಇರುವವರು ತಜ್ಞ ವೈದ್ಯರ ಮಾರ್ಗದರ್ಶನವಿಲ್ಲದೆ ಇದನ್ನು ಬಳಸಬಾರದು. ಅಖಾಡದ ಉಸ್ತಾದ್‌ಗಳ ಕಟ್ಟುನಿಟ್ಟಿನ ಮೇಲ್ವಿಚಾರಣೆಯಲ್ಲಿ ನಡೆಯುತ್ತಿದ್ದ ಈ ಸಂಪ್ರದಾಯವು ಇಂದಿನ ಯುವಪೀಳಿಗೆಗೆ ಉತ್ತಮ ಪಾಠ. ನಮ್ಮ ಮಣ್ಣಿನ ಸಂಸ್ಕೃತಿಯಲ್ಲಿ ಅಡಗಿರುವ ಇಂತಹ ವಿಶಿಷ್ಟ ಪದ್ಧತಿಗಳು ಇಂದಿಗೂ ಪ್ರಸ್ತುತ. ಬೇವಿನ ಕಹಿಯು ಮಲ್ಲರ ಬದುಕಿನಲ್ಲಿ ರೋಗಮುಕ್ತ ಆರೋಗ್ಯದ ಸಿಹಿಯನ್ನು ತುಂಬುತ್ತಿತ್ತು ಎನ್ನುವುದಕ್ಕೆ ಈ ಪಾನೀಯವೇ ಸಾಕ್ಷಿ.

# ಅಕ್ಷಯ ತೃತೀಯ..! ಶುಭ ತರಲಿ...

ಏ-20 ರಂದು ಬಸವೇಶ್ವರ ಜಯಂತಿ, ಅಕ್ಷಯ ತೃತೀಯ ದಿನ ಶುಭಕಾರ್ಯಗಳಿಗೆ ಶುಭ ಹಾಡುವ ಶುಭದಿನ ಅಕ್ಷಯ ತೃತೀಯ ಮತ್ತು ಅಕ್ಷಯ ತದಿಗೆಯನ್ನು ಸಡಗರದಿಂದ ಆಚರಿಸಲು ಚಿನ್ನದಂಗಡಿಗಳು ಶೃಂಗಾರಗೊಂಡಿವೆ. ಅಕ್ಷಯ ತೃತೀಯ ಸಂದರ್ಭದಲ್ಲಿ ಗ್ರಾಹಕರು ಕೊಳ್ಳಲು ಮುಂದಾಗುವುದು ಸಾಮಾನ್ಯವಾಗಿ ಚಿನ್ನ, ಬೆಳ್ಳಿ ಹಾಗೂ ವಜ್ರದ ಆಭರಣಗಳು ಮನೆಯಲ್ಲಿ ಚಿನ್ನದ ಆಭರಣದ ಪೆಟ್ಟಿಗೆ ತೆರೆದು ನೋಡಿದರೂ ಸಮಾಧಾನವಿಲ್ಲ. ಇನ್ನಷ್ಟು ಒಡವೆಗಳನ್ನು ಖರೀದಿಸುವ ಆಸೆ. ಪ್ರತಿ ವರ್ಷ ಅಕ್ಷಯ ತೃತೀಯದ ದಿನ ಖರೀದಿಸಿದ ಚಿನ್ನದ ಒಡವೆಗಳೆಲ್ಲ. ರಾಶಿ ರಾಶಿಯಾಗಿ ಪೆಟ್ಟಿಗೆಯಲ್ಲಿವೆ. ಈ ವರ್ಷವೂ ಯಾವುದೋ ಒಂದು ಚಿನ್ನದ ಆಭರಣ ಖರೀದಿಸಿ ಆ ಪೆಟ್ಟಿಗೆಯಲ್ಲಿ ಸೇರಿಸಿಟ್ಟರೆ ಸಮಾಧಾನ. ಅಕ್ಷಯ ತೃತೀಯದಂದು ಚಿನ್ನಾಭರಣ ವಾಹನ ಹಾಗೂ ಬೆಲೆ ಬಾಳುವ ವಸ್ತುಗಳನ್ನು ಖರೀದಿಸಿದರೆ. ಅದೃಷ್ಟ ದೊರೆಯುತ್ತದೆ. ಮತ್ತಷ್ಟು ಬೆಲೆ ಬಾಳುವ ವಸ್ತುಗಳನ್ನು ಖರೀದಿಸುವ ಯೋಗ ಬರುತ್ತದೆ. ಈ ದಿನದಂದು ಯಾವುದೇ ಶುಭಕಾರ್ಯಕ್ರಮ ಆರಂಭಿಸಿದರೂ ಅದರಲ್ಲಿ ಸಂಪೂರ್ಣ ಯಶಸ್ಸು ಸಿಗುತ್ತದೆ ಎಂದು ಜನರು ನಂಬುತ್ತಾರೆ. ಈ ದಿನ ಪೂಜೆ ಪುನಸ್ಕಾರಗಳು ವ್ರತದಾನ, ಧರ್ಮ ಮಾಡಿದರೆ ಪುಣ್ಯ ಲಭಿಸುತ್ತದೆ. ಅಕ್ಕ-ಪಕ್ಕದ ಮನೆಯವರಿಗೆ ಅರಿಶಿನ, ಕುಂಕಮ ತಾಂಬೂಲ ಕೊಡುತ್ತಾರೆ. ಗೋವಿಗೆ ಪೂಜೆ ಮಾಡಿ ಬಾಳೆ ಎಲೆಯಲ್ಲಿ ಸಿಹಿ ತಿನಿಸಿದರೆ ವಿವಾಹ ದೋಷಗಳು ಪರಿಹಾರವಾಗುವುದಾಗಿ ನಂಬಿಕೆ ಇದೆ. ಹೀಗಾಗಿ ದಾನ ಧರ್ಮ ನೀಡುವ ಮೂಲಕ ಈ ಅಕ್ಷಯ ತೃತೀಯ ದಿನವನ್ನು ಶ್ರದ್ಧಾಭಕ್ತಿಯಿಂದ ಆಚರಿಸುತ್ತಾರೆ.

**- ಆಭರಣ ಕೊಳ್ಳುವಾಗ ಆಭರಣ ಶೋರೂಮ್ ನಲ್ಲಿ ಹಾಲ್ ಮಾರ್ಕ್ ಚಿನ್ನವನ್ನೇ ಖರೀದಿಸಿ.**

**- ಒಡವೆ ತೂಕದ ಎಲೆಕ್ಟ್ರಾನಿಕ್ ಯಂತ್ರದ ಬಗ್ಗೆ ನಿಗಾವಹಿಸಿ.**




**ವಿ.ಎಂ.ಎಸ್.ಗೋಪಿ**



# ಬೆಳಗಿನ ಉಪಹಾರಕ್ಕೆ ಪೋಷಕಾಂಶ ಹೆಚ್ಚಿರುವ ರಾಗಿ ದೋಸೆ ರೆಸಿಪಿ

ರಾಗಿ ದೋಸೆ ಬೆಳಗಿನ ಉಪಹಾರಕ್ಕೆ ಅದ್ಭುತವಾದ ಆಯ್ಕೆ. ರಾಗಿ ಹಿಟ್ಟು ಹಾಗೂ ಕೆಲವೊಂದು ನೈಸರ್ಗಿಕ ಸಾಮಾಗ್ರಿಗಳನ್ನು ಬಳಸಿ ತಯಾರಿಸಲಾಗುವ ಈ ದೋಸೆ ದೇಹಕ್ಕೆ ಅಗತ್ಯವಾದ ಪೋಷಕಾಂಶಗಳನ್ನು ಒದಗಿಸುತ್ತದೆ ಜೋಳ, ರಾಗಿ, ರಾಗಿಯಿಂದ ತಯಾರಿಸಿದ ರೊಟ್ಟಿ, ದೋಸೆ ಮತ್ತು ಇಡ್ಲಿಗಳು ರುಚಿಕರವಾಗಿರುವುದಲ್ಲದೆ ಪೌಷ್ಟಿಕವೂ ಆಗಿರುತ್ತವೆ. ಹೀಗಾಗಿ ಇವುಗಳನ್ನು ಬಳಸಿ ತಯಾರಿಸಿರುವ ಆಹಾರ ಪದಾರ್ಥಗಳು ಆರೋಗ್ಯಕ್ಕೆ ತುಂಬಾ ಒಳ್ಳೆಯದು ಎಂದು ಆರೋಗ್ಯ ತಜ್ಞರು ಕೂಡ ಸಲಹೆ ನೀಡುತ್ತಾರೆ. ಅದರಲ್ಲೂ ಬೆಳಗಿನ ಉಪಹಾರಕ್ಕೆ ರಾಗಿ ಆಧಾರಿತ ಉಪಾಹಾರವನ್ನು ತಿನ್ನುವುದು ಅತ್ಯಂತ ಆರೋಗ್ಯಕರ ಆಯ್ಕೆಯಾಗಿದೆ. ಪ್ರಮುಖವಾಗಿ ರಾಗಿಯಲ್ಲಿ ಕಂಡುಬರುವ ಕ್ಯಾಲ್ಸಿಯಂ ಅಂಶವು ಅಕ್ಕಿ ಅಥವಾ ಗೋಧಿಗಿಂತ




ಹೆಚ್ಚಾಗಿರುತ್ತದೆ, ಇದು ಮೂಳೆಗಳ ಆರೋಗ್ಯಕ್ಕೆ ಮತ್ತು ರಕ್ತಹೀನತೆಯನ್ನು ತಡೆಯಲು ಸಹಾಯ ಮಾಡುತ್ತದೆ.ಪ್ರಸ್ತುತ ಇಂದಿನ ಲೇಖನದಲ್ಲಿ ರಾಗಿ ಬಳಸಿ ಮಾಡುವ ದೋಸೆಯ ಬಗ್ಗೆ ನೋಡೋಣ

**ರಾಗಿ ದೋಸೆ ಮಾಡುವ ವಿಧಾನ:** ಮೊದಲಿಗೆ ತಳ ಆಳವಿರುವ ಒಂದು ಪಾತ್ರೆಯಲ್ಲಿ ರಾಗಿ ಹಿಟ್ಟು ಮತ್ತು ಸ್ವಲ್ಪ ನೀರನ್ನು ಸೇರಿಸಿ ಚೆನ್ನಾಗಿ ಮಿಶ್ರಗೊಳಿಸಿ. ಈ ಮಿಶ್ರಣವು ದೋಸೆ ಹಿಟ್ಟಿನ ಹದಕ್ಕೆ ಇರುವ ಹಾಗೆ ನೋಡಿಕೊಳ್ಳಿ

ಇನ್ನು ಈ ಹಿಟ್ಟಿನ ಮಿಶ್ರಣಕ್ಕೆ ಈಗಾಗಲೇ ಹಚ್ಚಿಕೊಂಡಿರುವ ಈರುಳ್ಳಿ, ಹಸಿ ಮೆಣಸಿನ ಕಾಯಿ ಕೊತ್ತಂಬರಿ ಸೊಪ್ಪನ್ನು ಬೆರೆಸಿ ಹಾಗೂ ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ, ಆಮೇಲೆ ಎಲ್ಲಾ ಪದಾರ್ಥಗಳು ಚೆನ್ನಾಗಿ ಮಿಶ್ರಣ ಮಾಡಿ ಕೊಳ್ಳಿ. ಈ ದೋಸೆ ಹಿಟ್ಟು ಗಂಟು, ಉಂಡೆಗಳು ಇಲ್ಲದಂತೆ ನೋಡಿ ಕೊಳ್ಳಿ ಮಧ್ಯಮ ಉರಿಯಲ್ಲಿ ದೋಸೆ ಕಾವಲಿಯನ್ನು ಬಿಸಿಯಾಗಲು ಬಿಡಿ, ಆಮೇಲೆ ಒಂದು ಸೌಟು ದೋಸೆ ಹಿಟ್ಟನ್ನು ದೋಸೆ ಕಾವಲಿಯ ಮೇಲೆ ಸುರಿಯಿರಿ. ಆಮೇಲೆ ದೋಸೆಯ ಮೇಲೆ ಸ್ವಲ್ಪ ತುಪ್ಪ ಅಥವಾ ಎಣ್ಣೆಯನ್ನು ಹಾಕಿ, ಮುಚ್ಚಳವನ್ನು ಮುಚ್ಚಿ, ದೋಸೆ ಎರಡು ಬದಿಯಲ್ಲೂ ಹೊಂಬಣ್ಣಕ್ಕೆ ಬರುವ ಹಾಗೆ ಬೇಯಿಸಿಕೊಂಡು ಆಮೇಲೆ ಚಟ್ನಿಯೊಂದಿಗೆ ಸವಿಯಿರಿ.

### ರಾಗಿಯ ಬಗ್ಗೆ ಮೋದಿಯವರ ಮಾತು




**ಎರಡು ದಿನಗಳ ಹಿಂದೆಯಷ್ಟೇ ಮಂಡ್ಯದ ಆದಿಚುಂಚನಗಿರಿ ಮಠಕ್ಕೆ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿಯವರು, ರಾಗಿ ಹಾಗೂ ಇದರಿಂದ ಮಾಡುವ ಮುದ್ದೆಯ ಮಹತ್ವ, ಪೌಷ್ಟಿಕಾಂಶ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದರು. ಅದರಲ್ಲೂ ರಾಗಿ ಬಳಸಿ ಮಾಡುವ ಮುದ್ದೆ, ಅದು ಕೇವಲ ಆಹಾರವಲ್ಲ, ಅದೊಂದು ಶಕ್ತಿ, ಸಾಮರ್ಥ್ಯದ ಸಂಕೇತ ಎಂದು ಮೋದಿ ಬಣ್ಣಿಸಿದರು.**

**ಕಿಡ್ನಿಸ್ಟೋನ್ ಉಂಟಾದಾಗ ವಿಪರೀತ ನೋವು ಕಾಣಿಸಿಕೊಳ್ಳುತ್ತದೆ. ಜೊತೆಗೆ ಮೂತ್ರದಲ್ಲಿನ ರಕ್ತಕಾಣಿಸಿಕೊಳ್ಳಲಾರಂಭಿಸುತ್ತದೆ. ಇದನ್ನು ನಿರ್ಲಕ್ಷಿಸದೇ ಆರಂಭಿಕ ಚಿಕಿತ್ಸೆ ಪಡೆಯುವುದು ಮುಖ್ಯ.**

# ಮೂತ್ರದಲ್ಲಿ ರಕ್ತ ಕಾಣಿಸಿಕೊಳ್ಳಲು ಕಿಡ್ನಿ ಸ್ಟೋನ್ ಕಾರಣವೇ?

ಪ್ರಕೃತಿಯ ಅತ್ಯದ್ಭುತ ಸೃಷ್ಟಿಯಾದ ಮಾನವ ದೇಹವೆಂಬ ಈ ಮಹಾ ಸಾಮ್ರಾಜ್ಯದಲ್ಲಿ, ಮೂತ್ರಪಿಂಡಗಳು ಸದಾಕಾಲ ಎಚ್ಚರವಿರುವ ಮೌನ ಕಾವಲುಗಾರರು. ರಕ್ತವನ್ನು ಹಗಲಿರುಳು ಶೋಧಿಸಿ, ಕಶ್ಮಲಗಳನ್ನು ಹೊರಹಾಕುವ ಈ ಶುದ್ಧೀಕರಣ ಕೇಂದ್ರಗಳ ಕಾಯಕ ನಿಜಕ್ಕೂ ಬೆರಗುಗೊಳಿಸುವಂಥದ್ದು. ಆದರೆ, ಈ ಅತ್ಯಂತ ಸೂಕ್ಷ್ಮ, ಪರಿಪೂರ್ಣ ವ್ಯವಸ್ಥೆಯಲ್ಲಿ ಒಮ್ಮೊಮ್ಮೆ ನೀರು, ಖನಿಜಾಂಶಗಳ ನಡುವಿನ ಸಮತೋಲನ ತಪ್ಪಿದಾಗ, ಅನಗತ್ಯ ಕಲ್ಲುಗಳು ರೂಪುಗೊಳ್ಳುತ್ತವೆ.

**ಮೂತ್ರಪಿಂಡದ ಕಲ್ಲು:** ಮೂತ್ರ ವಿಸರ್ಜನೆಯ ಸಮಯದಲ್ಲಿ ಮೂತ್ರದ ಬಣ್ಣವು ಹಠಾತ್ತನೆ ಕೆಂಪಾಗಿ ಗೋಚರಿಸಿದಾಗ, ಭಯಪಡುವುದು ಸಹಜ. ಇದರ ಹಿಂದಿರುವ ಜೀವಶಾಸ್ತ್ರೀಯ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳುವುದು ಭಯವನ್ನು ಹೋಗಲಾಡಿಸಲು ಮೊದಲ ಹೆಜ್ಜೆಯಾಗಿದೆ. ವಿಶ್ವದ ಅತ್ಯುತ್ತಮ ಮೂತ್ರಶಾಸ್ತ್ರ ಸಂಶೋಧನೆಗಳು, 'ದಿ ಲ್ಯಾನ್ಸೆಟ್' ನಂತಹ ಪ್ರತಿಷ್ಠಿತ ವೈದ್ಯಕೀಯ ನಿಯತಕಾಲಿಕೆಗಳ ಪ್ರಕಾರ, ರಕ್ತಮೂತ್ರಕ್ಕೆ ಮೂತ್ರ ಪಿಂಡದ ಕಲ್ಲುಗಳೇ ಅತ್ಯಂತ ಪ್ರಮುಖ ಕಾರಣ ಎನ್ನುತ್ತಾರೆ ಬೆಂಗಳೂರಿನ ರಿಗಲ್ ಆಸ್ಪತ್ರೆಯ ಮೂತ್ರಕೋಶ ತಜ್ಞ ಡಾ. ಸುರಿ ರಾಜು.



**ಹರಳುಗಳ ಉಗಮ:** ಮೂತ್ರಪಿಂಡದಲ್ಲಿ ಹರಳುಗಳು ರಾತ್ರೋರಾತ್ರಿ ಸೃಷ್ಟಿಯಾಗುವುದಿಲ್ಲ. ಇದು ಬಹುಕಾಲದ ಒಂದು ಮೌನ ಪ್ರಕ್ರಿಯೆಯಾಗಿದೆ. ದೇಹದಲ್ಲಿ ನೀರಿನ ಅಂಶ ಕಡಿಮೆಯಾದಾಗ, ಆಹಾರದಲ್ಲಿ ನಿರ್ದಿಷ್ಟ ಖನಿಜಗಳ ಪ್ರಮಾಣ ಹೆಚ್ಚಾದಾಗ, ಮೂತ್ರದ ಸಾಂದ್ರತೆಯು ಮಿತಿಮೀರುತ್ತದೆ. ಈ ಹಂತದಲ್ಲಿ, ದ್ರವದಲ್ಲಿ ಕರಗಬೇಕಿದ್ದ ಕ್ಯಾಲ್ಸಿಯಂ, ಆಕ್ಸಲೇಟ್, ಯೂರಿಕ್ ಆಮ್ಲದ ಕಣಗಳು ಒಂದಕ್ಕೊಂದು ಅಂಟಿಕೊಂಡು ಸಣ್ಣ ಸ್ಪಟಿಕಗಳಾಗಿ ಮೈದಳೆಯುತ್ತವೆ. ಕಾಲಾನಂತರದಲ್ಲಿ, ಈ ಸ್ಪಟಿಕಗಳು ಒಗ್ಗೂಡಿ ಕಠಿಣವಾದ ಕಲ್ಲುಗಳಾಗಿ ಮಾರ್ಪಡುತ್ತವೆ. ಇವು ಮರಳಿನ ಕಣದಷ್ಟೇ ಸಣ್ಣದಿರಬಹುದು, ಗಾಲ್ಫ್ ಚೆಂಡಿನಷ್ಟೂ ಬೃಹದಾಕಾರವಾಗಿ ಬೆಳೆಯಬಹುದು.

**ಘರ್ಷಣೆಯ ತೀವ್ರತೆ:** ಈ ಹರಳುಗಳು ನಯವಾದ ಮುತ್ತುಗಳಲ್ಲ, ಬದಲಾಗಿ, ಒರಟಾದ ಮತ್ತು ಗರಗಸದಂತಹ ಕಠಿಣ ಅಂಚುಗಳನ್ನು ಹೊಂದಿರುತ್ತವೆ. ಈ ಚೂಪಾದ ಹರಳುಗಳು ಕಿರಿದಾದ ಮೂತ್ರನಾಳದ ಗೋಡೆಗಳಿಗೆ ಉಜ್ಜುತ್ತಾ, ಗೀಚುತ್ತಾ ಸಾಗುವಾಗ, ಒಳಗಿನ ಸೂಕ್ಷ್ಮ ರಕ್ತನಾಳಗಳು ಒಡೆದು ರಕ್ತಸ್ರಾವ ಉಂಟಾಗುತ್ತದೆ.

**ರಕ್ತಸ್ರಾವದ ಸ್ವರೂಪ:** ಕೆಲವೊಮ್ಮೆ ಈ ರಕ್ತಸ್ರಾವವು ಬರಿಗಣ್ಣಿಗೆ ನಿಚ್ಚಳವಾಗಿ, ಕೆಂಪು ಅಥವಾ ಕಂದು ಬಣ್ಣದಲ್ಲಿ ಕಾಣುತ್ತದೆ. ಮತ್ತೆ ಕೆಲವೊಮ್ಮೆ, ಇದು ಕೇವಲ ವೈದ್ಯಕೀಯ ಪ್ರಯೋಗಾಲಯದ ಸೂಕ್ಷ್ಮ ದರ್ಶಕದಲ್ಲಿ ಮಾತ್ರ ಗೋಚರಿಸುವಷ್ಟು ಅಲ್ಪ ಪ್ರಮಾಣದಲ್ಲಿರುತ್ತದೆ.

**ವೈದ್ಯಕೀಯ ಎಚ್ಚರಿಕೆ:** ರಕ್ತಮೂತ್ರವು ಕಲ್ಲುಗಳಿಂದ ಉಂಟಾಗುವ ಸಾಮಾನ್ಯ ಲಕ್ಷಣವಾದರೂ, ಇದನ್ನು ನಿರ್ಲಕ್ಷಿಸುವಂತಿಲ್ಲ. ಇದು ಸೋಂಕು ಅಥವಾ ಗಡ್ಡೆಗಳಂತಹ ಇತರ ಗಂಭೀರ ಸಮಸ್ಯೆಗಳ ಸೂಚನೆಯೂ ಆಗಿರಬಹುದು.

**ರಕ್ತಮೂತ್ರ:** ಮೂತ್ರಪಿಂಡದಲ್ಲಿ ಭದ್ರವಾಗಿ ಕುಳಿತಿರುವ ಕಲ್ಲುಗಳು ಸಾಮಾನ್ಯವಾಗಿ ನೋವು ನೀಡುವುದಿಲ್ಲ. ಆದರೆ ಅವು ತಮ್ಮ ಮೂಲಸ್ಥಾನದಿಂದ ಕದಲಿದಾಗ ಅಸಲಿ ಸಮಸ್ಯೆ ಶುರುವಾಗುತ್ತದೆ. ಈ ಹರಳುಗಳು ಮೂತ್ರನಾಳದ ಮೂಲಕ ಕೆಳಮುಖವಾಗಿ ಹರಿಯಲು ಯತ್ನಿಸುತ್ತವೆ. ಮೂತ್ರನಾಳವು ಕೇವಲ ಮೂರರಿಂದ ನಾಲ್ಕು ಮಿಲಿಮೀಟರ್‌ಗಳಷ್ಟು ಅಗಲವಿರುವ, ಅತ್ಯಂತ ಸೂಕ್ಷ್ಮವಾದ ಮತ್ತು ಮೃದುವಾದ ಲೋಳೆಪೊರೆಯ ಅಂಗಾಂಶಗಳಿಂದ ನಿರ್ಮಿತವಾದ ಸಣ್ಣ ಕೊಳವೆಯಾಗಿದೆ.

## ವೇದನೆಯ ಸ್ವರೂಪ ಮತ್ತು ಇತರ ಲಕ್ಷಣಗಳು

**ಅಸಹನೀಯ ನೋವು:** ಈ ವೇದನೆಯನ್ನು ವಿಜ್ಞಾನವು ದೈಹಿಕ ಯಾತನೆಯ ಪರಾಕಾಷ್ಠೆ ಎಂದು ಬಣ್ಣಿಸುತ್ತದೆ. ಅನೇಕರು ಇದನ್ನು ಪ್ರಸವ ವೇದನೆಗೆ ಹೋಲಿಸುತ್ತಾರೆ.

**ಒತ್ತಡ ಮತ್ತು ಉರಿಯೂತ:** ಕಲ್ಲು ಮೂತ್ರನಾಳದಲ್ಲಿ ಸಿಲುಕಿದಾಗ, ಮೂತ್ರದ ಹರಿವಿಗೆ ತಡೆಯುಂಟಾಗುತ್ತದೆ. ಇದರಿಂದಾಗಿ ಮೂತ್ರಪಿಂಡದ ಒಳಗೆ ಒತ್ತಡ ಹೆಚ್ಚಾಗಿ, ಅದು ಊದಿಕೊಳ್ಳುತ್ತದೆ.

**ನೋವಿನ ಹರಿವು :** ಬೆನ್ನಿನ ಹಿಂಭಾಗದಲ್ಲಿ, ಪಕ್ಕೆಲುಬಿನ ಕೆಳಗೆ ಶುರುವಾಗುವ ಈ ನೋವು, ನರಗಳ ಜಾಲದ ಮೂಲಕ ಹಾದುಹೋಗುತ್ತಾ, ಕ್ರಮೇಣ ಕಿಬ್ಬೊಟ್ಟೆ, ತೊಡೆಸಂದಿಯ ಕಡೆಗೆ ವಿಸ್ತರಿಸುತ್ತದೆ.?

**ಅಲೆಯಲೆಯಾದ ವೇದನೆ:** ಕಲ್ಲನ್ನು ಹೊರಹಾಕಲು ಮೂತ್ರನಾಳವು ನಿರಂತರವಾಗಿ ಸಂಕುಚಿತಗೊಳ್ಳುವ ಕಾರಣ ಈ ನೋವು ಒಂದೇ ಸಮನೆ ಇರದೆ, ಕಡಲಿನ ಅಲೆಗಳಂತೆ ಏರಿಳಿಯುತ್ತಾ ರೋಗಿಯನ್ನು ಹೈರಾಣಾಗಿಸುತ್ತದೆ.

> **ಅಪಾಯದ ಮುನ್ಸೂಚನೆ**
> **ಕೆಲವೊಮ್ಮೆ ಕಲ್ಲು ಮೂತ್ರದ ಹರಿವಿಗೆ ಸಂಪೂರ್ಣ ತಡೆಯೊಡ್ಡುತ್ತದೆ. ಹರಿಯದ ನೀರು ಹೇಗೆ ಕಲುಷಿತಗೊಳ್ಳುತ್ತದೆಯೋ, ಹಾಗೆಯೇ ನಿಂತ ಮೂತ್ರದಲ್ಲಿ ಬ್ಯಾಕ್ಟೀರಿಯಾಗಳು ತ್ವರಿತವಾಗಿ ವೃದ್ಧಿಯಾಗಿ ಗಂಭೀರ ಸೋಂಕು ಉಂಟಾಗುತ್ತದೆ. ತೀವ್ರವಾದ ಚಳಿ, ನಡುಕ ಮತ್ತು ಜ್ವರ ಕಾಣಿಸಿಕೊಂಡರೆ, ಅಥವಾ ಮೂತ್ರವು ಮೋಡದಂತೆ ಮಂಜಾಗಿ ದುರ್ವಾಸನೆಯಿಂದ ಕೂಡಿದ್ದರೆ, ಅದು ಸೋಂಕಿನ ಸ್ಪಷ್ಟ ಲಕ್ಷಣ. ಇದು ಸೆಪ್ಸಿಸ್ ನಂತಹ ಅಪಾಯಕಾರಿ ಘಟ್ಟಕ್ಕೆ ಹೋಗುವ ಮುನ್ನವೇ ತಕ್ಷಣದ ತುರ್ತು ವೈದ್ಯಕೀಯ ನೆರವು ಬೇಡುವ ಸ್ಥಿತಿಯಾಗಿದೆ.**

# ದೂಳಿನ ಮರೆಯಲ್ಲಿ ಕಳೆಗುಂದಿದ ಶಿಲ್ಪವನ: ನಿರ್ವಹಣೆ ಇಲ್ಲದೆ ಕಳೆಗುಂದಿದ ಕಲಾಕೃತಿಗಳು

• ಉದಯವಾಹಿನಿ, ಶಿರಸಿ

ನಗರದ ಹೊರವಲಯದ ಚಿಪಗಿಯಲ್ಲಿರುವ ಶಾಲ್ಮಲಾ ಶಿಲ್ಪವನವು ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿಯ ದೂಳಿನ ಮರೆಯಲ್ಲಿ ಕಳೆಗುಂದುತ್ತಿದೆ. ಇದು ಕಲಾಕೃತಿಗಳ ನಿರ್ವಹಣೆಗೆ ಸಂಚಕಾರ ತಂದಿರುವುದಲ್ಲದೆ, ಪ್ರವಾಸಿಗರು ಹಾಗೂ ವಾಯುವಿಹಾರಿಗಳು ವನದತ್ತ ಸುಳಿಯಲು ಹಿಂದೇಟು ಹಾಕುವಂತಾಗಿದೆ.

2016ರಲ್ಲಿ ಅಂದಿನ ಶಾಸಕ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ದೂರದೃಷ್ಟಿಯ ಯೋಜನೆಯಡಿ 15 ಎಕರೆ ವಿಸ್ತೀರ್ಣದಲ್ಲಿ ಶಿಲ್ಪವನ ನಿರ್ಮಿಸಲಾಗಿತ್ತು. ನುರಿತ ಕಲಾವಿದರ ಕೈಚಳಕದಲ್ಲಿ ಮೂಡಿಬಂದ ಶಿಲಾ ಮೂರ್ತಿಗಳು ಮಲೆನಾಡಿನ ಜನಜೀವನ, ಅರಣ್ಯ, ಸಂಸ್ಕೃತಿ ಮತ್ತು ಇಲ್ಲಿನ ವೈವಿಧ್ಯಮಯ ಬದುಕಿನ ಚಿತ್ರಣವನ್ನು ಅತ್ಯಂತ ಸುಂದರವಾಗಿ ಕಟ್ಟಿಕೊಡುತ್ತಿದ್ದವು. ಪ್ರಾರಂಭಿಕ ಹಂತದಲ್ಲಿ ಪ್ರಕೃತಿ ಪ್ರೇಮಿಗಳು ಮತ್ತು ನಗರವಾಸಿಗಳನ್ನು ಆಕರ್ಷಿಸಿದ್ದ ಈ ಶಿಲ್ಪವನಕ್ಕೆ ದಿನವೊಂದಕ್ಕೆ ನೂರಾರು ಮಂದಿ ಭೇಟಿ ನೀಡುತ್ತಿದ್ದರು. ಕಾಲಕ್ರಮೇಣ, ವಾರಾಂತ್ಯದಲ್ಲಿ ಸುಮಾರು 500ಕ್ಕೂ ಹೆಚ್ಚು ಪ್ರವಾಸಿಗರು ಇಲ್ಲಿಗೆ ಆಗಮಿಸುತ್ತಿದ್ದರು. ಆದರೆ, ಈಗ ಪರಿಸ್ಥಿತಿ ತೀರಾ ಭಿನ್ನವಾಗಿದೆ. ಶಿರಸಿ-ಹಾವೇರಿ ರಾಷ್ಟ್ರೀಯ ಹೆದ್ದಾರಿ (766-ಇ) ವಿಸ್ತರಣಾ ಕಾಮಗಾರಿ ವರ್ಷಗಳಿಂದ ನಡೆಯುತ್ತಿದ್ದು, ರಸ್ತೆ ಅಗೆತದ ವೇಳೆ ಹೊರಹೊಮ್ಮುತ್ತಿರುವ ದೂಳಿನ ರಾಶಿ ಶಿಲ್ಪವನದ ಆವರಣವನ್ನೇ ಆವರಿಸಿಕೊಂಡಿದೆ. ಇಲ್ಲಿನ ಸುಂದರ ಶಿಲ್ಪಗಳು, ಆಟಿಕೆ ಪರಿಕರಗಳು, ಹೂವಿನ ಗಿಡಗಳು ಮತ್ತು ಸಾರ್ವಜನಿಕರು ಕುಳಿತುಕೊಳ್ಳುವ ಆಸನಗಳು ದಪ್ಪನೆಯ ದೂಳಿನ ಪದರದಿಂದ ಮುಚ್ಚಿಹೋಗಿವೆ. ಶಿಲ್ಪವನಕ್ಕೆ ಭೇಟಿ ನೀಡಿದ ಸಾರ್ವಜನಿಕರ ಬಟ್ಟೆ ದೂಳಿನಿಂದ ಮಲಿನವಾಗುವುದಲ್ಲದೆ, ಮನೆಗೆ ಮರಳಿದ ತಕ್ಷಣ ಮೈ ತೊಳೆದುಕೊಳ್ಳುವಂಥ ಸ್ಥಿತಿ


ಉದಯವಾಹಿನಿ ಚಿತ್ರ

ನಿರ್ಮಾಣವಾಗಿದೆ ಎನ್ನುತ್ತಾರೆ ಸ್ಥಳೀಯ ನಿವಾಸಿ ರಾಜೇಶ ಶೇಟ್.

ಹೆದ್ದಾರಿಯಲ್ಲಿ ಸದಾ ವಾಹನಗಳ ದಟ್ಟಣೆ ಇರುವುದರಿಂದ, ಅರಣ್ಯ ಇಲಾಖೆ ಅಧಿಕಾರಿಗಳು ಎದುರಿನ ರಸ್ತೆಗೆ ನೀರು ಸಿಂಪಡಿಸುವಂತೆ ಗುತ್ತಿಗೆದಾರರಿಗೆ ವಿನಂತಿಸಿದರೂ, ಯಾವುದೇ ಶಾಶ್ವತ ಪರಿಹಾರ ಸಿಗುತ್ತಿಲ್ಲ. ನೀರು ಹಾಕಿದ ಕೆಲವೇ ಕ್ಷಣಗಳಲ್ಲಿ ರಸ್ತೆ ಒಣಗಿ ಮತ್ತೆ ದೂಳು ಏಳುತ್ತಿರುವುದರಿಂದ, ಪ್ರವಾಸಿಗರು ಶಿಲ್ಪವನದತ್ತ ಸುಳಿಯದಂತಾಗಿದೆ. ಪರಿಣಾಮ, ಶಿಲ್ಪವನಕ್ಕೆ ಬರುವ ಪ್ರವಾಸಿಗರ ಸಂಖ್ಯೆ ದಿನಕ್ಕೆ ಕೇವಲ 10 ರಿಂದ 15 ಮಂದಿಗೆ ಕುಸಿದಿದೆ. ಪ್ರವಾಸಿಗರ ಕೊರತೆಯಿಂದಾಗಿ ಅರಣ್ಯ ಇಲಾಖೆಯ ಆದಾಯಕ್ಕೂ ಪೆಟ್ಟು ಬಿದ್ದಿದೆ ಎಂಬುದು ಶಿಲ್ಪವನ ಸಿಬ್ಬಂದಿ ಮಾತಾಗಿದೆ. ಅಭಿವೃದ್ಧಿ ಕಾರ್ಯಗಳು ಪ್ರವಾಸಿ ತಾಣದ ಸೌಂದರ್ಯಕ್ಕೆ ಅಥವಾ ಸಾರ್ವಜನಿಕರ ಆರೋಗ್ಯಕ್ಕೆ ಧಕ್ಕೆ ತರಬಾರದು. ಸಂಬಂಧಪಟ್ಟ ಗುತ್ತಿಗೆದಾರರು ದೂಳಿನ ನಿಯಂತ್ರಣಕ್ಕೆ ಪರಿಣಾಮಕಾರಿ ಮತ್ತು ಶಾಶ್ವತ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದು ಸ್ಥಳೀಯರ ಆಗ್ರಹವಾಗಿದೆ.

# ನೀರಕಂಠ-ಶಿರಾಲಿ ಭಾಗದ ರೈತರ ದಶಕಗಳ ಬೇಡಿಕೆಗೆ ಅಸ್ತು


ಉದಯವಾಹಿನಿ ಚಿತ್ರ

• ಉದಯವಾಹಿನಿ, ಭಟ್ಕಳ

ತಾಲ್ಲೂಕಿನ ನೀರಕಂಠ ಶಿರಾಲಿ ಭಾಗದ ರೈತರ ದಶಕಗಳ ಬೇಡಿಕೆಗೆ ಕೊನೆಗೂ ಸರ್ಕಾರ ಅಸ್ತು ಎಂದಿದೆ. ಕಡವಿನಕಟ್ಟಾ ಭೀಮಾ ನದಿಯಿಂದ ನೀರಕಂಠ ಶಿರಾಲಿ ತನಕ ಕಾಲುವೆ ನಿರ್ಮಾಣಕ್ಕೆ ರೂ.6 ಕೋಟಿ ಅನುದಾನ ಬಿಡುಗಡೆ ಮಾಡಿದ್ದು ರೈತರ ಮೊಗದಲ್ಲಿ ಮಂದಹಾಸ ಮೂಡಿದೆ.

ಶಿರಾಲಿ, ನೀರಕಂಠ ಗ್ರಾಮಗಳಲ್ಲಿ ನೂರಾರು ಎಕರೆ ಕೃಷಿ ಭೂಮಿಗಳಿವೆ. ಇಲ್ಲಿನ ರೈತರು ಭತ್ತದ ಕೃಷಿ ಜೊತೆಗೆ ಶೇಂಗಾ ಇನ್ನಿತರ ಉಪಕೃಷಿಗಳನ್ನು ಬೇಸಾಯ ಮಾಡಿ ಜೀವನ ಸಾಗಿಸುತ್ತಾರೆ. ಹಲವರು ಇಲ್ಲಿ ಮಲ್ಲಿಗೆ ಕೃಷಿ ಕೂಡ ಮಾಡಿ ಬದುಕು ಕಟ್ಟಿಕೊಂಡಿದ್ದಾರೆ.

ಈ ಭಾಗದ ರೈತರು ಕೃಷಿ ಭೂಮಿಗಳ ಬೇಸಾಯಕ್ಕೆ ಕಡವಿನಕಟ್ಟಾ ಭೀಮಾ ನದಿಯ ನೀರನ್ನೇ ಅವಲಂಭಿಸಿದ್ದಾರೆ. ಈ ಮೊದಲು ಇದ್ದಂತಹ ಕಾಲುವೆ ಸಂಪೂರ್ಣವಾಗಿ ಶಿಥಿಲಾವಸ್ಥೆಗೊಂಡಿರುವ ಕಾರಣ ಗದ್ದಗಳಿಗೆ ನೀರು ಹಾಯಿಸಲು ಕಷ್ಟಸಾಧ್ಯವಾಗಿತ್ತು. ಕಾಲುವೆಯಲ್ಲಿ ಅಲ್ಲಲ್ಲಿ ಬೃಹತ್ ಗಾತ್ರದ ರಂಧ್ರ ಇರುವ ಕಾರಣ ನೀರು ಮುಂದೆ ಸಾಗುತ್ತಿರಲಿಲ್ಲ. ಬೇಸಿಗೆಯಲ್ಲಿ ಕೃಷಿ ಮಾಡುವಾಗ ರೈತರು ಈ ಕಾಲುವೆ ಮೂಲಕ ನೀರನ್ನು ಹಾಯಸುವುದೇ ಒಂದು ಸಾಹಸವಾಗಿತ್ತು. ಗದ್ದೆಗಳಿಗೆ ಸಮರ್ಪಕ ನೀರು ಹಾಯಿಸಲು ಸಾಧ್ಯವಾಗದ ಕಾರಣ ರೈತರು ಮಳೆಗಾಲದಲ್ಲಿ ಮಾತ್ರ ಭತ್ತದ ಕೃಷಿ ಮಾಡಿ ಉಳಿದ ಸಮಯ ಪಾಳು ಬೀಡುವ ಸ್ಥಿತಿ ಇತ್ತು. ಕಳೆದ ಕೆಲವು ವರ್ಷಗಳಿಂದ ಪ್ರತಿ ಬಾರಿಯೂ ಜನಪ್ರತಿನಿಧಿಗಳನ್ನು ಭೇಟಿ ಮಾಡಿ ಕಾಲುವೆ ನಿರ್ಮಾಣಕ್ಕೆ ಆಗ್ರಹಿಸುತ್ತಿದ್ದೇವು. ಆದರೆ ಈ ಬಾರಿ ಸಚಿವ ಮಂಕಾಳ ವೈದ್ಯ ಅವರು ಆಸಕ್ತಿ ತೋರಿಸಿ ?6 ಕೋಟಿ ಮೊತ್ತದ ಕಾಲುವೆ ನಿರ್ಮಾಣಕ್ಕೆ ಮುಂದಾಗಿರುವುದು ಸಂತಸ ತರಿಸಿದೆ. ವರ್ಷಪೂರ್ತಿ ಈ ಕಾಲವೆ ಮೂಲಕ ನೀರು ದೊರೆತರೆ ಈ ಭಾಗದ ರೈತರು ಇನ್ನಷ್ಟು ಬೆಳೆ ತೆಗೆಯಲು ಅನುಕೂಲವಾಗುತ್ತದೆ ಎನ್ನುತ್ತಾರೆ ಸ್ಥಳೀಯ ರೈತರಾದ ಮಾದೇವ ನಾಯ್ಕ.

## ರಸ್ತೆಯಲ್ಲಿ ಜಲ್ಲಿಕಲ್ಲುಗಳು ಮೇಲೆದ್ದು ವಾಹನ ಸವಾರರಿಗೆ ಸವಾಲು ಒಡ್ಡುತ್ತಿವೆ

# ಗ್ರಾಮಕ್ಕಿಲ್ಲ ಸಮರ್ಪಕ ರಸ್ತೆ: ನಿತ್ಯ ನರಕ ದರ್ಶನ

• ಉದಯವಾಹಿನಿ, ದಾವಣಗೆರೆ

ಗರಿಷ್ಠ ಮಿತಿ ಇಲ್ಲದಿದ್ದರೂ ಈ ರಸ್ತೆಯಲ್ಲಿ ಸಾಗುವ ಯಾವ ವಾಹನಗಳೂ ಗಂಟೆಗೆ 20 ಕಿಲೋಮೀಟರ್‌ಗಿಂತ ಹೆಚ್ಚು ವೇಗದಲ್ಲಿ ಸಂಚರಿಸುವುದಿಲ್ಲ.. ಕಲ್ಲು, ಮಣ್ಣು ಸಾಗಿಸುವ ಲಾರಿ, ಟ್ರ್ಯಾಕ್ಟರ್‌ಗಳ ಹಿಂದೆ ಹೋಗುವ ಇತರ ವಾಹನಗಳ ಸವಾರರಿಗೆ ದೂಳಿನ ಮಜ್ಜನ ಖಚಿತ.. ಸಾಮಗ್ರಿ ಬಿದ್ದುಹೋಗುವ ಆತಂಕದಲ್ಲಿ ನಾಜೂಕಿನಿಂದ ಸರಕು ಸಾಗಣೆ ಆಟೊ ಓಡಿಸುವ ಚಾಲಕರು...

ನಗರದಿಂದ ಕುಂದುವಾಡ ಕೆರೆಯನ್ನು ಬಳಸಿಕೊಂಡು ಹೊಸ ಕುಂದುವಾಡ ಹಾಗೂ ಹಳೆ ಕುಂದುವಾಡ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಓಡಾಡಿದವರಿಗೆ ಅದರ ನೈಜತೆಯ ಅರಿವು ಇರುತ್ತದೆ.

ಕೆರೆಯ ಮುಖ್ಯದ್ವಾರದ ಮುಂದಿನ ರಸ್ತೆ ಉತ್ತಮವಾಗಿದೆ. ಆದರೆ ಹಿಂಭಾಗದ ರಸ್ತೆಯಲ್ಲಿ ಜಲ್ಲಿಕಲ್ಲುಗಳು ಮೇಲೆದ್ದು ವಾಹನ ಸವಾರರಿಗೆ ಸವಾಲು ಒಡ್ಡುತ್ತಿವೆ. ಕೆರೆಯ ಹಿಂಭಾಗದ ಎರಡು ಪ್ರವೇಶದ್ವಾರಗಳ ನಡುವೆ ಅಂದಾಜು ಒಂದೂವರೆ ಕಿಲೋಮೀಟರ್ ಉದ್ದದ ಈ ರಸ್ತೆಯಲ್ಲಿ ದಿನವೂ ಲೆಕ್ಕವಿಲ್ಲದಷ್ಟು ವಾಹನಗಳು ಸಂಚರಿಸುತ್ತವೆ. ಕುಂದುವಾಡ ಗ್ರಾಮದ ಮೂಲಕ ರಾಷ್ಟ್ರೀಯ ಹೆದ್ದಾರಿಯನ್ನು ಈ ರಸ್ತೆ ಸಂಪರ್ಕಿಸುತ್ತದೆ. ಸಾವಿರಾರು ಜನ ಗುಂಡಿಮಯ ರಸ್ತೆಯಲ್ಲೇ ಸಾಗುವ ಅನಿವಾರ್ಯತೆ ಇದೆ.

ಐದು ವರ್ಷಕ್ಕೊಮ್ಮೆ ನಡೆಯುವ ಮಾರಿಕಾಂಬಾ ಜಾತ್ರೆ ಬಂದಿರುವ ಕುಟುಂಬದವರು, ಸಂಬಂಧಿಕರು, ಸ್ನೇಹಿತರು ರಸ್ತೆ ಇನ್ನೂ ಸರಿಯಾಗಿಲ್ಲವೇ? ಎಂದು ಪ್ರಶ್ನಿಸುತ್ತಿದ್ದಾರೆ. ಕಳೆದ ಬಾರಿ ಜಾತ್ರೆಯ ವೇಳೆ ಇದ್ದ ಸ್ಥಿತಿಯೇ ಈಗಲೂ ಮುಂದುವರಿದಿದೆ. ವರ್ಷಗಳು ಉರುಳಿದರೂ ನಮ್ಮ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ ಎಂದು ಕುಂದುವಾಡ ಗ್ರಾಮದ ನಿವಾಸಿ ಅಣ್ಣಪ್ಪ ಬೇಸರ ವ್ಯಕ್ತಪಡಿಸುತ್ತಾರೆ.

> ಅಧಿಕಾರಿಗಳು, ರಾಜಕಾರಣಿಗಳಿಗೆ ಅರ್ಜಿ ಕೊಟ್ಟು ಸುಸ್ತಾಗಿದ್ದೇವೆ. ಬಂದು ಪರಿಶೀಲಿಸಿ ಹೋಗುತ್ತಾರೆಯೇ ವಿನಾ ರಸ್ತೆ ದುರಸ್ತಿ ಮಾಡಿಲ್ಲ
> -ಮಾರುತಿ, ಹೊಸ ಕುಂದುವಾಡ ನಿವಾಸಿ


ಉದಯವಾಹಿನಿ ಚಿತ್ರ

### ಮಳೆಗಾಲದೊಳಗೆ ಆಗಬೇಕಿದೆ ದುರಸ್ತಿ

ಕಳೆದ ವರ್ಷ ಹಾಕಿದ್ದ ಜಲ್ಲಿ ಕಿತ್ತುಬಂದಿದ್ದು, ರಸ್ತೆಯ ತುಂಬೆಲ್ಲಾ ಹರಡಿವೆ. ಅಡಿಗೊಂದರಂತೆ ಎದುರಾಗುವ ಗುಂಡಿಗಳಲ್ಲಿ ವಾಹನಗಳನ್ನು ಮುನ್ನಡೆಸುವುದು ದುಸ್ತರವಾಗಿದೆ. ಇನ್ನೇನು ಮಳೆಗಾಲ ಆರಂಭವಾಗಲಿದ್ದು, ಆಗ ಉಳಿದ ಜಲ್ಲಿ ಕಲ್ಲುಗಳು ಕಿತ್ತು ಬರಲಿವೆ. ಆಗ ಗುಂಡಿ ಮಧ್ಯೆ ರಸ್ತೆಯನ್ನು ಹುಡುಕಿಕೊಂಡು ಓಡಾಡಬೇಕಾಗುತ್ತದೆ. ಮಳೆಗಾಲದ ಒಳಗೆ ದುರಸ್ತಿ ಮಾಡಬೇಕು ಎಂದು ಸ್ಥಳೀಯರು ಮಹಾನಗರ ಪಾಲಿಕೆಯನ್ನು ಒತ್ತಾಯಿಸಿದ್ದಾರೆ.

### ಹಳೆ ರಸ್ತೆಗೆ ಕಾಂಕ್ರೀಟ್; ಪ್ರತ್ಯೇಕ ಸಮಾನಾಂತರ ರಸ್ತೆ

ಹೊಸ ಮತ್ತು ಹಳೆ ಕುಂದುವಾಡ ಗ್ರಾಮಗಳನ್ನು ಸಂಪರ್ಕಿಸುವ ರಸ್ತೆಯನ್ನು ಕಾಂಕ್ರೀಟ್ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವ ಚಿಂತನೆ ಇದೆ ಎಂದು ಮಹಾನಗರ ಪಾಲಿಕೆಯ ಕಾರ್ಯಪಾಲಕ ಇಂಜಿನಿಯರ್ ಅಭಿಷೇಕ್ ತಿಳಿಸಿದರು. ರಸ್ತೆಯು ಕುಂದುವಾಡ ಕೆರೆಗೆ ಹೊಂದಿಕೊಂಡಿರುವ ಕಾರಣ, ಅದನ್ನು ಕಾಂಕ್ರೀಟ್ ರಸ್ತೆಯಾಗಿ ಪರಿವರ್ತಿಸುವ ಸಾಧಕ-ಬಾಧಕಗಳ ಕುರಿತು ತಜ್ಞರ ವರದಿ ಪಡೆದು ಕಾಮಗಾರಿ ಕೈಗೊಳ್ಳಲಾಗುವುದು. ಈ ತಿಂಗಳಾಂತ್ಯದಲ್ಲಿ ರಸ್ತೆ ನಿರ್ಮಾಣದ ಬಗ್ಗೆ ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ ಎಂದು ವಿವರಿಸಿದರು.

### ಸವಾರರಿಗೆ ದೂಳಿನ ಮಜ್ಜನ

ಎರಡೂ ಗ್ರಾಮಗಳ ನೂರಾರು ಜನರು ದಾವಣಗೆರೆ ನಗರಕ್ಕೆ ದಿನವೂ ಕೆಲಸಕ್ಕೆ ಹೋಗಿಬರಲು ಈ ರಸ್ತೆಯೇ ಆಸರೆಯಾಗಿದೆ. ಬೃಹತ್ ಲಾರಿಗಳ ಓಡಾಟ ಸಾಮಾನ್ಯ. ಆದರೆ ಸೈಕಲ್ ಸವಾರರೂ ಇಲ್ಲಿ ಓಡಾಡಲು ಯೋಚಿಸುವಷ್ಟು ರಸ್ತೆ ಹದಗೆಟ್ಟಿದೆ ಎನ್ನುತ್ತಾರೆ ಈ ಮಾರ್ಗದಲ್ಲಿ ನಿತ್ಯ ಸಂಚರಿಸುವ ಸೈಕರ್ ಸವಾರರೊಬ್ಬರು.

ಐದು ವರ್ಷಗಳಿಂದ ಈ ರಸ್ತೆಯಲ್ಲಿ ಓಡಾಡಿ ಸಾಕಾಗಿದೆ. ಗುಂಡಿಯಲ್ಲಿ ಓಲಾಡುತ್ತಾ ಸಾಗುವಾಗ ಆಟೊದಲ್ಲಿನ ಸಾಮಗ್ರಿಗಳು ಬಿದ್ದು ಹೋಗುತ್ತವೆ. ಒಂದೂವರೆ ಕಿಲೋಮೀಟರ್ ಉದ್ದದ ರಸ್ತೆಯನ್ನು ಸರಿಪಡಿಸಬೇಕು ಎಂಬ ಆಲೋಚನೆ ಅಧಿಕಾರಿ ವರ್ಗಕ್ಕೆ ಬಾರದಿರುವುದು ವಿಪರ್ಯಾಸ ಎಂದು ಆಟೋ ಚಾಲಕ ದಸ್ತಗೀರ್ ಸಾಬ್ ಅಚ್ಚರಿ ವ್ಯಕ್ತಪಡಿಸುತ್ತಾರೆ.

ಈ ರಸ್ತೆ ಹದಗೆಟ್ಟಿದ್ದರಿಂದ ನಮ್ಮೂರಿನಿಂದ 7 ಕಿ.ಮೀ. ಅಂತರದ ದಾವಣಗೆರೆ ತಲುಪಲು ಅರ್ಧ ಗಂಟೆಗೂ ಅಧಿಕ ಸಮಯ ಬೇಕಾಗುತ್ತದೆ. ವೇಗವಾಗಿ ಹೋಗುವ ಅನೇಕ ಬೈಕ್ ಸವಾರರು ಕೆಳಗೆ ಬಿದ್ದು ಮಂಡಿ ಕೆತ್ತಿಕೊಂಡಿದ್ದಿದೆ. ನಮ್ಮದು ಸ್ಮಾರ್ಟ್ ಸಿಟಿಗೆ ಅಂಟಿಕೊಂಡೇ ಇರುವ ಊರು. ಪಾಲಿಕೆ, ಧೂಡಾ ವ್ಯಾಪ್ತಿಯನ್ನೂ ಒಳಗೊಂಡಿದೆ. ಆದರೂ ಸೂಕ್ತ ರಸ್ತೆ ಇಲ್ಲದ್ದರಿಂದ ನಿತ್ಯ ನರಕ ಅನುಭವಿಸುವಂತಾಗಿದೆ ಎಂದು ಗ್ರಾಮಸ್ಥರು ಹೇಳುತ್ತಾರೆ.

# ವಿದ್ಯುತ್ ಪರಿವರ್ತಕ ಸುಟ್ಟಿದರೆ 24ಗಂಟೆಯಲ್ಲಿ ಉಚಿತ ದುರಸ್ತಿ: ಕುಂದುಕೊರತೆಗೆ 1912ಗೆ ಕರೆ ಮಾಡಿ: ಜೇಸ್ಕಾಂ ಅಧಿಕ್ಷಕ ಖಂಡಪ್ಪಾ

• ಉದಯವಾಹಿನಿ, ಚಿಂಚೋಳಿ

ಯಾವುದೇ ಗ್ರಾಮ, ನಗರದ ಪ್ರದೇಶಗಳಲ್ಲಿ ವಿದ್ಯುತ್ ಪರಿವರ್ತಕ ಸುಟ್ಟಿದರೆ ಅಥವಾ ಕೆಟ್ಟಿದರೆ 24ಗಂಟೆಯಲ್ಲಿ ಉಚಿತವಾಗಿ ದುರಸ್ತಿ ಮಾಡಿ ಜನರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು ಮತ್ತು ಹೆಚ್ಚಿನ ಕುಂದುಕೊರತೆಗಳಿದ್ದರೆ ಸಾರ್ವಜನಿಕರು ಗ್ರಾಹಕರು 1912ಗೆ ಕರೆ ಮಾಡಿ ತಮ್ಮ ಸಮಸ್ಯೆ ಕುರಿತು ದೂರು ನೀಡಬಹುದು ಎಂದು ಕಲಬುರ್ಗಿ ಜೇಸ್ಕಾಂ ಅಧಿಕ್ಷಕ ಅಭಿಯಂತರರು ಖಂಡಪ್ಪಾ ತಿಳಿಸಿದ್ದಾರೆ. ನಗರದ ಚಂದಾಪೂರದ ಜೇಸ್ಕಾಂ ಕಛೇರಿ ಸಭಾಂಗಣದಲ್ಲಿ ವಿದ್ಯುತ್ ಸಂಪರ್ಕ ಕುರಿತು ಸಾರ್ವಜನಿಕರ ಗ್ರಾಹಕರ ಕುಂದುಕೊರತೆ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಭೆಯಲ್ಲಿ ಒಟ್ಟಾರೆ 26ಕುಂದುಕೊರತೆ ಸಮಸ್ಯೆ ಕುರಿತು ಮೌಖಿಕವಾಗಿ ಅಧಿಕಾರಿಗಳ ಗಮನಕ್ಕೆ ತಂದರು,03 ಲಿಖಿತ ರೂಪದಲ್ಲಿ ಸಮಸ್ಯೆಯ ದೂರು ನೀಡಿದ್ದಾರೆ,ಕಳೆದ ಬಾರಿಯ ಸಭೆಯಲ್ಲಿ 03ಲಿಖಿತ ದೂರು ಬಂದಿದವು 03 ಲಿಖಿತ ದೂರಿನ ಸಮಸ್ಯೆ ಇತ್ಯರ್ಥ ಮಾಡಲಾಗಿದೆ..

ಮಿರಿಯಾಣ ವ್ಯಾಪ್ತಿಯ ಕಲ್ಲುಗಣಿಗಾರಿಕೆಯಲ್ಲಿ ಆಂದ್ರ,ತೆಲಂಗಾಣ ರಾಜ್ಯಗಳ ವಿದ್ಯುತ್ ಪರಿವರ್ತಕಗಳು ಅಳವಡಿಸಿ ವಿದ್ಯುತ್ ಕಳ್ಳತನ ನಡೆಸಿ ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟು ಮಾಡುತ್ತಿದ್ದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು,ಈಗಾಗಲೇ ಜೇಸ್ಕಾಂ ಅಧಿಕಾರಿಗಳು ಮತ್ತು ಜೇಸ್ಕಾಂ ಜಾಗೃತದಳದಿಂದ ದಾಳಿ ನಡೆಸಿ ಅನಾಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆದವರ 20ಜನ ವಿರುದ್ಧ ಪ್ರಕರಣ ದಾಖಲಿಸಿ,26ಕ್ಕಿಂತ ಹೆಚ್ಚು ವಿದ್ಯುತ್ ಪರಿವರ್ತಕಗಳು ಜಪ್ತಿ ಮಾಡಿ 30ಲಕ್ಷಕ್ಕೂ ಹೆಚ್ಚು ದಂಡ ವಿಧಿಸಲಾಗಿದೆ, ಚಿಂಚೋಳಿ-ಕಾಳಗಿ ತಾಲ್ಲೂಕಿನ ಕೆಲವಡೆ ಸುದ್ಧ ಸವಳು ಮಣ್ಣು ತೆಗೆಯುವರ ವಿರುದ್ಧ ಆಕ್ರಮ ವಿದ್ಯುತ್ ಸಂಪರ್ಕ ಪಡೆದುಕೊಳ್ಳುತ್ತಿದ್ದಾರೆಂದು ದೂರು ಬರುತ್ತಿವೆ ಎಲ್ಲಾ ಕಡೆ ಒಮ್ಮೆ ದಾಳಿ ನಡೆಸಿ ಸೂಕ್ತ ಕ್ರಮಕೈಗೊಳ್ಳ ಲಾಗುವುದು, ಚಿಂಚೋಳಿ ಉಪವಿಭಾಗದಲ್ಲಿ ವಿದ್ಯುತ್ ಪರಿವರ್ತಕಗಳು ಸಾಗಾಣಿಕೆ ಮಾಡಲು ಲಾರಿ ವಾಹನ ಇಲ್ಲದಿರುವುದು ಕ್ರೀಯಾಯೋಜನೆ ಸಿದ್ಧಪಡಿಸಿ ಪ್ರಸ್ತಾವನೆ ಮೇಲಾಧಿಕಾರಿಗಳಿಗೆ ಕಳುಹಿಸಿದ್ದು ಶೀಘ್ರದಲ್ಲೇ ಲಾರಿ ವಾಹನ ಬರಲಿದೆ,ಉಪವಿಭಾಗದಲ್ಲಿ ಒಟ್ಟಾರೆ 85ಜನರ ಹುದ್ದೆಗಳು ಖಾಲಿಯಿವೆ, ಚಿಂಚೋಳಿಯಲ್ಲಿ 34ಜನರ ಹುದ್ದೆ ಖಾಲಿಯಿವೆ ಎಂದರು.

ಪಂಚ ಗ್ಯಾರಂಟಿ ಯೋಜನೆ ಜಿಲ್ಲಾ ಉಪಾಧ್ಯಕ್ಷ ನರಸಿಂಹಮ್ಲು ಕುಂಬಾರ,ತಾಲ್ಲೂಕಾಧ್ಯ ಬಸವರಾಜ ಮಾಲಿ, ಕೆಎಂ ಬಾರಿ,ಮಲ್ಲಿಕಾರ್ಜುನ ಬುಶೆಟ್ಟಿ, ಡಾ.ಅಂಜನೇಯ, ಮಹ್ಮದ್ ಯಾಸೀನ್, ಸೂರ್ಯಕಾಂತ, ಬಲವಂತ,ಎ ಇಟಿ ಲಾವಣ್ಯ,ಕಲ್ಪನಾ,ಸೋಮಶೇಖರ,ವಿನೋಧ, ಅಶೋಕ ಪೂಜಾರಿ ಅನೇಕರಿದ್ದರು.


ಉದಯವಾಹಿನಿ ಚಿತ್ರ

> ಜೇಸ್ಕಾಂ ಇಲಾಖೆಯಲ್ಲಿ ಕಾರ್ಯನಿವಹಿಸುತ್ತಿರುವ ಲೈನ್ ಮ್ಯೆನ್‌ಗಳು ಸಿಬ್ಬಂದಿ ವರ್ಗದವರಿಗೆ ವಸತಿಗೃಹಗಳ ಸ್ಥಿತಿ ಚಿಂತಜನಕವಾಗಿದೆ, ವಸತಿಗೃಹಗಳು ಕೆಪಿಟಿಸಿಎಲ್ ಇಲಾಖೆಗೆ ಒಳಪಡುತ್ತವೆ,ಜೇಸ್ಕಾಂ ಇಲಾಖೆ ವತಿಯಿಂದ ವಸತಿ ಗೃಹಗಳು ನೆಲಸಮಗೊಳಿಸಿ ನೂತನವಾಗಿ ನಿರ್ಮಿಸಿಕೊಡಲು ಪತ್ರ ಬರೆಯಲಾಗುವುದು.
> -ಪರಮೇಶ್ವರ ಬೀರಾದಾರ ಸೇಡಂ ವಿದ್ಯುತ್ ಉಪವಿಭಾಗದ ಇಇ

# ಬಿಸಿಲಿನ ಧಗೆಗೆ ಜಾನುವಾರು ತತ್ತರ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕುಕನೂರು

ಬಿಸಿಲಿನ ದಗೆಯಿಂದ ಜಾನುವಾರು, ಪ್ರಾಣಿಪಕ್ಷಿಗಳಿಗೆ ಮೇವು ಹಾಗೂ ನೀರಿನ ಕೊರತೆ ಎದುರಾಗಿದೆ. ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಬಿಸಿಲಿನ ಝಳ ಮುಂದುವರಿದಿದೆ.

ಮಳೆ ಅಭಾವದಿಂದ ಹಸಿರು ಮಾಯವಾಗಿದೆ. ಗಿಡ ಮರ, ಹುಲ್ಲು ಒಣಗಿ ಬಣಗುಡುತ್ತಿದೆ. ಈ ಒಣಗಿದ ಪ್ರದೇಶದಲ್ಲಿ ನೀರು, ಆಹಾರ ನೆರಳಿನ ಆಶ್ರಯಕ್ಕಾಗಿ ಜಾನುವಾರು ಪರದಾಡುವಂತಾಗಿದೆ. ಉದ್ಯೋಗ ಖಾತ್ರಿ ಯೋಜನೆ ಸ್ಥಗಿತವಾಗಿರುವುದರಿಂದ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಅಗತ್ಯ ಇರುವ ಕಡೆ ಜಾನುವಾರು ಕುಡಿಯುವ ನೀರಿಗಾಗಿ ನಿರ್ಮಿಸಿರುವ ತೊಟ್ಟಿಗಳ ನಿರ್ವಹಣೆ ಮಾಡುವವರು ಇಲ್ಲವಾಗಿದ್ದಾರೆ. ತಾಲ್ಲೂಕಿನ ಬಹುತೇಕ ಕೆರೆ, ಕುಂಟೆ ಬರಿದಾಗಿವೆ.

ಕುಡಿಯುವ ನೀರು ಮತ್ತು ಮೇವಿಗೆ ತೀವ್ರ ಬರ ಆವರಿಸಿದೆ. ಸುಳ್ಳು ಹೇಳುತ್ತಾ ಕಾಲಹರಣ ಮಾಡದೆ ಅಧಿಕಾರಿಗಳು ಕೂಡಲೇ ಮೇವು ಕೇಂದ್ರ ಸ್ಥಾಪನೆಗೆ ಒತ್ತು ನೀಡಬೇಕು. ಇಲ್ಲದಿದ್ದರೆ ಜಾನುವಾರು ಸಾಕಣೆ ಮಾಡಲಾಗದೆ ಕಸಾಯಿಖಾನೆಗೆ ಮಾರಾಟ ಮಾಡುವ ಪರಿಸ್ಥಿತಿ ಬರಲಿದೆ ಎಂದು ರೈತ ಮುಖಂಡ ಅಂದಪ್ಪ ಆಕ್ರೋಶ ವ್ಯಕ್ತಪಡಿಸುತ್ತಾರೆ.

ಜಾನುವಾರು ಸಾಕಣೆದಾರರು ಮಧ್ಯಾಹ್ನ ಜಲಮೂಲಗಳನ್ನು ಅರಸಿ ಹೋಗುತ್ತಿದ್ದಾರೆ. ಬಿಸಿಲಿಗೆ ಬಸವಳಿಯದಂತೆ ಸಾಕುಪ್ರಾಣಿಗಳ ಮೈತೊಳೆಯುವ ಕಾಯಕದಲ್ಲಿ ತೊಡಗಿದ್ದಾರೆ. ಬಿಸಿಲಿನ ತಾಪಕ್ಕೆ ಪ್ರಾಣಿಗಳು ಬಯಲಿನಲ್ಲಿ ಆಹಾರ ಮೆಲ್ಲುವುದನ್ನು ನಿಲ್ಲಿಸಿ ನೆರಳಿನ ಜಾಗ ಅರಸಿ ಹೋಗುತ್ತಿವೆ. ಹಸು, ಎತ್ತು, ಎಮ್ಮೆಗಳು ಕೆರೆ, ಕಟ್ಟೆಗಳ ಬಳಿ ಸುಳಿದಾಡುತ್ತಿವೆ. ಆಡು, ಕುರಿ ಸಾಕಣೆದಾರರು ನೆರಳು ಇರುವ ಸ್ಥಳಗಳನ್ನು ಹುಡುಕುತ್ತಾ ಮೇವಿಗಾಗಿ ಅಲೆಯಬೇಕಿದೆ ಎನ್ನುತ್ತಾರೆ ರೈತ ಹನುಮಂತಪ್ಪ.

# ಮೊಬೈಲ್ ಚಟದ ನೆಪವೊಡ್ಡಿ ಮಗಳ ಬಾಲ್ಯವಿವಾಹಕ್ಕೆ ಮುಂದಾದ ಪೋಷಕರು

• ಉದಯವಾಹಿನಿ, ಕೊಪ್ಪಳ

ಮೊಬೈಲ್ ಫೋನ್ ಬಳಕೆಯಿಂದ ಮಕ್ಕಳು ಹಾಳಾಗುತ್ತಾರೆ ಎನ್ನುವ ಕಾರಣ ಮುಂದಿಟ್ಟು ಪೋಷಕರೇ ಮುಂದೆ ನಿಂತು ಮಗಳನ್ನು ಬಾಲ್ಯವಿವಾಹದ ಕೂಪಕ್ಕೆ ತಳ್ಳಲು ಮುಂದಾಗಿದ್ದ ಘಟನೆ ಜಿಲ್ಲೆಯಲ್ಲಿ ನಡೆದಿದ್ದು, ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ಮದುವೆ ತಡೆದು ಬಾಲಕಿಯನ್ನು ರಕ್ಷಿಸಿದ್ದಾರೆ.

ಯಲಬುರ್ಗಾ ತಾಲ್ಲೂಕಿನ ಬೇವೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬಾಲಕಿಯೊಬ್ಬಳ ಮದುವೆ ನಿಶ್ಚಯವಾಗಿ ಬಸವ ಜಯಂತಿ ಅಂಗವಾಗಿ ಏ. 20ರಂದು ಮದುವೆ ನಿಗದಿ ಮಾಡಲಾಗಿತ್ತು. ನಾಲ್ಕನೇ ತರಗತಿ ಓದುತ್ತಿದ್ದ ಬಾಲಕಿಯ ವಿವಾಹದ ಬಗ್ಗೆ ಮಾಹಿತಿ ಪಡೆದ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಈ ವೇಳೆ ಪೋಷಕರು ಫೋನ್ ಬಳಕೆಯಿಂದ ಮಕ್ಕಳು ಹಾಳಾಗುತ್ತಾರೆ. ಈ ಕಾರಣಕ್ಕೆ ಬೇಗನೆ ಮದುವೆ ನಿಶ್ಚಯ ಮಾಡಿದ್ದೇವೆ ಎಂದಿದ್ದಾರೆ.

ಮತ್ತೊಂದು ಘಟನೆಯಲ್ಲಿ ವರನ ಕುಟುಂಬದವರು ಆರ್ಥಿಕವಾಗಿ ಸಬಲವಾಗಿದ್ದಾರೆ ಎನ್ನುವ ಕಾರಣಕ್ಕೆ ಕನಕಗಿರಿ ತಾಲ್ಲೂಕಿನ ಗ್ರಾಮವೊಂದರಲ್ಲಿ ಎಂಟನೇ ತರಗತಿ ಓದುತ್ತಿದ್ದ ಬಾಲಕಿಗೆ ಮದುವೆ ಮಾಡಲು ಪೋಷಕರು ಮುಂದಾಗಿದ್ದರು. ಮಕ್ಕಳ ಸಹಾಯವಾಣಿ 1098ಗೆ ಬಂದ ಕರೆ ಆಧರಿಸಿ ಸ್ಥಳಕ್ಕೆ ಭೇಟಿ ನೀಡಿದ ಅಧಿಕಾರಿಗಳು ದಾಖಲೆಗಳನ್ನು ಪರಿಶೀಲಿಸಿದಾಗ ಬಾಲಕಿಗೆ 16 ವರ್ಷವಷ್ಟೇ ಆಗಿರುವುದು ದೃಢಪಟ್ಟಿದೆ. ಕಾರ್ಯಾಚರಣೆ ನಡೆಸಿ ಎರಡೂ ಬಾಲ್ಯವಿವಾಹಗಳನ್ನು ತಡೆಗಟ್ಟಲಾಗಿದೆ.

ವಯಸ್ಸಿನ ಪೂರ್ವ ಮದುವೆ ಅಪಾಯಕಾರಿಯಾಗಿದ್ದು, ಮಗುವಿನ ಬದುಕನ್ನೇ ಹಾಳು ಮಾಡಿಬಿಡುತ್ತದೆ. ಸಹಾಯವಾಣಿಗೆ ಬಂದ ಫೋನ್ ಕರೆಯಿಂದಾಗಿ ಇಬ್ಬರು ಮಕ್ಕಳು ಬಾಲ್ಯವಿವಾಹ ತಪ್ಪಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸಿಂಧು ಅಂಗಡಿ ತಿಳಿಸಿದ್ದಾರೆ.

# ಕುಷ್ಟಗಿ ಪುರಸಭೆ: ಎರವಲು ಸೇವೆ ರದ್ದತಿಗೆ ರಾಜಕಾರಣಿಗಳ ಒತ್ತಡ

## ತಾತ್ಕಾಲಿಕ ಎತ್ತಂಗಡಿಯಾಗಿರುವ ನೌಕರನನ್ನು ಮತ್ತೆ ಇಲ್ಲಿಯ ಪುರಸಭೆಯ ಮೂಲ ಹುದ್ದೆಗೆ ಮರಳಿ ತರುವ ನಿಟ್ಟಿನಲ್ಲಿ ರಾಜಕೀಯ

• ಉದಯವಾಹಿನಿ, ಕುಷ್ಟಗಿ

ಸಾರ್ವಜನಿಕರ ದೂರುಗಳ ಹಿನ್ನೆಲೆಯಲ್ಲಿ ಇಲ್ಲಿಯ ಪುರಸಭೆಯಿಂದ ತಾತ್ಕಾಲಿಕ ಎತ್ತಂಗಡಿಯಾಗಿರುವ ನೌಕರನನ್ನು ಮತ್ತೆ ಇಲ್ಲಿಯ ಪುರಸಭೆಯ ಮೂಲ ಹುದ್ದೆಗೆ ಮರಳಿ ತರುವ ನಿಟ್ಟಿನಲ್ಲಿ ರಾಜಕೀಯ ವ್ಯಕ್ತಿಗಳು ಹೆಚ್ಚು ಮುತುವರ್ಜಿ ವಹಿಸಿರುವುದು ತಿಳಿದುಬಂದಿದೆ.

ಪಟ್ಟಣದಲ್ಲಿ ಕಂದಾಯ ಶಾಖೆ ನಿರ್ವಹಿಸುತ್ತಿದ್ದ ಚಿರಂಜೀವಿ ದೊಡ್ಡಮನಿ ಎಂಬುವವರನ್ನು ಕಳೆದ ವರ್ಷ ಕಾರಟಗಿ ಪುರಸಭೆಯ ಖಾಲಿ ಹುದ್ದೆಗೆ ತಾತ್ಕಾಲಿಕವಾಗಿ ಎರವಲು ಸೇವೆಯ ಮೇಲೆ ಕಳಿಸಲಾಗಿದೆ. ನಿಯಮಗಳ ಪ್ರಕಾರ ಪಟ್ಟಣದಲ್ಲಿ ಅಭಿವೃದ್ಧಿಗೊಳ್ಳದ ಹೊಸ ಬಡಾವಣೆಗಳಲ್ಲಿನ ನಿವೇಶನಗಳನ್ನು ನಿಯಮಬಾಹಿರವಾಗಿ ಬಡಾವಣೆ ಮಾಲೀಕರಿಗೆ ಮಾರಾಟ ಮಾಡುವುದಕ್ಕೆ ನಮೂನೆ-3 ದಾಖಲೆ ನೀಡಿ ಬಿಡುಗಡೆ ಮಾಡಿರುವುದಕ್ಕೆ ಸಂಬಂಧಿಸಿದಂತೆ ಇಲ್ಲಿಯ ಪುರಸಭೆಯ ಅತಿ ಹೆಚ್ಚು ಪ್ರಕರಣಗಳ ಮೇಲೆ ಮೂಲಕ ಬೆಳಕು ಚೆಲ್ಲಿತ್ತು. ಈ ವಿಷಯಕ್ಕೆ ಸಂಬಂಧಿಸಿದಂತೆ ಈ ಹಿಂದೆ ಇಲ್ಲಿ ಸೇವೆ ಸಲ್ಲಿಸುತ್ತಿದ್ದ ಅಧಿಕಾರಿಗಳು ಮತ್ತು ಸಿಬ್ಬಂದಿ ಅಕ್ರಮದಲ್ಲಿ ಭಾಗಿಯಾಗಿರುವ ಕಾರಣಕ್ಕೆ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಿದ ಉದಾಹರಣೆಗಳೂ ಇಲ್ಲಿವೆ. ಅದೇ ರೀತಿ ಇನ್ನೂ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಯನ್ನೇ ಕಾಣದ ಅನೇಕ ಬಡಾವಣೆಗಳು ಇಲ್ಲಿಯ ಪುರಸಭೆ ವ್ಯಾಪ್ತಿಯಲ್ಲಿವೆ. ಅಂಥ ಬಡಾವಣೆಗಳಲ್ಲಿನ ನಿವೇಶನಗಳಿಗೆ ನಮೂನೆ-3 (ಉತಾರ) ದಾಖಲೆ ಕೊಡುವುದಕ್ಕೆ ಪುರಸಭೆ ಕೊಕ್ಕೆ ಹಾಕಿದೆ. ಏನಾದರೂ ಕರಾಮತ್ತು ನಡೆಸಿ ದಾಖಲೆಗಳನ್ನು ಪಡೆಯುವ ನಿಟ್ಟಿನಲ್ಲಿ ಪಟ್ಟಣದ ಕೆಲ ವ್ಯಕ್ತಿಗಳು ಕಾಯುತ್ತಿದ್ದರೂ ಪುರಸಭೆ ಅಧಿಕಾರಿಗಳು ಅದಕ್ಕೆ ಸೊಪ್ಪು ಹಾಕಿಲ್ಲ ಎಂದು ಮೂಲಗಳು ತಿಳಿಸಿವೆ.

ಹೊಸ ಬಡಾವಣೆಗಳಲ್ಲಿ ಸಾರ್ವಜನಿಕ ಬಳಕೆ ಮತ್ತು ಉದ್ಯಾನಕ್ಕೆ ಮೀಸಲಿರಿಸಿದ ಜಾಗಗಳನ್ನು ಮಾರ್ಪಾಡು ಮಾಡಿ ನಿವೇಶನಗಳನ್ನಾಗಿಸಿರುವುದು ಸೇರಿದಂತೆ ಇತರೆ ವಿಷಯಗಳ ಬಗ್ಗೆ ಜಿಲ್ಲಾಡಳಿತಕ್ಕೆ ಸಾರ್ವಜನಿಕರಿಂದ ದೂರುಗಳು ಸಲ್ಲಿಕೆಯಾಗಿವೆ. ಈ ಕಾರಣಕ್ಕೆ ಚಿರಂಜೀವಿ ದೊಡ್ಡಮನಿ ಅವರ ಪ್ರಭಾರ ಆದೇಶವನ್ನು ತೆರವುಗೊಳಿಸಲು ಜಿಲ್ಲಾಡಳಿತ ಹಿಂದೇಟು ಹಾಕಿದೆ ಎಂಬುದು ಗೊತ್ತಾಗಿದೆ.

> ಪಟ್ಟಣದಲ್ಲಿನ ಅನೇಕ ಬಡಾವಣೆಗಳು ಅಭಿವೃದ್ಧಿಗೊಳ್ಳದಿದ್ದರೂ ಉತಾರ ಪಡೆಯುವುದಕ್ಕೆ ಬಡಾವಣೆ ಮಾಲೀಕರು ವಾಮಮಾರ್ಗ ಅನುಸರಿಸುತ್ತಿದ್ದಾರೆ. ಜಿಲ್ಲಾಡಳಿತ ಬಿಗಿ ಕ್ರಮಕ್ಕೆ ಮುಂದಾಗಬೇಕಿದೆ. -ಪ್ರಕಾಶ ಪಾಟೀಲ, ನಿವಾಸಿ.



ಉದಯವಾಹಿನಿ ಚಿತ್ರ

**ಜಿಲ್ಲಾಡಳಿತ ಬಿಗಿ ಕ್ರಮಕ್ಕೆ ಮುಂದಾಗ ಬೇಕು**

ಇಷ್ಟಾದರೂ ಛಲ ಬಿಡದ ಕೆಲ ರಾಜಕೀಯ ವ್ಯಕ್ತಿಗಳು, ರಿಯಲ್ ಎಸ್ಟೇಟ್ ಉದ್ಯಮಿಗಳು ಚಿರಂಜೀವಿ ಅವರನ್ನು ಇಲ್ಲಿಗೆ ಮತ್ತೆ ಕರೆತರುವ ನಿಟ್ಟಿನಲ್ಲಿ ಪ್ರಯತ್ನ ಮುಂದುವರೆಸಿದ್ದಾರೆ. ಅಷ್ಟೇ ಅಲ್ಲದೆ ಪ್ರಮುಖ ರಾಜಕೀಯ ವ್ಯಕ್ತಿಗಳ ಮೂಲಕ ಜಿಲ್ಲಾಡಳಿತದ ಮೇಲೆ ಒತ್ತಡ ತರುತ್ತಿರುವುದು, ಜಿಲ್ಲಾಧಿಕಾರಿ ಕಚೇರಿಗೆ ಎಡತಾಕುತ್ತಿರುವುದು ತಿಳಿದಿದೆ. ಅದೇ ರೀತಿ ಸ್ವತಃ ಇಲ್ಲಿಯ ಮಾಜಿ ಶಾಸಕ ಅಮರೇಗೌಡ ಬಯ್ಯಾಪುರ ಅವರು ಚಿರಂಜೀವಿ ದೊಡ್ಡಮನಿ ಅವರನ್ನು ಪುನಃ ಕುಷ್ಟಗಿ ಪುರಸಭೆಗೆ ಕಳಿಸುವಂತೆ ಜಿಲ್ಲಾಧಿಕಾರಿಗೆ ಪತ್ರ ಬರೆದಿರುವುದು ಗೊತ್ತಾಗಿದೆ.

ಈ ಕುರಿತು ಪ್ರತಿಕ್ರಿಯಿಸಿದ ಜಿಲ್ಲಾ ಅಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಂಜುನಾಥ ಗುಂಡೂರು, ಚಿರಂಜೀವಿ ದೊಡ್ಡಮನಿ ಅವರಿಗೆ ಸಂಬಂಧಿಸಿದ ಎರಡು ಪ್ರಕರಣಗಳು ತನಿಖೆ ಹಂತದಲ್ಲಿವೆ. ಸಾರ್ವಜನಿಕರಿಂದ ದೂರುಗಳು ಬಂದಿದ್ದವು. ಮೂಲ ಹುದ್ದೆ ಕುಷ್ಟಗಿ ಪುರಸಭೆಯಾದರೂ ದೂರುಗಳ ಹಿನ್ನೆಲೆಯಲ್ಲಿ ಸದ್ಯ ಕಾರಟಗಿ ಪುರಸಭೆಗೆ ಎರವಲು ಸೇವೆಯ ಮೇಲೆ ಕಳಿಸಲಾಗಿದೆ. ಜಿಲ್ಲಾಡಳಿತ ಮಟ್ಟದಲ್ಲಿ ಹೊರಡಿಸಿದ ಪ್ರಭಾರ ಆದೇಶ ತಾತ್ಕಾಲಿಕವಾಗಿದ್ದು ಒಂದು ಹಂತದವರೆಗೂ ಚಾಲ್ತಿಯಲ್ಲಿರುತ್ತದೆ. ಅದು ಯಾವುದೇ ಸಂದರ್ಭದಲ್ಲೂ ಆದೇಶ ಮಾರ್ಪಾಡಾಗಬಹುದು ಎಂದು ಸ್ಪಷ್ಟಪಡಿಸಿದರು.

> ಪುರಸಭೆಯಲ್ಲಿ ಕೆಲಸದ ಒತ್ತಡವಿರುವ ಕಾರಣ ಚಿರಂಜೀವಿ ಅವರ ಎರವಲು ಸೇವೆ ಹಿಂಪಡೆಯುವಂತೆ ನಮ್ಮ ಪಕ್ಷದ ಬೆಂಬಲಿಗರ ಒತ್ತಡದಿಂದ ಪತ್ರ ಬರೆದದ್ದು ನಿಜ. ನಿಯಮಗಳ ಅನುಸಾರ ಸಾಧ್ಯವಾಗುವುದಾದರೆ ಮಾತ್ರ ಕ್ರಮ ಕೈಗೊಳ್ಳುವಂತೆ ಹೇಳಿದ್ದೇನೆ. -ಅಮರೇಗೌಡ ಬಯ್ಯಾಪುರ

# ಮಿನಿ ನ್ಯೂಸ್

## ಕುಡಿಯುವ ನೀರಿನ ಘಟಕ ಆರಂಭಿಸಿ

• ಉದಯವಾಹಿನಿ, ಯಲ್ಲಾಪುರ

ಪಟ್ಟಣದ ಶಾರದಾಗಲ್ಲಿ ಮತ್ತು ನೂತನ ನಗರದಲ್ಲಿ ಕುಡಿಯುವ ನೀರಿನ ಘಟಕವನ್ನು ತಕ್ಷಣ ಆರಂಭಿಸುವಂತೆ ಆಗ್ರಹಿಸಿ ಬಿಜೆಪಿ ಪಟ್ಟಣ ಪಂಚಾಯಿತಿ ಎದುರಿಗೆ ತಮಟೆ ಬಡಿದು ಪ್ರತಿಭಟನೆ ನಡೆಸಿತು. ಶಾರದಾಗಲ್ಲಿ ಮತ್ತು ನೂತನ ನಗರದಲ್ಲಿ ಕುಡಿಯುವ ನೀರಿನ ಘಟಕ ನಿರ್ಮಿಸಿ 4-5 ವರ್ಷ ಕಳೆಯಿತು. ಆದರೆ ಇದುವರೆಗೂ ನೀರಿನ ಸೌಲಭ್ಯ ಒದಗಿಸಲಾಗಿಲ್ಲ. ಇದರಿಂದ ಸ್ಥಳೀಯರಿಗೆ ನೀರಿನ ತೊಂದರೆ ಆಗುತ್ತದೆ. ಕಾರಣ ತಕ್ಷಣ ನೀರಿನ ಸೌಲಭ್ಯ ಕಲ್ಪಿಸಿ, ಕುಡಿಯುವ ನೀರಿನ ಘಟಕ ಜನರಿಗೆ ಉಪಯೋಗ ಆಗುವಂತೆ ಮಾಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಪ್ರತಿಭಟನಾಕಾರರ ಮನವಿಗೆ ಸ್ಪಂದಿಸಿದ ತಹಶೀಲ್ದಾರ ಚಂದ್ರಶೇಖರ ಹೊಸಮನಿ ನಾಳೆಯಿಂದಲೇ ಕುಡಿಯುವ ನೀರಿನ ಘಟಕ ಪ್ರಾರಂಭಿಸಲಾಗುವುದು ಎಂದು ಭರವಸೆ ನೀಡಿದರು. ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಕೇಶವ ಚೌಗಲೆ ಇದ್ದರು.

## ಮರೀಚಿಕೆಯಾದ ನದಿ ನೀರು

• ಉದಯವಾಹಿನಿ ಲಕ್ಷ್ಮೇಶ್ವರ

ಈಗ ತಾಲ್ಲೂಕು ಕೇಂದ್ರ ಸ್ಥಳವಾಗಿರುವ ಸುಮಾರು ಐವತ್ತು ಸಾವಿರ ಜನಸಂಖ್ಯೆ ಹೊಂದಿರುವ ಪಟ್ಟಣದಲ್ಲಿ ತುಂಗಭದ್ರಾ ನದಿ ನೀರು ಪೂರೈಕೆಯಾಗಿ 20 ವರ್ಷ ಕಳೆದಿದ್ದರು ಪಟ್ಟಣದ ತುಂಬೆಲ್ಲ ಈ ನೀರು ಸರಬರಾಜು ಆಗದೆ ಸುಮಾರು ಐದು ಬಡಾವಣೆಗಳ ಜನರು ತುಂಗಭದ್ರ ನದಿ ನೀರಿನಿಂದ ವಂಚಿತರಾಗಿದ್ದಾರೆ. ಪಟ್ಟಣದ ಲಕ್ಷ್ಮೀ ನಗರ ಈಶ್ವರ ನಗರ ಮೂಕ ಬಸವೇಶ್ವರನಗರ ಮಲ್ಲಾಡದ ಕಾಲೋನಿ ಮತ್ತು ಗದಗ ಕಾಲೋನಿಯ ಜನರಿಗೆ ತುಂಗಭದ್ರಾ ನದಿ ನೀರು ಮರೀಚಿಕೆಯಾಗಿದೆ.

ಯೋಜನೆ ಅನುಷ್ಠಾನಗೊಂಡು 20 ವರ್ಷ ಕಳೆದಿದ್ದರೂ ವಿಸ್ತಾರಗೊಂಡಿರುವ ಈ 5 ಬಡಾವಣೆಗಳಿಗೆ ಇನ್ನೂವರೆಗೂ ಮನೆಮನೆಗೆ ತುಂಗೆ ಹರಿದು ಬಂದಿಲ್ಲ ಪುರಸಭೆಯವರು ಪೂರೈಸುವ ಕೊಳವೆಭಾವಿಗಳ ಸವಳ ನೀರು ಮಾತ್ರ ಪೂರೈಕೆ ಆಗುತ್ತಿದ್ದು ಸಿಹಿನೀರು ಈ ಭಾಗದ ಜನರಿಗೆ ಕಹಿಯಾಗಿದೆ.

ಸುಮಾರು ಹತ್ತು ವರ್ಷಗಳ ಹಿಂದೆಯೇ ಈ ಯೋಜನೆಯನ್ನು ಈ ವ್ಯಾಪ್ತಿಗೆ ಅಳವಡಿಸಲು ಬೃಹತ್ ಜಲಾಗಾರವನ್ನು ನಿರ್ಮಿಸಿದ್ದರು ಸಹ ಅದು ಕಾನೂನಿನ ಸಂಘರ್ಷಕ್ಕೆ ಒಳಪಟ್ಟಿರುವುದರಿಂದ ಇದುವರೆಗಿನ ಪುರಸಭೆಯಲ್ಲಿ ಆಡಳಿತ ನಡೆಸಿರುವ ಯಾವುದೇ ಚುನಾಯಿತ ಮಂಡಳಿ, ಸಮಸ್ಯೆ ಬಗೆಹರಿಸಿ ಈ ಐದು ಬಡಾವಣೆಗಳಿಗೆ ತುಂಗಭದ್ರ ನದಿ ಕುಡಿಯುವ ನೀರನ್ನು ಒದಗಿಸಬೇಕು ಎಂಬ ನಿಟ್ಟಿನಲ್ಲಿ ಚಿಂತನೆ ಮಾಡಿಲ್ಲ.

## ಬೆಂಬಲ ಬೆಲೆಯಡಿ ಭತ್ತ ಖರೀದಿ

• ಉದಯವಾಹಿನಿ, ದಾವಣಗೆರೆ

ಹಿಂಗಾರು ಋತುವಿನಲ್ಲಿ ಬೆಳೆದ ಭತ್ತ ಖರೀದಿಗೆ ಬೆಂಬಲ ಬೆಲೆ ಯೋಜನೆಯಡಿ ಸರ್ಕಾರ ಅವಕಾಶ ಕಲ್ಪಿಸಿದ್ದು, ರೈತರು ತ್ವರಿತವಾಗಿ ಹೆಸರು ನೋಂದಣಿ ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಸೂಚಿಸಿದರು. ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಕಾರ್ಯಪಡೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜಗಳೂರು ತಾಲ್ಲೂಕು ಹೊರತುಪಡಿಸಿ ಜಿಲ್ಲೆಯಲ್ಲಿ 4 ಭತ್ತ ಖರೀದಿ ಕೇಂದ್ರಗಳನ್ನು ತೆರೆಯಲಾಗುತ್ತಿದೆ. ಭತ್ತ ಕಟಾವು ಮುಗಿಯುವವರೆಗೂ ಕಾಯದೇ ಹೆಸರು ನೋಂದಣಿ ಮಾಡಿಕೊಳ್ಳಿ ಎಂದರು.

ಕೃಷಿ ಮತ್ತು ಆಹಾರ ಇಲಾಖೆಯ ಅಧಿಕಾರಿಗಳು ಕೂಡಲೇ ಖರೀದಿ ಕೇಂದ್ರಗಳಲ್ಲಿ ಭತ್ತ ಖರೀದಿಗೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಭತ್ತ ಸರಬರಾಜು ಮಾಡಿದ ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಹಣ ಪಾವತಿ ಆಗಲಿದೆ. ಪ್ರತಿ ಕ್ವಿಂಟಲ್ ಸಾಮಾನ್ಯ ಭತ್ತಕ್ಕೆ ರೂ. 2,369 ಹಾಗೂ ಎ ಗ್ರೇಡ್ ಭತ್ತಕ್ಕೆ ರೂ. 2,389 ನಿಗದಿಪಡಿಸಲಾಗಿದೆ. ಮೇ ಅಂತ್ಯದವರೆಗೆ ಭತ್ತ ಖರೀದಿ ಪ್ರಕ್ರಿಯೆ ನಡೆಯಲಿದೆ ಎಂದು ತಿಳಿಸಿದರು. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಜಂಟಿ ನಿರ್ದೇಶಕ ಕೆ.ಪಿ. ಮಧುಸೂದನ್, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಜಂಟಿ ನಿರ್ದೇಶಕಿ ಎಚ್.ಸಿ.ಎಂ. ರಾಣಿ, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಜಿಯಾವುಲ್ಲಾ, ರಾಜ್ಯ ಆಹಾರ ನಿಗಮದ ಜಿಲ್ಲಾ ವ್ಯವಸ್ಥಾಪಕ ನಾಗರಾಜ್, ಕಾನೂನು ಮಾಪನಶಾಸ್ತ್ರ ಇಲಾಖೆಯ ಸಹಾಯಕ ನಿಯಂತ್ರಕ ಫರ್ವೇಜ್ ಹಾಜರಿದ್ದರು.

## ಪಾಲಕರ ಸೇವೆ; ಮಕ್ಕಳ ಆದ್ಯ ಕರ್ತವ್ಯ

• ಉದಯವಾಹಿನಿ ಹೆಬ್ರಿ

ತಂದೆ- ತಾಯಿ ಋಣ ಬಹಳ ದೊಡ್ಡದು. ಜೀವಿತಾವಧಿಯಲ್ಲಿ ಅವರ ಸೇವೆಯನ್ನು ಮಾಡುವುದು ಮಕ್ಕಳ ಆದ್ಯ ಕರ್ತವ್ಯ. ಹಾಗೆಯೇ ಮರಣಾನಂತರವೂ ಅವರ ಉತ್ತರಕ್ರಿಯೆಗಳನ್ನು ಮಾಡುವುದು ಅತೀ ಅವಶ್ಯ. ಮಾತಾಪಿತೃರ ಆಶೀರ್ವಾದ ಇದ್ದಾಗ ಭಗವಂತನು ನಮ್ಮ ಕೆಲಸ ಕಾರ್ಯಗಳಿಗೆ ಅನುಗ್ರಹ ನೀಡುತ್ತಾನೆ ಎಂದು ಉಡುಪಿ ಪೇಜಾವರ ಮಠಾಧೀಶ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ಹೆಬ್ರಿ, ಗಿಲ್ಲಾಳಿ ಗೋಶಾಲೆ, ಪೇಜಾವರ ಅಧೋಕ್ಷಜ ಮಠದ ವತಿಯಿಂದ ನಡೆದ ಮೋಕ್ಷಧಾಮ ಕಟ್ಟಡದ ಶಿಲಾನ್ಯಾಸ ನೆರವೇರಿಸಿ ಅವರು ಮಾತನಾಡಿದರು. ಗಿಲ್ಲಾಳಿ ಆಚಾರ್ಯ ಕುಟುಂಬಸ್ಥರು ದಾನವಾಗಿ ನೀಡಿದ ಗೋಶಾಲೆಯಲ್ಲಿ ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ ಕಾರ್ಯಗಳು ನಡೆಯುವಂತೆ, ಮೋಕ್ಷಧಾಮದಲ್ಲಿ ಪಿತೃ ಯಜ್ಞಕ್ಕೆ ಅನುಕೂಲವಾಗುವಂತೆ ಪ್ರಾಜ್ಞ ಸದನ, ಜನಾರ್ದನ ಧಾಮ, ವಾಸುದೇವ ಸದನ, ಅತಿಥಿ ಗೃಹವನ್ನೊಳಗೊಂಡ ಯೋಜನೆ ರೂಪಿಸಲಾಗಿದೆ. ಮೋಕ್ಷಧಾಮ ಕಟ್ಟಡಕ್ಕೆ ಕರ್ಣಾಟಕ ಬ್ಯಾಂಕ್ ವತಿಯಿಂದ ರೂ.15 ಲಕ್ಷ ಅನುದಾನ ದೊರೆತಿದೆ. ರೂ.75 ಲಕ್ಷ ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ಈ ಕಾರ್ಯಕ್ಕೆ ಎಲ್ಲರೂ ಸಹಕರಿಸುವ ಮೂಲಕ ದೇವರ ಅನುಗ್ರಹನು ಪಡೆಯೋಣ ಎಂದು ಶ್ರೀಪಾದರು ಹೇಳಿದರು.

## ಪವಿತ್ರ ಸ್ಥಳಗಳಲ್ಲಿ ಹೆಚ್ಚುತ್ತಿರುವ ಮದ್ಯಪಾನ: ಬಿಗಿ ಕ್ರಮಕ್ಕೆ ಒತ್ತಾಯ

• ಉದಯವಾಹಿನಿ ಕೊಣನೂರು

ಪುರಾಣ ಪ್ರಸಿದ್ಧ ರಾಮನಾಥಪುರದ ಕಾವೇರಿ ಸ್ನಾನ ಘಟ್ಟದ ಸ್ವಚ್ಛತೆಯ ಜೊತೆಗೆ ಇದೀಗ ಕ್ಷೇತ್ರದ ಪಾವಿತ್ರ್ಯಕ್ಕೆ ಧಕ್ಕೆ ತರುವ ಘಟನೆಗಳು ಹೆಚ್ಚುತ್ತಿದ್ದು, ಭಕ್ತರ ಬೇಸರ ವ್ಯಕ್ತಪಡಿಸುತ್ತಿದ್ದಾರೆ. ಇಂತಹ ವ್ಯಕ್ತಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸುತ್ತಿದ್ದಾರೆ.

ದಕ್ಷಿಣ ಭಾರತದ ಜೀವನದಿ ಕಾವೇರಿ ನದಿದಡದಲ್ಲಿ ದಕ್ಷಿಣ ಕಾಶಿ ಎಂದೇ ಪ್ರಖ್ಯಾತಿ ಪಡೆದಿರುವ ರಾಮೇಶ್ವರ, ಅಗಸ್ತೇಶ್ವರ, ಪ್ರಸನ್ನ ಸುಬ್ರಹ್ಮಣ್ಯಸ್ವಾಮಿ, ಪಟ್ಟಾಭಿರಾಮ, ಲಕ್ಷ್ಮೀ ನರಸಿಂಹಸ್ವಾಮಿ, ಲಕ್ಷ್ಮಣೇಶ್ವರ ಸೇರಿದಂತೆ ವಿವಿಧ ದೇವಾಲಗಳಿವೆ. ರಾಮನಾಥಪುರದ ಕಾವೇರಿ ಸ್ನಾನಘಟ್ಟದ ಪವಿತ್ರ ಸ್ಥಳಗಳಲ್ಲಿ ಹಾಡುಗಲೇ ಮದ್ಯಪಾನ ಮಾಡುತ್ತಿರುವುದು ಭಕ್ತರ ಆಕ್ರೋಶಕ್ಕೆ ಕಾರಣವಾಗಿದೆ. ವರ್ಷವಿಡೀ ರಥೋತ್ಸವ, ಉತ್ಸವ ಮತ್ತು ವಿಶೇಷ ಪೂಜಾ ಕಾರ್ಯಕ್ರಮಗಳು ಜರುಗುವ ಇಲ್ಲಿನ ನದಿಯಲ್ಲಿ ನಿತ್ಯವೂ ನೂರಾರು ಭಕ್ತರು ಸ್ನಾನ ಮಾಡುತ್ತಾರೆ. ಪುರಾಣ ಪ್ರಸಿದ್ಧ ವಹ್ನಿ ಪುಷ್ಕರಿಣಿ, ಗೋಗರ್ಭಶಿಲೆ, ಗಾಯಿತ್ರಿ ಶಿಲೆ, ಕುಮಾರಧಾರಾ ತೀರ್ಥ ಸ್ಥಳಗಳು ಕಾವೇರಿ ನದಿಯ ಮಧ್ಯಭಾಗದಲ್ಲಿದ್ದು, ಈ ಸ್ಥಳಗಳಿಗೆ ತೆರಳಿ ಪೂಜೆ ಸಲ್ಲಿಸಿದ ನಂತರ ಭಕ್ತರು ದೇವಾಲಯಗಳಿಗೆ ಭೇಟಿ ನೀಡುವ ಸಂಪ್ರದಾಯವಿದೆ. ಇಂತಹ ಸ್ಥಳಗಳಲ್ಲಿ ಮದ್ಯಪಾನ ಮಾಡುತ್ತಿರುವುದು ಸ್ಥಳೀಯರು ಮತ್ತು ಭಕ್ತರನ್ನು ಕೆರಳಿಸಿವೆ.

# ಪತ್ನಿಗೆ ಆ ಒಂದು ಪವರ್ ಕೊಡದ ಕಾರಣ ಬಾಸ್

ಕನ್ನಡದ ಬಾಸ್ ಸಿನಿಮಾ ಶುರುವಾದಾಗಿನಿಂದ ಒಂದಲ್ಲ ಒಂದು ವಿಚಾರಕ್ಕೆ ಸುದ್ದಿಯಾಗುತ್ತಲೇ ಇದೆ. ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಆರೋಪದಲ್ಲಿರುವ ದರ್ಶನ್‌ಗೆ ಈ ಸಿನಿಮಾ ವಿಚಾರ ಮತ್ತೊಂದು ತಲೆ ನೋವಾಗಿ ಪರಿಣಮಿಸಿದೆ. ಈಗ ಈ ಸಿನಿಮಾ ಸಂಬಂಧ ಕೋರ್ಟ್‌ನಲ್ಲಿ ದರ್ಶನ್‌ಗೆ ಹಿನ್ನಡೆಯಾಗೋ ಸಾಧ್ಯತೆ ಇದೆ ಎನ್ನಲಾಗ್ತಿದೆ.



ಸದ್ಯ ಬಾಸ್ ಸಿನಿಮಾ ಕೇಸ್‌ನಲ್ಲಿ ಹಿನ್ನಡೆಯಾಗೋ ಭಯದಲ್ಲಿದ್ದಾರಂತೆ ದರ್ಶನ್. ಬಾಸ್ ಸಿನಿಮಾ ರೇಣುಕಾಸ್ವಾಮಿ ಕೊಲೆ ಪ್ರಕರಣ ಹೋಲುವಂತಿದೆ. ರೇಣುಕಾಸ್ವಾಮಿ ಕೊಲೆ ಪ್ರಕರಣ ಇನ್ನೂ ಕೂಡಾ ಕೋರ್ಟ್‌ನಲ್ಲಿದೆ. ಬಾಸ್ ಸಿನಿಮಾ ರಿಲೀಸ್ ಆದರೆ ನಮಗೆ ಧಕ್ಕೆಯಾಗುತ್ತೆ ಎಂದು ಬಾಸ್ ಸಿನಿಮಾ ವಿರುದ್ಧ ನಟ ಕೋರ್ಟ್ ಮೊರೆ ಹೋಗಿ ಸ್ಟೇ ತಂದಿದ್ದರು. ಬಾಸ್ ಸಿನಿಮಾ ಸ್ಟೇ ಪ್ರಕರಣದಲ್ಲಿ ಮೊದಲ ವಾದಿಯಾಗಿ ದರ್ಶನ್ 2ನೇ ವಾದಿಯಾಗಿ ವಿಜಯಲಕ್ಷ್ಮಿ ಇದ್ದರು. ವಕಾಲತ್ತಿಗೆ ಹಾಗೂ ವಾದ ಪತ್ರಕ್ಕೆ ಮೊದಲ ವಾದಿ ದರ್ಶನ್ ಸಹಿಯೇ ಹಾಕಿಲ್ಲ.

ದರ್ಶನ್ ಸಹಿ ಇಲ್ಲದ ಕಾರಣ ಕೋರ್ಟ್‌ನಲ್ಲಿ ಈ ವಿಚಾರವಾಗಿ ಹಿನ್ನಡೆಯಾಗೋ ಸಾಧ್ಯತೆ ಇದೆ. ಪ್ರಕರಣದ ವಿಚಾವಾಗಿ ಪತ್ನಿಗೆ ಪವರ್ ಅಫ್ ಅಟಾರ್ನಿಯನ್ನು ದರ್ಶನ್ ಕೊಟ್ಟಿಲ್ಲ ಎನ್ನಲಾಗಿದೆ.

ಮೊದಲ ವಾದಿಯ ಸಹಿ ಇಲ್ಲದ ಕಾರಣ ಕೇಸ್‌ನಲ್ಲಿ ಹಿನ್ನಡೆಯಾಗುವ ಭೀತಿ ಇದೆ ಎನ್ನಲಾಗಿದೆ. ದರ್ಶನ್ ಸಹಿ ವಿಚಾರವನ್ನೆ ಮುಂದಿಟ್ಟುಕೊಂಡು ಬಾಸ್ ಸಿನಿಮಾ ವಕೀಲರು ವಾದ ಮಾಡಿದ್ದಾರೆ ಎನ್ನಲಾಗಿದೆ. ತನ್ನ ಟೀಸರ್‌ನಿಂದಲೇ ಬೃಹತ್ ವಿವಾದ ಸೃಷ್ಟಿಸಿದ್ದ 'ಬಾಸ್' ಚಿತ್ರಕ್ಕೆ ಕೋರ್ಟ್ ತಡೆ ನೀಡಿದೆ. ಚಾಲೆಂಜಿಂಗ್ ಸ್ಟಾರ್ ದರ್ಶನ್ ಹಾಗೂ ರೇಣುಕಾಸ್ವಾಮಿ ಕೊಲೆ ಕೇಸ್‌ನಂತಹ ಕಥಾ ಹಂದರವನ್ನು ಈ ಸಿನಿಮಾದಲ್ಲಿ ಚಿತ್ರೀಕರಿಸಲಾಗಿತ್ತು ಎನ್ನಲಾಗಿತ್ತು. ಈ ಸಿನಿಮಾದ ಟೀಸರ್ ರಿಲೀಸ್ ಆಗ್ತಿದ್ದಂತೆ ದರ್ಶನ್ ಅಭಿಮಾನಿಗಳು ಒಮ್ಮೆ ಬೆಚ್ಚಿ ಬಿದ್ದಿದ್ದರು.

ದರ್ಶನ್ ಪತ್ನಿ ವಿಜಯಲಕ್ಷ್ಮಿ ಸೇರಿದಂತೆ ದರ್ಶನ್ ಆಪ್ತರು ವಿರೋಧಿಸಿದ್ದರು. ಈ ಸಿನಿಮಾ ರಿಲೀಸ್‌ಗೆ ತಡೆ ನೀಡಬೇಕು ಅಂತ ಕೋರಿ ದರ್ಶನ್ ಪತ್ನಿ ವಿಜಯಲಕ್ಷ್ಮೀ ಕೋರ್ಟ್ ಮೆಟ್ಟಿಲೇರಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ ಬೆಂಗಳೂರಿನ 17ನೇ ಸಿಟಿ ಸಿವಿಲ್ ಕೋರ್ಟ್ ಈ ಚಿತ್ರಕ್ಕೆ ತಡೆ ನೀಡಿದೆ.

# ಡಿವೋರ್ಸ್ ಕೊಟ್ಟಿದ್ದಕ್ಕೆ ನನಗೆ ಪಶ್ಚಾತ್ತಾಪ ಇಲ್ಲ!



ಕೊನೆಗೂ ಮೌನ ಮುರಿದ ನಟಿ

ಕನ್ನಡ, ತೆಲುಗು, ತಮಿಳು ಸೇರಿದಂತೆ ಹಲವು ಭಾಷೆಗಳಲ್ಲಿ ನಾಯಕಿಯಾಗಿ ನಟಿಸಿದ್ದ ನಟಿ ಹನ್ಸಿಕಾ ಮೋಟ್ವಾನಿ ತಮ್ಮ ನಾಲ್ಕು ವರ್ಷದ ದಾಂಪತ್ಯಕ್ಕೆ ತೆರೆ ಎಳೆದ ಬಳಿಕ ಮೊದಲ ಬಾರಿಗೆ ಸಾರ್ವಜನಿಕವಾಗಿ ಮಾತನಾಡಿದ್ದಾರೆ. ಹಲವು ಭಾಷೆಗಳಲ್ಲಿ ನಟಿಸಿ ಅಭಿಮಾನಿಗಳ ಮನಸೆಳೆದಿರುವ ಈ ನಟಿ, ಇತ್ತೀಚಿನ ಪಾಡ್ ಕಾಸ್ಟ್ ಒಂದರಲ್ಲಿ ತಮ್ಮ ಜೀವನದ ಕಠಿಣ ನಿರ್ಧಾರದ ಬಗ್ಗೆ ಅನೇಕ ವಿಚಾರಗಳನ್ನು ಹಂಚಿಕೊಂಡಿದ್ದಾರೆ.

ಪಾಡ್‌ಕಾಸ್ಟ್ ಒಂದರಲ್ಲಿ ಮಾತನಾಡಿದ ಹನ್ಸಿಕಾ ಇಷ್ಟವಿಲ್ಲದ ಸಂಬಂಧದಲ್ಲಿ ಸಿಲುಕಿ ನೋವನ್ನು ಅನುಭವಿಸುವುದಕ್ಕಿಂತ ಸರಿಯಾದ ಸಮಯದಲ್ಲಿ ಹೊರಬರುವುದೇ ಉತ್ತಮ ಎಂದು ಹೇಳಿದ್ದಾರೆ. ಜೊತೆಗೆ ನಾವು ತಪ್ಪು ರೈಲನ್ನು ಹತ್ತಿದ್ದರೆ ಗುರಿ ತಲುಪುವವರೆಗೆ ಪ್ರಯಾಣಿಸಬೇಕೆಂಬ ನಿಯಮವಿಲ್ಲ, ಮಧ್ಯದಲ್ಲೇ ಇಳಿದು ನವ ಜೀವನ ಆರಂಭಿಸುವುದೂ ಬುದ್ಧಿವಂತಿಕೆ ಎಂದು ನಟಿ ಹೇಳಿದ್ದಾರೆ. 2026ರ ಮಾರ್ಚ್ ತಿಂಗಳಲ್ಲಿ ಹನ್ಸಿಕಾ ಮತ್ತು ಸೊಹೈಲ್ ಖತುರಿಯಾ ಅವರ ವಿಚ್ಛೇದನ ಪ್ರಕ್ರಿಯೆ ಅಧಿಕೃತವಾಗಿ ಅಂತ್ಯಗೊಂಡಿತ್ತು. ಈ ನಿರ್ಧಾರ ಬಗ್ಗೆ ಮಾತನಾಡಿದ ಅವರು, ನನ್ನ ನಿರ್ಧಾರದ ಬಗ್ಗೆ ನನಗೆ ಯಾವುದೇ ರೀತಿಯ ಪಶ್ಚಾತ್ತಾಪವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ತಪ್ಪು ನಿರ್ಧಾರವನ್ನು ಮುಂದುವರಿಸುವುದಕ್ಕಿಂತ ಅದನ್ನು ಅಲ್ಲಿ ನಿಲ್ಲಿಸುವುದೇ ಉತ್ತಮ ಎಂಬ ನಂಬಿಕೆಯಲ್ಲಿ ಈ ಹೆಜ್ಜೆ ಇಟ್ಟಿದ್ದಾಗಿ ಹೇಳಿದ್ದಾರೆ.

ಹಾಗೆಯೇ ವಿಚ್ಛೇದನದ ನಂತರ ಮಾಧ್ಯಮಗಳಲ್ಲಿ ಹರಿದಾಡುವ ಕ್ಲಿಕ್‌ಬೈಟ್ ಸುದ್ದಿಗಳ ಬಗ್ಗೆ ನಾನೇನು ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ. ತಮ್ಮ ವೈಯಕ್ತಿಕ ಜೀವನದ ಬಗ್ಗೆ ಯಾರಿಗೂ ವಿವರ ನೀಡುವ ಅಗತ್ಯವಿಲ್ಲ ಎಂದು ಹನ್ಸಿಕಾ ಹೇಳಿದ್ದಾರೆ. ಇಬ್ಬರು ವ್ಯಕ್ತಿಗಳ ನಡುವೆ ನಡೆಯುವ ವಿಷಯಗಳು ಅವರಿಗೇ ಸೇರಿದ್ದು, ಆ ರಹಸ್ಯತೆ ಕಾಪಾಡುವುದು ಉತ್ತಮ ಎಂದು ಹೇಳಿದ್ದಾರೆ. ಈ ಕಠಿಣ ಸಂದರ್ಭಗಳಲ್ಲಿ ತಮ್ಮ ಕುಟುಂಬವೇ ತಮಗೆ ಶಕ್ತಿ ಎಂದು ಹನ್ಸಿಕಾ ಹೇಳಿದ್ದಾರೆ. ತಾಯಿ ಮತ್ತು ಸಹೋದರ ನೀಡಿದ ಬೆಂಬಲ, ಆ ನೋವುಗಳು ಅಲೆಮಾರಿ ದಿನಗಳಲ್ಲಿ ತಮ್ಮನ್ನು ಧೈರ್ಯದಿಂದ ಮುನ್ನಡೆಸಿದವು ಎಂದು ನಟಿ ನೆನೆಸಿಕೊಂಡರು. ಸದಾ ನಗುನಗುತ್ತಾ ಇರುವ ತಮಗೆ ಆ ದಿನಗಳಲ್ಲಿ ಎದುರಾದ ಮೌನ ಮತ್ತು ನೋವು, ಕುಟುಂಬದವರಿಗೂ ಆತಂಕ ತಂದಿತ್ತು ಎಂದು ಅವರು ಭಾವನಾತ್ಮಕವಾಗಿ ಹೇಳಿದ್ದಾರೆ.

# ಟಾಕ್ಸಿಕ್ ಪಾತ್ರದ ಬಗ್ಗೆ ಕಿಯಾರಾ ಮಾತು



ಕಿಯಾರಾ ಅಡ್ವಾಣಿ, ತಮ್ಮ ಸಿನಿಮಾ, ಖಾಸಗಿ ಜೀವನ, ತಾಯ್ತನ ಇನ್ನೂ ಹಲವು ವಿಷಯಗಳ ಬಗ್ಗೆ ಮಾತನಾಡಿದ್ದಾರೆ. ಇದೇ ವೇಳೆ ಅವರು 'ಟಾಕ್ಸಿಕ್' ಸಿನಿಮಾದ ತಮ್ಮ ಪಾತ್ರದ ಬಗ್ಗೆಯೂ ಮಾತನಾಡಿದ್ದಾರೆ. ಅವರು ಮಾತುಗಳಿಂದ 'ಟಾಕ್ಸಿಕ್' ಸಿನಿಮಾದ ಅವರ ನಾಡಿಯಾ ಪಾತ್ರ ಬಹಳ ಭಿನ್ನವಾದ ಮತ್ತು ಸವಾಲಿನ ಪಾತ್ರ ಹಾಗೂ ಅದು ಮಾಸ್ ಮಸಾಲ ಸಿನಿಮಾದ ನಾಯಕಿಯ ಪಾತ್ರದಂತೆ ಖಂಡಿತ ಇಲ್ಲ ಎಂಬುದು ತಿಳಿಯುತ್ತಿದೆ. ಯಶ್ ನಟನೆಯ 'ಟಾಕ್ಸಿಕ್' ಸಿನಿಮಾ ಭಾರತೀಯ ಚಿತ್ರರಂಗದಲ್ಲಿ ಸದ್ಯಕ್ಕೆ ಬಹು ನಿರೀಕ್ಷಿತ ಸಿನಿಮಾ ಎನಿಸಿಕೊಂಡಿದೆ. ಮಾರ್ಚ್ 19ರಂದು ಬಿಡುಗಡೆ ಆಗಬೇಕಿದ್ದ ಸಿನಿಮಾ ಇದೀಗ ಜೂನ್ 4ಕ್ಕೆ ಬಿಡುಗಡೆ ಮುಂದೂಡಿಕೊಂಡಿದ್ದು, ಸಿನಿಮಾದ ಪ್ರಚಾರ ಇದೀಗ ನಿಧಾನಕ್ಕೆ ಆರಂಭವಾಗಿದೆ. 'ರಾಮಾಯಣ' ಪ್ರಚಾರಕ್ಕಾಗಿ ಲಾಸ್ ಏಂಜಲ್ಸ್‌ನ ಸಿನಿಮಾಕಾನ್ 2026ನಲ್ಲಿ ಭಾಗಿ ಆಗಿರುವ ಯಶ್ ಅವರಿಗೆ 'ಟಾಕ್ಸಿಕ್' ಸಿನಿಮಾದ ಬಗ್ಗೆ ಬಹಳ ಪ್ರಶ್ನೆಗಳು ಎದುರಾಗಿದ್ದು, ಯಶ್ ಸಹ 'ಟಾಕ್ಸಿಕ್' ಬಗ್ಗೆ ಕುತೂಹಲಕಾರಿ ಅಂಶಗಳನ್ನು ಬಿಟ್ಟುಕೊಟ್ಟಿದ್ದಾರೆ. ಇದೀಗ ಪ್ರತಿಷ್ಠಿತ ಬ್ರ್ಯಾಂಡ್ ಕೊಲ್ಯಾಬರೇಷನ್‌ನಲ್ಲಿ ನಟಿ ಕಿಯಾರಾ ಅಡ್ವಾಣಿ 'ಟಾಕ್ಸಿಕ್' ಸಿನಿಮಾದ ಬಗ್ಗೆ ಮಾತನಾಡಿದ್ದಾರೆ.

ಕಿಯಾರಾ ಅಡ್ವಾಣಿ, ಇತ್ತೀಚೆಗಷ್ಟೆ ಬ್ರ್ಯಾಂಡ್ ಶೂಟ್ ಒಂದರಲ್ಲಿ ಭಾಗವಹಿಸಿದ್ದ ಕಿಯಾರಾ ಅಡ್ವಾಣಿ, ತಮ್ಮ ಸಿನಿಮಾ, ಖಾಸಗಿ ಜೀವನ, ತಾಯ್ತನ ಇನ್ನೂ ಹಲವು ವಿಷಯಗಳ ಬಗ್ಗೆ ಮಾತನಾಡಿದ್ದಾರೆ.

# ಕನ್ನಡದ ಈ ಸ್ಟಾರ್‌ಗೆ ವಯಸ್ಸೇ ಆಗಲ್ವಾ

ಲವ್ಲಿಸ್ಟಾರ್ ಪ್ರೇಮ್ ಅವರಿಗೆ 51 ವರ್ಷ ಆಗಿದೆ. ಆದರೆ, ಹಾಗೆ ಅನಿಸೋದೇ ಇಲ್ಲ. ಅಷ್ಟೆ ಫಿಟ್ ಆ್ಯಂಡ್ ಫೈನ್ ಆಗಿದ್ದಾರೆ.

ಎಲ್ಲೂ ವಯಸ್ಸಾಗಿದೆ ಅನಿಸೋದಿಲ್ಲ. ಅಷ್ಟು ಹ್ಯಾಂಡ್ಸಮ್ ಆಗಿಯೆ ಇನ್ನು ಇದ್ದಾರೆ. ವಿಶೇಷವೆಂದ್ರೆ ಮಗಳು ಅಮೃತಾ ಪ್ರೇಮ್ ಕೂಡ ಇದೀಗ ನಾಯಕಿ ಆಗಿದ್ದಾರೆ. ಮಗ ಏಕಾಂತ್ ಕೂಡ ಗುರು ಶಿಷ್ಯರು ಚಿತ್ರದಲ್ಲಿ ನಟಿಸಿದ್ದಾರೆ. ಸಿನಿಮಾರಂಗಕ್ಕೆ ಮಕ್ಕಳೂ ಎಂಟ್ರಿ ಕೊಟ್ಟಾಗಿದೆ. ಲವ್ಲಿ ಸ್ಟಾರ್ ಪ್ರೇಮ್ ತಮಗೆ ಇಷ್ಟವಾಗೋ ಕಥೆಗಳು ಮತ್ತು ಪಾತ್ರಗಳನ್ನ ಮಾಡ್ತಾನೇ ಬಂದಿದ್ದಾರೆ.

**ಡಿ ಡಿ ಢಿಕ್ಕಿ ಸಿನಿಮಾ:** ಡಿ ಡಿ ಢಿಕ್ಕಿ ಚಿತ್ರವನ್ನ ರಂಜನಿ ರಾಘವನ್ ಡೈರೆಕ್ಷನ್ ಮಾಡಿದ್ದಾರೆ. ಇದು ಇವರ ಮೊದಲ ಚಿತ್ರವೇ ಆಗಿದೆ. ಇಳಯರಾಜಾ ಸಂಗೀತದ ಈ ಚಿತ್ರದ ಕಥೆ ಚೆನ್ನಾಗಿದೆ. ಹಳ್ಳಿಯಿಂದ ಬೆಂಗಳೂರಿಗೆ ದುಡಿಯಲು ಬರೋ ಅಪ್ಪ ಮತ್ತು ಮಗನ ಕಥೆಯ ಚಿತ್ರ ಇದಾಗಿದೆ. ಈ ಚಿತ್ರದಲ್ಲಿ ಗೆಳೆಯ ಗೋಲ್ಡನ್ ಸ್ಟಾರ್ ಗಣೇಶ್ ಪುತ್ರ ವಿಹಾನ್ ಮಗನ ಪಾತ್ರ ಮಾಡಿದ್ದಾರೆ. ಮಗನ ರೀತಿನೇ ಪ್ರೇಮ್ ಕೂಡ ಇಲ್ಲಿ ನೋಡಿಕೊಂಡಿದ್ದಾರೆ. ಅದೇ ಫೀಲ್ ಅಲ್ಲಿಯೇ ಸಿನಿಮಾ ಕೂಡ ಮಾಡಿದ್ದಾರೆ.



**ಸ್ಪಾರ್ಕ್ ಅಲ್ಲೂ ನಟನೆ:** ಲವ್ಲಿಸ್ಟಾರ್ ಪ್ರೇಮ್ ಇನ್ನೂ ಒಂದು ಚಿತ್ರ ಮಾಡಿದ್ದಾರೆ. ಸ್ಪಾರ್ಕ್ ಅನ್ನುವ ಈ ಚಿತ್ರದಲ್ಲಿ ಇವರ ಲುಕ್ ಮತ್ತು ಫೀಲ್ ಎರಡೂ ಬೇರೆ ಇದೆ.

ಈ ಚಿತ್ರದಲ್ಲಿ ಉಪೇಂದ್ರ ಅವರ ಅಣ್ಣನ ಮಗ ನಿರಂಜನ್ ಸುಧೀಂದ್ರ ಇದ್ದಾರೆ. ಈ ಚಿತ್ರ ತಂಡದಿಂದಲೂ ಲವ್ಲಿಸ್ಟಾರ್ ಪ್ರೇಮ್ ಅವರಿಗೆ 50ನೇ ಜನ್ಮ ದಿನದ ಶುಭಾಶಯ ತಿಳಿಸಲಾಗಿದೆ. ಲವ್ಲಿಸ್ಟಾರ್ ಪ್ರೇಮ್ ಕೇವಲ ಸಿನಿಮಾಗಳನ್ನ ಮಾಡ್ತಿಲ್ಲ.ಬದಲಾಗಿ ರಿಯಾಲಿಟಿ ಶೋಗಳ ತೀರ್ಪುಗಾರರು ಆಗಿರುತ್ತಾರೆ. ಸದ್ಯದ ತಾಜಾ ಉದಾಹರಣೆ ಅಂದ್ರೆ ಅದು ಜೋಡಿ ನಂಬರ್-1ಶೋದ ತೀರ್ಪುಗಾರರೇ ಆಗಿದ್ದಾರೆ.

# 2 ವರ್ಷದ ಕ್ಯಾನ್ಸರ್ ಫೈಟ್, ಖ್ಯಾತ ನಟ ಸಾವು

ಹಿರಿಯ ಗಾಯಕಿ ಆಶಾ ಭೋಸ್ಲೆ ನಿಧನರಾಗಿ ಒಂದು ವಾರವೂ ಆಗಿಲ್ಲ. ಅವರ ಸಾವಿನ ಆಘಾತದಿಂದ ಜನರು ಇನ್ನೂ ಹೊರಬರುತ್ತಿರುವಾಗಲೇ, ನಟನೊಬ್ಬನ ಸಾವಿನ ಸುದ್ದಿ ಬಂದಿದೆ. ನಲವತ್ತನೇ ವಯಸ್ಸಿನಲ್ಲಿ ಈ ಟಿವಿ ನಟ ನಿಧನರಾಗಿದ್ದಾರೆ. ಇದು ಕಿರುತೆರೆ ಸಂಚಲನ ಮೂಡಿಸಿದೆ.

ಸೀರಿಯಲ್ ನಟ ಸಿದ್ಧಾರ್ಥ್ ವೇಣುಗೋಪಾಲ್ ಕ್ಯಾನ್ಸರ್ ನಿಂದ ನಿಧನರಾಗಿದ್ದಾರೆ. ಕಳೆದ ಎರಡು ವರ್ಷಗಳಿಂದ ಅವರು ಕ್ಯಾನ್ಸರ್ ವಿರುದ್ಧ ಹೋರಾಡುತ್ತಿದ್ದರು. ಆದರೆ ಈಗ ಅವರು ಈ ಹೋರಾಟದಲ್ಲಿ ಸೋತಿದ್ದಾರೆ. ಅವರ ಸಾವಿನ ಸುದ್ದಿಯನ್ನು ನಟಿ ಸೀಮಾ ಜಿ ನಾಯರ್ ನೀಡಿದ್ದಾರೆ. ಕ್ಯಾನ್ಸರ್ ಚಿಕಿತ್ಸೆ ಪ್ರಾರಂಭವಾದಾಗಿನಿಂದ ಸೀಮಾ ಸಿದ್ಧಾರ್ಥ್ ಅವರೊಂದಿಗೆ ನಿರಂತರವಾಗಿ ಇದ್ದಾರೆ. ಜನಪ್ರಿಯ ಟಿವಿ ನಟ ಸಿದ್ಧಾರ್ಥ್ ವೇಣುಗೋಪಾಲ್ ಈಗ ನೋವಿಲ್ಲದ ಲೋಕಕ್ಕೆ ಹೋಗಿದ್ದಾರೆ ಎಂದು ಅವರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

ಸೀಮಾ ಈ ಪೋಸ್ಟ್‌ನಲ್ಲಿ ತಮ್ಮ ದುಃಖವನ್ನು ವ್ಯಕ್ತಪಡಿಸಿದ್ದಾರೆ. ಅವರು, ಎಲ್ಲಾ ಭರವಸೆ ಹೋಗಿದೆ. ಕಳೆದ 2 ವರ್ಷಗಳಿಂದ ನಾನು ನಿಮಗಾಗಿ ಹೋರಾಡುತ್ತಿದ್ದೇನೆ. ನನ್ನ ಮನಸ್ಸು ಮತ್ತು ದೇಹವು ದಣಿದಿದ್ದರೂ, ನಾನು ನಿಮ್ಮ ಜೀವವನ್ನು ಉಳಿಸಲು ಓಡುತ್ತಲೇ ಇದ್ದೆ. ಇಂದು, ನೀವು ಇನ್ನು ಮುಂದೆ ಬಳಲಬಾರದು ಎಂದು ದೇವರು ನಿರ್ಧರಿಸಿದ್ದಾನೆ. ಸಿದ್ಧಾರ್ಥ್, ನಾನು ಇದನ್ನು ಸಹಿಸಲಾರೆ, ನಾನು ಸಂಪೂರ್ಣವಾಗಿ ದಣಿದಿದ್ದೇನೆ ಎಂದು ಬರೆದುಕೊಂಡಿದ್ದಾರೆ.



ಸಿದ್ಧಾರ್ಥ್ ಮಲಯಾಳಂ ಟಿವಿ ಉದ್ಯಮದಲ್ಲಿ ಪ್ರಸಿದ್ಧ ನಟರಾಗಿದ್ದರು. ತ್ರಿಶೂರ್‌ನ ಚಾಲಕುಡಿ ನಿವಾಸಿಯಾದ ಸಿದ್ಧಾರ್ಥ್ ಕಾಲೇಜು ದಿನಗಳಿಂದಲೇ ನಟನೆಯ ಬಗ್ಗೆ ಒಲವು ಬೆಳೆಸಿಕೊಂಡಿದ್ದರು. ವೃತ್ತಿಪರ ರಂಗಭೂಮಿಯಲ್ಲೂ ಕೆಲಸ ಮಾಡಿದ್ದರು. ಅವರು ಸುದ್ದಿ ನಿರೂಪಕರಾಗಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು. ನಂತರ, ನಿರ್ಮಾಪಕ ಅರುಣ್ ಘೋಷ್ ಅವರ ಸಹಾಯದಿಂದ, ಅವರು ಟಿವಿ ಧಾರಾವಾಹಿಗಳಿಗೆ ಪಾದಾರ್ಪಣೆ ಮಾಡಿದರು. ಅವರು 'ಕಸ್ತೂರಿಮಾನ್' ಮತ್ತು 'ಭಾಗ್ಯಜಾತಕಂ' ನಂತಹ ಧಾರಾವಾಹಿಗಳಲ್ಲಿ ತಮ್ಮ ಛಾಪು ಮೂಡಿಸಿದರು.

ನಟ ಕಿಶೋರ್ ಸತ್ಯ ಕೂಡ ಶ್ರದ್ಧಾಂಜಲಿ ಸಲ್ಲಿಸಿದರು, ಸಿದ್ಧಾರ್ಥ್ ಅವರ ಹೋರಾಟ ಮತ್ತು ಚಿಕಿತ್ಸೆಯ ಸಮಯದಲ್ಲಿ ಅವರು ಪಡೆದ ಬೆಂಬಲವನ್ನು ನೆನಪಿಸಿಕೊಂಡರು. ಕಿಶೋರ್ ಹೇಳಿದರು, ಮತ್ತೊಬ್ಬ ನಟ ನಮ್ಮನ್ನು ಬೇಗನೆ ಅಗಲಿದ್ದಾರೆ. ಸಿದ್ಧಾರ್ಥ್ ವೇಣುಗೋಪಾಲ್ ತಮ್ಮ ಟಿವಿ ಧಾರಾವಾಹಿಗಳಿಂದಾಗಿ ಪ್ರೇಕ್ಷಕರಿಗೆ ಪರಿಚಿತ ಮುಖವಾಗಿದ್ದರು. ಅವರು ಕೆಲವು ಸಮಯದಿಂದ ಕ್ಯಾನ್ಸರ್ ವಿರುದ್ಧ ಹೋರಾಡುತ್ತಿದ್ದರು. ಸೀಮಾ ಜಿ. ನಾಯರ್ ಅವರ ಆರೋಗ್ಯವನ್ನು ನೋಡಿಕೊಳ್ಳುತ್ತಿದ್ದರು. ಸಿದ್ಧಾರ್ಥ್ ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ನಾನು ಪ್ರಾರ್ಥಿಸುತ್ತೇನೆ ಎಂದು ಬರೆದುಕೊಂಡಿದ್ದಾರೆ.

# ಕ್ರಿಸ್ ಅಸಹಾಯಕತೆಯ ಕಥೆ

ಐಪಿಎಲ್ 2010 ರಲ್ಲಿ ಕೊಲ್ಕತ್ತಾ ನೈಟ್ ರೈಡರ್ಸ್ ಪರ ಆಡಿದ್ದ ಗೇಲ್ ಕಲೆಹಾಕಿದ್ದು ಕೇವಲ 292 ರನ್‌ಗಳು ಮಾತ್ರ. ಹೀಗಾಗಿ ಕೆಕೆಆರ್ ಅವರನ್ನು ತಂಡದಿಂದ ಬಿಡುಗಡೆ ಮಾಡಿತ್ತು. ಇತ್ತ 2011ರ ಐಪಿಎಲ್ ಹರಾಜಿನಲ್ಲಿ ಕಾಣಿಸಿಕೊಂಡ ಗೇಲ್ ಅವರನ್ನು ಯಾವುದೇ ಫ್ರಾಂಚೈಸಿ ಖರೀದಿಸಿರಲಿಲ್ಲ.

**ಜೀವನ ಬದಲಿಸಿದ ಒಂದು ಕಾಲ್:** ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಅವಕಾಶ ಕೈ ತಪ್ಪುತ್ತಿದ್ದಂತೆ ಕ್ರಿಸ್ ಗೇಲ್ ಅಂದಿನ ಐಪಿಎಲ್ ಅಧ್ಯಕ್ಷ ಲಲಿತ್ ಮೋದಿ ಅವರಿಗೆ ಕರೆ ಮಾಡಿದ್ದಾರೆ. ಅಲ್ಲದೆ ನನ್ನನ್ನೇಕೆ ಯಾರು ಖರೀದಿಸಿಲ್ಲ ಎಂದು ಪ್ರಶ್ನಿಸಿದ್ದಾರೆ. ಈ ವೇಳೆ ಲಲಿತ್ ಮೋದಿ ನೀಡಿದ ಉತ್ತರ ಪರ್ಫಾಮೆನ್ಸ್. ನೀನು ಚೆನ್ನಾಗಿ ಆಡಿಲ್ಲ, ಅದಕ್ಕೆ ಯಾರೂ ಖರೀದಿಸಿಲ್ಲ ಎಂಬ ಉತ್ತರ ನೀಡಿದ್ದಾರೆ. ಇದರಿಂದ ವಿಚಲಿತರಾದ ಕ್ರಿಸ್ ಗೇಲ್, ನನಗೆ ಅವಕಾಶ ಮಾಡಿಕೊಡಿ. ನನ್ನ ಮೇಲೆ ಸಾಕಷ್ಟು ಸಾಲವಿದೆ. ಆ ಸಾಲಗಳನ್ನು ಪಾವತಿಸಲು ನನಗೆ ಹಣದ ಅಗತ್ಯವಿದೆ. ಏನಾದರು ಮಾಡಿ ಒಂದು ಚಾನ್ಸ್ ಕೊಡಿಸುವಂತೆ ಲಲಿತ್ ಮೋದಿ ಅವರಲ್ಲಿ ಮನವಿ ಮಾಡಿದ್ದಾರೆ.

**ಕರೆ ಮಾಡಿದ ಲಲಿತ್ ಮೋದಿ:** ಕ್ರಿಸ್ ಗೇಲ್ ಅವರ ಸಂಕಷ್ಟ ಕೇಳಿ ಲಲಿತ್ ಮೋದಿ ಅವರು ಮೂರ್ನಾಲ್ಕು ಫ್ರಾಂಚೈಸಿಗಳನ್ನು ಸಂಪರ್ಕಿಸಿದ್ದಾರೆ. ಅಷ್ಟೇ ಅಲ್ಲದೆ ಅವರಿ ಅವಕಾಶ ನೀಡುವಂತೆ ಮನವಿ ಮಾಡಿದ್ದಾರೆ. ಆದರೆ ಎಲ್ಲಾ ಫ್ರಾಂಚೈಸಿಗಳು ಗೇಲ್ ಅವರನ್ನು ತಂಡಕ್ಕೆ ನಿರಾಕರಿಸಿದ್ದವು. ಅತ್ತ ವಿಂಡೀಸ್ ದಾಂಡಿಗನ ಖರೀದಿಗೆ ನಿರಾಕರಣೆ ವ್ಯಕ್ತವಾಗುತ್ತಲೇ ಲಲಿತ್ ಮೋದಿ, ಆರ್‌ಸಿಬಿ ಮಾಲೀಕ ವಿಜಯ್ ಮಲ್ಯ ಅವರಿಗೆ ಕರೆ ಮಾಡಿದ್ದಾರೆ.





ಗೇಲ್ ಜೀವನವನ್ನೇ ಬದಲಿಸಿದ ಆ ಒಂದು ಕರೆ!

**ಆರ್‌ಸಿಬಿಗೆ ಎಂಟ್ರಿ ಕೊಟ್ಟ 'ಬಾಸ್':** ಲಲಿತ್ ಮೋದಿ ಅವರು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಅಂದಿನ ಮಾಲೀಕ ವಿಜಯ್ ಮಲ್ಯ ಅವರಿಗೆ ಕರೆ ಮಾಡಿ ಕ್ರಿಸ್ ಗೇಲ್ ಅವರನ್ನು ಆಯ್ಕೆ ಮಾಡುವಂತೆ ಮನವಿ ಮಾಡಿದ್ದಾರೆ.

ಅದೇ ಸಮಯದಲ್ಲಿ ಆರ್‌ಸಿಬಿ ತಂಡದ ವೇಗಿ ಡಿರ್ಕ್ ನ್ಯಾನಸ್ ಗಾಯಗೊಂಡು ಟೂರ್ನಿಯಿಂದ ಹೊರಬಿದ್ದಿದ್ದರು. ಅವರ ಬದಲಿಗೆ ಗೇಲ್ ಅವರನ್ನು ತಂಡಕ್ಕೆ ಸೇರಿಸಿಕೊಳ್ಳಲು ಮಲ್ಯ ಒಪ್ಪಿಕೊಂಡರು. ಆದರೆ ಮಲ್ಯ ಅವರು ಅದಕ್ಕೊಂದು ಷರತ್ತು ಕೂಡ ಹಾಕಿದ್ದರು. ಅದೇನೆಂದರೆ ''ಕ್ರಿಸ್ ಗೇಲ್ ಚೆನ್ನಾಗಿ ಆಡಿದರೆ ಮಾತ್ರ ನಾನು ಹಣ ನೀಡುತ್ತೇನೆ''. ಇದಕ್ಕೆ ಒಪ್ಪಿದರೆ ನಾನು ತಂಡಕ್ಕೆ ಸೇರಿಸಿಕೊಳ್ಳುತ್ತೇನೆ ಎಂದು ವಿಜಯ ಮಲ್ಯ ಹೇಳಿದ್ದರು. ಇದಕ್ಕೆ ಲಲಿತ್ ಮೋದಿ ಒಪ್ಪಿಗೆ ಸೂಚಿಸಿದ್ದಾರೆ. ಅಲ್ಲದೆ ಕ್ರಿಸ್ ಗೇಲ್‌ಗೆ ಷರತ್ತಿನ ಬಗ್ಗೆ ತಿಳಿಸಿದ್ದಾರೆ. ಅದರಂತೆ ಕ್ರಿಸ್ ಗೇಲ್ ಆರ್‌ಸಿಬಿಗೆ ಎಂಟ್ರಿ ಕೊಟ್ಟಿದ್ದರು.

**ಇತಿಹಾಸ ಸೃಷ್ಟಿಸಿದ ಗೇಲ್:** ಆರ್‌ಸಿಬಿ ತಂಡಕ್ಕೆ ಸೇರಿದ ಮೊದಲ ಪಂದ್ಯದಲ್ಲೇ ಗೇಲ್ ತಮ್ಮ ಹಳೆಯ ತಂಡವಾದ ಕೆಕೆಆರ್ ವಿರುದ್ಧ ಭರ್ಜರಿ ಶತಕ ಸಿಡಿಸಿ ಅಬ್ಬರಿಸಿದರು. ಅಲ್ಲಿಂದ ಮುಂದೆ ಗೇಲ್ ಹಿಂದಿರುಗಿ ನೋಡಲೇ ಇಲ್ಲ. ಆ ಸೀಸನ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿ 'ಆರೆಂಜ್ ಕ್ಯಾಪ್' ಗೆದ್ದಿದ್ದಲ್ಲದೆ, ಆರ್‌ಸಿಬಿ ತಂಡದ ಅವಿಭಾಜ್ಯ ಅಂಗವಾಗಿ ಗುರುತಿಸಿಕೊಂಡರು. ಅಂದರೆ ಆರ್‌ಸಿಬಿ ಪರ ಆಡಿದ ಮೊದಲ ಸೀಸನ್‌ನಲ್ಲೇ ಕ್ರಿಸ್ ಗೇಲ್ ಬರೋಬ್ಬರಿ 608 ರನ್ ಕಲೆಹಾಕಿ ವಿಜಯ ಮಲ್ಯ ಅವರ ಮನ ಗೆದ್ದರು. ಇದಾದ ಬಳಿಕ ಗೇಲ್ ಹಿಂತಿರುಗಿ ನೋಡಿಲ್ಲ.

ಕಾಡಿ ಬೇಡಿ ಪಡೆದ ಅವಕಾಶವನ್ನು ಬಳಸಿಕೊಂಡ ಕ್ರಿಸ್ ಗೇಲ್ 7 ವರ್ಷಗಳ ಕಾಲ ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ ಬ್ಯಾಟ್ ಬೀಸಿದರು. ಈ ವೇಳೆ 85 ಪಂದ್ಯಗಳನ್ನಾಡಿದ ಯೂನಿವರ್ಸ್ ಬಾಸ್ 5 ಶತಕಗಳೊಂದಿಗೆ ಒಟ್ಟು 3,420 ರನ್ ಗಳಿಸಿದರು. ಇದರ ನಡುವೆ, ಅಂದರೆ ಐಪಿಎಲ್ 2016 ಮತ್ತು 2017ರ ಸೀಸನ್‌ಗಳಲ್ಲಿ ಗೇಲ್ ಅವರ ಬ್ಯಾಟಿಂಗ್ ಫಾರ್ಮ್ ಕುಸಿಯಿತು. 2017ರ ಸೀಸನ್‌ನಲ್ಲಿ ಅವರು 9 ಇನ್ನಿಂಗ್ಸ್‌ಗಳಿಂದ ಕಲೆಹಾಕಿದ್ದು ಕೇವಲ 200 ರನ್ ಮಾತ್ರ. ಅಲ್ಲದೆ 2018ರ ಹರಾಜಿನ ವೇಳೆಗೆ ಗೇಲ್ ಅವರಿಗೆ 38 ವರ್ಷ ವಯಸ್ಸಾಗಿತ್ತು. ಆರ್‌ಸಿಬಿ ಫ್ರಾಂಚೈಸಿಯು ದೀರ್ಘಕಾಲದ ಭವಿಷ್ಯದ ದೃಷ್ಟಿಯಿಂದ ಯುವ ಆಟಗಾರರ ಮೇಲೆ ಹೂಡಿಕೆ ಮಾಡಲು ಬಯಸಿತ್ತು. ಹೀಗಾಗಿ ಕ್ರಿಸ್ ಗೇಲ್ ಅವರನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿ ರಿಲೀಸ್ ಮಾಡಿತು. ಇದಾದ ಬಳಿಕ ಪಂಜಾಬ್ ಕಿಂಗ್ಸ್ ತಂಡಕ್ಕೆ ಎಂಟ್ರಿ ಕೊಟ್ಟಿದ್ದ ಕ್ರಿಸ್ ಗೇಲ್ ಒಟ್ಟು 4 ವರ್ಷಗಳ ಕಾಲ (2018 ರಿಂದ 2021 ರವರೆಗೆ) ಆಡಿದರು. ಆನಂತರ ಅವರು ಐಪಿಎಲ್‌ಗೆ ಹೆಸರು ನೀಡಿರಲಿಲ್ಲ. ಇದರೊಂದಿಗೆ ಐಪಿಎಲ್‌ನಲ್ಲಿ ಕ್ರಿಸ್ ಗೇಲ್ ಯುಗಾಂತ್ಯವಾಯಿತು.

# ಗ್ರೀನ್ ಸಿಕ್ಸ್‌ಗೆ ಕಾರ್ ಡೆಂಟ್ ಸಿಕ್ತು 5 ಲಕ್ಷ ರೂ. ದೇಣಿಗೆ..!

ಐಪಿಎಲ್ ಅಂಗಳದಲ್ಲಿ ಕೊನೆಗೂ ಕ್ಯಾಮರೋನ್ ಗ್ರೀನ್ ಅವರ ಬ್ಯಾಟ್ ಸದ್ದು ಮಾಡಿದೆ. ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಗುಜರಾತ್ ಟೈಟಾನ್ಸ್ ವಿರುದ್ಧದ ಪಂದ್ಯದಲ್ಲಿ ಗ್ರೀನ್ ಸಿಡಿಸಿದ ಸಿಕ್ಸರ್ ಕೇವಲ ಬೌಂಡರಿ ಗೆರೆ ದಾಟಲಿಲ್ಲ,

ಬದಲಿಗೆ ಕ್ರೀಡಾಂಗಣದಲ್ಲಿ ಪ್ರದರ್ಶನಕ್ಕಿಟ್ಟಿದ್ದ ಹೊಸ ಟಾಟಾ ಸಿಯೆರಾ ಕಾರಿನ ಮೇಲೆಯೇ ಬಿದ್ದಿದೆ! ಈ ಅಮೋಘ ಸಿಕ್ಸರ್‌ನಿಂದಾಗಿ 5 ಲಕ್ಷ ರೂ. ದೇಣಿಗೆ ಸಂಗ್ರಹವಾಗಿದೆ. ಈ ಪಂದ್ಯದ 13ನೇ ಓವರ್‌ನಲ್ಲಿ ಗುಜರಾತ್ ವೇಗಿ ಅಶೋಕ್ ಶರ್ಮಾ ಎಸೆದ ಎಸೆತವನ್ನು ಕೆಕೆಆರ್ ದಾಂಡಿಗ ಕ್ಯಾಮರೋನ್ ಗ್ರೀನ್ ಅದ್ಭುತವಾಗಿ ಡೀಪ್ ಮಿಡ್-ವಿಕೆಟ್ ಕಡೆಗೆ ಫ್ಲಿಕ್ ಮಾಡಿದರು. ಗಾಳಿಯಲ್ಲಿ ತೇಲಿಬಂದ ಚೆಂಡು ನೇರವಾಗಿ ಬೌಂಡರಿ ಲೈನ್ ಆಚೆಗಿದ್ದ ಕಾರಿನ ಡೋರಿನ ಭಾಗಕ್ಕೆ ಅಪ್ಪಳಿಸಿತು. ಈ ಹೊಡೆತದ ತೀವ್ರತೆಗೆ ಕಾರಿನ ಬಾಡಿ ಮೇಲೆ ಗುಳಿ ಬಿದ್ದಿರುವುದು ಕ್ಯಾಮೆರಾಗಳಲ್ಲಿ ಸೆರೆಯಾಗಿದೆ.

**5 ಲಕ್ಷ ದೇಣಿಗೆ:** ಈ ಒಂದು ಸಿಕ್ಸರ್‌ನಿಂದ 5 ಲಕ್ಷ ರೂ. ದೇಣಿಗೆ ಸಂಗ್ರಹವಾಗಿದೆ ಎಂದರೆ ನಂಬಲೇಬೇಕು. ಹೌದು, ಟಾಟಾ ಕಂಪನಿಯು, ಬ್ಯಾಟರ್‌ಗಳು ಹೊಡೆಯುವ ಚೆಂಡು ನೇರವಾಗಿ ಕಾರಿಗೆ ಬಡಿದರೆ, ತಳಮಟ್ಟದ ಕ್ರಿಕೆಟ್ ಅಭಿವೃದ್ಧಿಗಾಗಿ 5 ಲಕ್ಷ ರೂಪಾಯಿಗಳನ್ನು ದೇಣಿಗೆಯಾಗಿ ನೀಡುವುದಾಗಿ ತಿಳಿಸಿದೆ.

ಅದರಂತೆ ಇದೀಗ ಗ್ರೀನ್ ಅವರ ಈ ಭರ್ಜರಿ ಸಿಕ್ಸರ್‌ನಿಂದ ತಳಮಟ್ಟದ ಕ್ರಿಕೆಟ್ ಅಭಿವೃದ್ಧಿಗೆ 5 ಲಕ್ಷ ರೂ. ಸಿಗಲಿದೆ. ಇನ್ನು ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಕೊಲ್ಕತ್ತಾ ನೈಟ್ ರೈಡರ್ಸ್ ತಂಡವು 20 ಓವರ್‌ಗಳಲ್ಲಿ 180 ರನ್ ಕಲೆಹಾಕಿದ್ದರು. ಈ ಗುರಿಯನ್ನು ಗುಜರಾತ್ ಟೈಟಾನ್ಸ್ ತಂಡವು 19.4 ಓವರ್‌ಗಳಲ್ಲಿ ಚೇಸ್ ಮಾಡಿ 5 ವಿಕೆಟ್‌ಗಳ ಜಯ ಸಾಧಿಸಿದೆ.



### ಬರ್ತ್ ಡೇ ಬಾಯ್ ಕೆಎಲ್ ರಾಹುಲ್ ಅರ್ಧಶತಕದ ಬಳಿಕ ಮಿಲ್ಲರ್ ಆರ್ಭಟ

# ರೋಚಕ ಪಂದ್ಯದಲ್ಲಿ ಡೆಲ್ಲಿ ಮೇಲುಗೈ

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಈ ಬಾರಿಯೂ ಕನ್ನಡಿಗ ಕೆಎಲ್ ರಾಹುಲ್ ಅವರದ್ದೇ ಹವಾ. ಅದರಲ್ಲೂ ಬರ್ತ್ ಡೇ ಸ್ಪೆಷಲ್ ಆಗಿ ಸೊಗಸಾದ ಅರ್ಧಶತಕ. ಅವರು ಔಟಾದ ಬಳಿಕ ಪಂದ್ಯದ ಮೇಲೆ ಹಿಡಿತ ಸಾಧಿಸಲು ಯತ್ನಿಸಿದ ಆರ್ ಸಿಬಿಗೆ ಮುಳುವಾಗಿದ್ದು ಡೇವಿಡ್ ಮಿಲ್ಲರ್! ಅಂತಿಮ ಓವರ್ ವರೆಗೂ ಸಾಗಿದ ರೋಮಾಂಚಕ ಪಂದ್ಯದಲ್ಲಿ ಅವರು ಹೊಡೆದ 2 ಸಿಕ್ಸರ್ ಗಳ ನೆರವಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿರುದ್ಧ 6 ವಿಕೆಟ್ ಗಳ ಜಯ ದಾಖಲಿಸಿತು.

ಈ ಮೂಲಕ ಆಡಿದ 5 ಪಂದ್ಯಗಳಲ್ಲಿ 3 ಗೆಲುವ ಸಂಪಾದಿಸಿದ ಅಕ್ಷರ್ ಪಟೇಲ್ ಬಳಗ 6 ಅಂಕಗಳೊಂದಿಗೆ ಐಪಿಎಲ್ ಅಂಕಪಟ್ಟಿಯಲ್ಲಿ 4ನೇ ಸ್ಥಾನಕ್ಕೇರಿದೆ. ಆರ್ ಸಿಬಿ ಪಂದ್ಯ ಸೋತರೂ 8 ಅಂಕಗಳೊಂದಿಗೆ 2ನೇ ಸ್ಥಾನದಲ್ಲಿ ಮುಂದುವರಿದಿದೆ.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಏಪ್ರಿಲ್ 18ರ ಭಾನುವಾರದಂದು ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ನಿಗದಿತ 20 ಓವರ್‌ಗಳಲ್ಲಿ 175 ರನ್ ಗಳನ್ನು ಗಳಿಸಿತು. ಇದಕ್ಕುತ್ತರವಾಗಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಇನ್ನೂ 1 ಎಸೆತಗಳು ಬಾಕಿ ಉಳಿದಿರುವಂತೆ 4 ವಿಕೆಟ್ ಕಳೆದುಕೊಂಡು ಜಯಭೇರಿ ಬಾರಿಸಿದರು.

**ಫಿಲ್ ಸಾಲ್ಟ್ ಅರ್ಧಶತಕ**

ಇದಕ್ಕೂ ಮೊದಲು ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಆರ್‌ಸಿಬಿಯ ಆರಂಭಿಕರಾದ ವಿರಾಟ್ ಕೊಹ್ಲಿ (13 ಎಸೆತದಲ್ಲಿ 19 ರನ್) ಮತ್ತು ಫಿಲ್ ಸಾಲ್ಟ್ (38 ಎಸೆತದಲ್ಲಿ 63 ರನ್) ಅವರು ಪವರ್ ಪ್ಲೇನಲ್ಲಿ ಓವರ್ ಗೆ 10 ರನ್ ನಂತೆ ರನ್ ಗಳಿಸ ತೊಡಗಿದರು. 6ನೇ ಓವರ್ ನಲ್ಲಿ ಉತ್ತಮವಾಗಿ ಆಡುತ್ತಿದ್ದ ವಿರಾಟ್ ವಿಕೆಟ್ ಪತನವಾಯಿತು.



ಆ ಬಳಿಕ ಫಿಲ್ ಸಾಲ್ಟ್ ಅವರು ಅರ್ಧಶತಕಕ್ಕಾಗಿ 30 ಎಸೆತಗಳನ್ನು ತೆಗೆದುಕೊಂಡರು. ದೇವದತ್ ಪಡಿಕ್ಕಲ್ (13 ಎಸೆತದಲ್ಲಿ 18 ರನ್) ಅವರ ಜೊತೆ ಎರಡನೇ ವಿಕೆಟ್ ಗೆ 47 ರನ್ ಗಳ ಜೊತೆಯಾಟವಾಡಿದರು. ತಂಡದ ಮೊತ್ತ 105 ಆಗಿದ್ದಾಗ ಫಿಲ್ ಸಾಲ್ಟ್ ವಿಕೆಟ್ ಪತನವಾಯಿತು. ಆ ಬಳಿಕ ಮಧ್ಯಮ ಕ್ರಮಾಂಕದಲ್ಲಿ ಎಲ್ಲಾ ಬ್ಯಾಟರ್‌ಗಳು ಇನ್ನಿಂಗ್ಸ್ ಕಟ್ಟಲು ವಿಫಲರಾದರು.

ಉತ್ತಮವಾಗಿ ಆಡುತ್ತಿದ್ದ ಟಿಂ ಡೇವಿಡ್ (17 ಎಸೆತಗಳಲ್ಲಿ 28) ಅವರು ಔಟಾದ ಬಳಿಕ ಅಂತೂ ವಿಕೆಟ್ ಗಳು ಪಟಪಟನೆ ಬಿದ್ದಿದ್ದರಿಂದ ತಂಡ ದೊಡ್ಡ ಮೊತ್ತ ಗಳಿಸಲು ಸಾಧ್ಯವಾಗಲಿಲ್ಲ.

ರಾಯಲ್ ಚಾಲೆಂಜರ್ಸ್ ಬೆಂಗಳೂರು 20 ಓವರ್ ಗಳಲ್ಲಿ 175/8, ಸಾಲ್ಟ್ 63(38), ಡೇವಿಡ್ 28(17) ಕೊಹ್ಲಿ 19(13), ಪಡಿಕ್ಕಲ್ 18(13), ಅಕ್ಷರ್ 18ಕ್ಕೆ 2, ಕುಲ್ದೀಪ್ 32ಕ್ಕೆ2, ಎನ್ ಗಿಡಿ 39ಕ್ಕೆ2, ಮುಕೇಶ್ 32ಕ್ಕೆ 1.

# ಧೋನಿ ಕಣಕ್ಕಿಳಿಯಲಿದ್ದಾರಾ

ಇಂಡಿಯನ್ ಪ್ರೀಮಿಯರ್ ಲೀಗ್‌ನ 27ನೇ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡಗಳು ಮುಖಾಮುಖಿಯಾಗಲಿದೆ. ಹೈದರಾಬಾದ್‌ನ ಉಪ್ಪಲ್ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ಪಂದ್ಯದಲ್ಲಿ ಮಹೇಂದ್ರ ಸಿಂಗ್ ಧೋನಿ ಕಣಕ್ಕಿಳಿಯಲಿದ್ದಾರಾ ಎಂಬುದೇ ಪ್ರಶ್ನೆ. ಏಕೆಂದರೆ ಈ ಬಾರಿಯ ಟೂರ್ನಿಯಲ್ಲಿ ಧೋನಿ ಒಂದೇ ಒಂದು ಪಂದ್ಯವಾಡಿಲ್ಲ. ಇದೀಗ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧದ ಪಂದ್ಯದಲ್ಲೂ ಅವರು ಆಡುವ ಸಾಧ್ಯತೆ ತೀರಾ ಕಡಿಮೆ ಎಂದು ವರದಿಯಾಗಿದೆ.

**ಗಾಯದ ಸಮಸ್ಯೆ:** ಸೀಸನ್ ಆರಂಭಕ್ಕೂ ಮುನ್ನ ತರಬೇತಿಯ ಅವಧಿಯಲ್ಲಿ ಉಂಟಾದ ಸ್ನಾಯು ಸೆಳೆತದಿಂದ ಧೋನಿ ಬಳಲುತ್ತಿದ್ದಾರೆ. ಇದೇ ಕಾರಣದಿಂದ ಅವರು ಈ ಆವೃತ್ತಿಯ ಮೊದಲ ಐದು ಪಂದ್ಯಗಳಿಂದ ಹೊರಗುಳಿದಿದ್ದರು. ಇಂದಿನ ಪಂದ್ಯಕ್ಕಾಗಿ ಅವರು ತಂಡದೊಂದಿಗೆ ಹೈದರಾಬಾದ್‌ಗೆ ಪ್ರಯಾಣಿಸಿದ್ದಾರಾದರೂ, ಅವರು ಸಂಪೂರ್ಣವಾಗಿ ಚೇತರಿಸಿಕೊಂಡಿಲ್ಲ ಎಂದು ತಿಳಿದುಬಂದಿದೆ.

**ನೆಟ್ಸ್‌ನಲ್ಲಿ ಬ್ಯಾಟಿಂಗ್ ಅಭ್ಯಾಸ:** ಶುಕ್ರವಾರ ಸಂಜೆ ಹೈದರಾಬಾದ್‌ನ ರಾಜೀವ್ ಗಾಂಧಿ ಕ್ರೀಡಾಂಗಣದಲ್ಲಿ ಧೋನಿ ಬ್ಯಾಟಿಂಗ್ ಅಭ್ಯಾಸ ನಡೆಸುತ್ತಿರುವುದು ಕಂಡುಬಂದಿದೆ. ಅವರು ಲಯಬದ್ಧವಾಗಿ ಬ್ಯಾಟ್ ಬೀಸುತ್ತಿರುವುದು ಅಭಿಮಾನಿಗಳಲ್ಲಿ ಆಶಾವಾದ ಮೂಡಿಸಿದೆಯಾದರೂ, ಟೂರ್ನಿಯ ದೀರ್ಘಾವಧಿಯನ್ನು ಗಮನದಲ್ಲಿಟ್ಟುಕೊಂಡು ಮ್ಯಾನೇಜ್‌ಮೆಂಟ್ ಅವರಿಗೆ ವಿಶ್ರಾಂತಿ ನೀಡಲು ನಿರ್ಧರಿಸಿದೆ.



**ಧೋನಿ ಬದಲು ಯಾರು:** ಧೋನಿ ಅವರ ಗೈರುಹಾಜರಿಯಲ್ಲಿ ಕೇರಳದ ಸ್ಟಾರ್ ಆಟಗಾರ ಸಂಜು ಸ್ಯಾಮ್ಸನ್ ವಿಕೆಟ್ ಕೀಪಿಂಗ್ ಜವಾಬ್ದಾರಿಯನ್ನು ಮುಂದುವರಿಸಲಿದ್ದಾರೆ. ಪ್ರಸ್ತುತ ಅಂಕಪಟ್ಟಿಯಲ್ಲಿ 8ನೇ ಸ್ಥಾನದಲ್ಲಿರುವ ಚೆನ್ನೈ ತಂಡಕ್ಕೆ ಇಂದಿನ ಪಂದ್ಯ ಗೆಲ್ಲುವುದು ಅತ್ಯಂತ ಅವಶ್ಯಕವಾಗಿದೆ.

**ವಾಪಸಾತಿ ಯಾವಾಗ:** ಮೂಲಗಳ ಪ್ರಕಾರ, ಏಪ್ರಿಲ್ 23 ರಂದು ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿರುವ ಮುಂಬೈ ಇಂಡಿಯನ್ಸ್ ವಿರುದ್ಧದ ಹೈ-ವೋಲ್ಟೇಜ್ ಪಂದ್ಯದ ಮೂಲಕ ಧೋನಿ ಮೈದಾನಕ್ಕೆ ಮರಳುವ ಸಾಧ್ಯತೆಯಿದೆ. ಹೀಗಾಗಿ ಥಲಾ ಕಂಬ್ಯಾಕ್‌ಗಾಗಿ ಸಿಎಸ್‌ಕೆ ಅಭಿಮಾನಿಗಳು ಮತ್ತಷ್ಟು ದಿನಗಳು ಕಾಯಬೇಕಾಗಿ ಬರಬಹುದು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966